
# ದಿವ್ಯ ಸಮನ್ವಯ

## ಆತ್ಮನೊಂದಿಗೆ ಪರಮ ಪ್ರಭುವಿನ ಪ್ರೇಮಾಲಿಂಗನ



ಸ್ವಾಮಿ ಭಕ್ತಿ ರಕ್ಷಕ ಶ್ರೀಧರ

# ದಿವ್ಯ ಸಮನ್ವಯ
## ಆತ್ಮನೊಂದಿಗೆ ಪರಮಪ್ರಭುವಿನ ಪ್ರೇಮಾಲಿಂಗನ

ಸ್ವಾಮಿ ಭಕ್ತಿರಕ್ಷಕ ಶ್ರೀಧರ

ದಿವ್ಯ ಸಮನ್ವಯ – ಕನ್ನಡ ಅನುವಾದ
ಆಂಗ್ಲ ಮೂಲ – ಡಿವೈನ್ ಹಾರ್ಮೋನಿ
ಗ್ರಂಥ ಕರ್ತರು – ಸ್ವಾಮಿ ಭಕ್ತಿ ರಕ್ಷಕ ಶ್ರೀಧರ
ಪ್ರಕಾಶಕರು – ಗೊಸಾಯಿ ಪಬ್ಲಿಷರ್ಸ್

**ಶ್ರೀ ನರಸಿಂಘ ಚೈತನ್ಯ ಮಠ, ದೊಡ್ಡಗೋಸಾಯಿ ಘಟ್ಟ,**
**ಗಂಜಾಮ್, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ – ೫೭೧೪೩೮**

ಈ ಪುಸ್ತಕದ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಲಿಚ್ಛಿಸುವವರು ಮೇಲ್ಕಂಡ ವಿಳಾಸದಲ್ಲಿ ಕಾರ್ಯದರ್ಶಿಗಳನ್ನು ಸಂಪರ್ಕಿಸಬಹುದು.

ಅನುವಾದಕರು
ಚೈತನ್ಯದಾಸ

## ಪರಿವಿಡಿ

ಮುನ್ನುಡಿ ........................................................ IV
ಪ್ರಸ್ತಾವನೆ ........................................................ VI

ಭಾಗ ಒಂದು
ಬದುಕಿನ ನೆಲೆಗಳು ............................................ ೧

ಭಾಗ ಎರಡು
ಆತ್ಮನ ನೆಲೆ ...................................................... ೧೫

ಭಾಗ ಮೂರು
ಮರಳಿ ಮನೆಗೆ ................................................. ೨೮

ಭಾಗ ನಾಲ್ಕು
ದಿವ್ಯ ಸಮನ್ವಯ ............................................... ೩೭

ಭಾಗ ಐದು
ಸೌಂದರ್ಯದ ನಾಡು ....................................... ೪೪

ಭಾಗ ಆರು
ಶ್ರೀ ಗುರು – ಆಧ್ಯಾತ್ಮಿಕ ಮಾರ್ಗದರ್ಶಕ ............... ೫೫

# ಮುನ್ನುಡಿ

ಈ ಪುಸ್ತಕದ ಲೇಖಕರಾದ ಸ್ವಾಮಿ ಶ್ರೀ ಭಕ್ತಿರಕ್ಷಕ ಶ್ರೀಧರದೇವ ಗೋಸ್ವಾಮಿ ಮಹಾರಾಜರು, ಅತ್ಯಂತ ಪ್ರಾಚೀನ ಅಂದರೆ ಸೃಷ್ಟಿಯ ಪ್ರಾರಂಭಿಕ ಕಾಲದ ಆಧ್ಯಾತ್ಮಿಕ ದಾರ್ಶನಿಕರ ಅಧಿಕೃತ ಪರಂಪರೆಗೆ ಸೇರಿದವರಾಗಿದ್ದಾರೆ. ಪ್ರಕಟಿತ ವೇದಶಾಸ್ತ್ರಗಳ ಹಾಗೂ ಮಹಾತ್ಮರ ಅಧಿಕೃತ ಉಪದೇಶಗಳನ್ನು ಅರ್ಥೈಸಿಕೊಂಡು ಯಥಾವತ್ತಾಗಿ ಪ್ರತಿನಿಧಿಸುವ ಮೂಲಕ ಈ ಪರಂಪರೆಯು ಅಧ್ಯಾತ್ಮಿಕತೆಯ ಕ್ಷೇತ್ರದಲ್ಲಿ ಬಹು ಪ್ರಾಮುಖ್ಯತೆಯನ್ನು ಗಳಿಸಿದೆ. ಸ್ವಾಮಿ ಶ್ರೀಧರ ಮಹಾರಾಜರು ತಮ್ಮ ಜೀವನಪರ್ಯಂತ, ಹದಿನೈದನೇ ಶತಮಾನದ ಪ್ರಸಿದ್ಧ ಸಂತರಾದ ಶ್ರೀ ಚೈತನ್ಯರು ಹರಡಿದ ಪ್ರೇಮಪೂರ್ವಕ ಭಕ್ತಿಸೇವೆಯ(ದಿವ್ಯ ಪ್ರೇಮಯೋಗ) ಅಥವಾ ಶುದ್ಧಭಕ್ತಿಯೋಗ ಮಾರ್ಗದ ಸುಪ್ರಸಿದ್ಧ ಆಚಾರ್ಯರೆಂದು ಗುರುತಿಸಲ್ಪಟ್ಟಿದ್ದರು, ಅಷ್ಟೇ ಅಲ್ಲದೇ ಸನಾತನ ಹಾಗೂ ದೇವಭಾಷೆಯಾದ ಸಂಸ್ಕೃತದಲ್ಲಿ ಸ್ವಾಮಿ ಶ್ರೀಧರ ಮಹಾರಾಜರು ಪ್ರತಿಭಾವಂತ ವಿದ್ವಾಂಸರಾಗಿದ್ದರು. ಈ ಪುಸ್ತಕದಂತೆ ಅವರು ಬರೆದ ಹಲವು ಪ್ರಸಿದ್ಧ ಪುಸ್ತಕಗಳು, ಅವರಿಗೆ ಭಗವತ್‌ಸಾಕ್ಷಾತ್ಕಾರ ವಿಜ್ಞಾನದಲ್ಲಿದ್ದ ಗಾಢವಾದ ಹಾಗೂ ಪ್ರಾಮಾಣಿಕ ತಿಳುವಳಿಕೆಗೆ ಸಾಕ್ಷಿಗಳಾಗಿವೆ.

ಈ ಭೌತಿಕ ಜಗತ್ತಿನಿಂದ ಅವರು ನಿರ್ಗಮಿಸುವ ಮೊದಲು(ನಿಧನ ೧೯೮೮) ಅವರ ದರುಶನದ ಅಪೂರ್ವ ಸುಯೋಗವನ್ನು ಗಳಿಸಿದ ಭಾಗ್ಯವಂತರೆಲ್ಲರೂ ಅವರ ಸರಳತೆ, ಪ್ರಾಮಾಣಿಕತೆ ಹಾಗೂ ಅವರ ದಿವ್ಯ ಪ್ರೇಮದ ತೇಜಸ್ಸಿನಿಂದ ಪ್ರಭಾವಿತರಾಗಿದ್ದರು. ಅನಾದಿ ಕಾಲದಿಂದಲೂ ಪ್ರಚಲಿತವಿರುವ ಭರತಖಂಡದ ವೇದಶಾಸ್ತ್ರಗಳ ನಿಧಿಯಲ್ಲಿ ಕಂಡುಬರುವ ಸಿದ್ಧಾಂತಗಳನ್ನು ತಮ್ಮ ಊಹಾತ್ಮಕ ಚಿಂತನೆಯಿಂದ ತಪ್ಪಾಗಿ ಗ್ರಹಿಸಿ ಪಾಶ್ಚಿಮಾತ್ಯ ದೇಶಗಳಲ್ಲಿ ಏಕತ್ವವಾದವನ್ನು

# ಮುನ್ನುಡಿ

ಹಾಗೂ ಮಾಯಾವಾದವನ್ನು ಪ್ರಚಾರಮಾಡಿ ಪ್ರಸಿದ್ಧಿಹೊಂದಲು ಪ್ರಯತ್ನಿಸುತ್ತಿದ್ದ ಗುರುಗಳೇ ಅಧಿಕರಾಗಿದ್ದ ಕಾಲದಲ್ಲಿ, ಸ್ವಾಮಿ ಶ್ರೀಧರಮಹಾರಾಜರು ಅದೇ ವೇದಶಾಸ್ತ್ರಗಳಲ್ಲಿ ಕಂಡುಬರುವ ಆಸ್ತಿಕತೆಯ ಅಧಿಕೃತ ನೈಜ ಸಿದ್ಧಾಂತಗಳನ್ನು ಜಗತ್ತಿನೆಲ್ಲೆಡೆ ಶಾಶ್ವತವಾಗಿ ಸ್ಥಾಪಿಸುವುದನ್ನೇ ತಮ್ಮ ಜೀವನದ ಏಕೈಕ ಧ್ಯೇಯವನ್ನಾಗಿಸಿದರು.

ಜೀವಾತ್ಮ ಮತ್ತು ಪರಾತ್ಪರ ಸತ್ಯನಾದ ಭಗವಂತನ ಲಕ್ಷಣಗಳು, ಏಕಕಾಲದಲ್ಲಿ ಅವರಿಬ್ಬರಲ್ಲಿರುವ ಶಾಶ್ವತ ಸಾಮ್ಯತೆ ಮತ್ತು ಅಂತರ, ಅವರಿಬ್ಬರ ಮಧ್ಯೆ ಇರುವ ನಿರಂತರ ಸಂಬಂಧ, ಪರಾತ್ಪರಸತ್ಯನಾದ ಭಗವಂತನ ನೆಲೆಯ ಪರಿಚಯ ಹಾಗೂ ಆ ನೆಲೆಯನ್ನು ಸೇರಿ ಅವನ ಸಾನ್ನಿಧ್ಯದಲ್ಲಿ ಪ್ರೇಮಪೂರ್ವಕ ಭಕ್ತಿಸೇವೆಯನ್ನು ಸಲ್ಲಿಸಲು ಹಾತೊರೆಯುವ ಪ್ರಾಮಾಣಿಕ ಸಾಧಕರಿಗೆ ಯುಕ್ತವಾದ, ಅತ್ಯುತ್ತಮವಾದ ಹಾಗೂ ಸರಳವಾದ ಮಾರ್ಗವನ್ನು ಸ್ವಾಮಿ ಶ್ರೀಧರ ಮಹಾರಾಜರು ದಿವ್ಯ ಸಮನ್ವಯ ಎಂಬ ತಮ್ಮ ಈ ಕೃತಿಯಲ್ಲಿ ಆಕರ್ಷಕ ಶೈಲಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ವಿವರಿಸಿದ್ದಾರೆ. ಮೂಲ ಆಂಗ್ಲ ಭಾಷೆಯಲ್ಲಿರುವ ಈ ಪುಸ್ತಕವನ್ನು ಮೂಲಕೃತಿಯ ಸಂದೇಶಗಳಿಗೆ ಯಾವುದೇ ಲೋಪವುಂಟಾಗದಂತೆ ಪ್ರಸ್ತುತಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಲಾಗಿದೆ.

ಪಾರಮಾರ್ಥಿಕ ತತ್ತ್ವ ಮತ್ತು ಪರಾತ್ಪರ ಸತ್ಯದ ಅನ್ವೇಷಕರು ದಿವ್ಯಸಮನ್ವಯದ ಸುಂದರವಾದ ಹಾಗೂ ಸವಿಯಾದ ಮಾರ್ಗದರ್ಶನದಿಂದ ಉತ್ತೇಜಿತರಾಗಿ, ಪರಾತ್ಪರನೆಡೆಗಿನ ತಮ್ಮ ಪಯಣದಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸುವರೆಂದು ಆಶಿಸುತ್ತೇವೆ.

ಗೋಸಾಯಿ ಪಬ್ಲಿಷರ್ಸ್

# ಪ್ರಸ್ತಾವನೆ

ಅಜ್ಞಾನದಿಂದ ಜ್ಞಾನದೆಡೆಗೆ, ಮರ್ತ್ಯತೆಯಿಂದ ಅಮರತ್ವದೆಡೆಗೆ, ದು:ಖದಿಂದ ಆನಂದದೆಡೆಗೆ ಸಾಗಲು ತನ್ನನ್ನು ತಾನು ಕಾಪಾಡಿಕೊಳ್ಳುವುದೇ ಜೀವನದ ಸ್ವಭಾವಸಿದ್ಧ ಮೂಲತತ್ತ್ವವಾಗಿದೆ.

ನಾವು ಬದುಕುತ್ತಿರುವ ಈ ಜಗತ್ತಿನಲ್ಲಿ ವೃದ್ಧಾಪ್ಯ, ವ್ಯಾಧಿ ಹಾಗೂ ಮರಣ, ಈ ಮೂರು ವಿಷಯಗಳು ನಮ್ಮನ್ನು ಸದಾ ಬೆದರಿಸುತ್ತಿರುತ್ತವೆ. ನಮ್ಮ ಅಂತರಂಗದ ಜ್ಞಾನವು ಅಜ್ಞಾನದಿಂದ ಆವೃತವಾಗಿದೆ ಮತ್ತು ನಾವು ಸತತವಾಗಿ ಸಂಕಟಗಳಿಗೆ ತುತ್ತಾಗುವ ಅಂಚಿನಲ್ಲಿರುತ್ತೇವೆ. ಇವೆಲ್ಲವೂ ನಮ್ಮ ಬದ್ಧ ವೈರಿಗಳು. ಇವುಗಳೊಂದಿಗೆ ನಾವು ಯುಕ್ತಿಯಿಂದ ಹೋರಾಡಿ, ಇವುಗಳಿಂದ ಮುಕ್ತರಾಗುವ ದಾರಿಯನ್ನು ಹುಡುಕಬೇಕು, ಏಕೆಂದರೆ, ಇವು ನಮ್ಮ ವಾಸ್ತವಿಕ ಬದುಕನ್ನು, ವಾಸ್ತವಿಕ ತಿಳುವಳಿಕೆಯನ್ನು ಹಾಗೂ ವಾಸ್ತವಿಕ ಆನಂದದ ಪ್ರಜ್ಞೆಯನ್ನು ಬಾಧಿಸುತ್ತವೆ.

ಇದಕ್ಕೆ ಸಮರ್ಪಕವಾದ ಪರಿಹಾರ ದೊರಕಿದಾಗ ನಮ್ಮ ಎಲ್ಲ ಪ್ರಶ್ನೆಗಳು ಹಾಗೂ ಸಮಸ್ಯೆಗಳು ಮಾಯವಾಗುತ್ತವೆ. ನಮ್ಮ ಕಲ್ಪನೆಗೆ ಮೀರಿದ ಹಾಗೂ ಅಸಂಭವವೆಂದು ಕಂಡುಬರುವ ಪರಿಹಾರವನ್ನು ನಾವು ಪ್ರಾಚೀನ ಶಾಸ್ತ್ರಗಳಿಂದ ಹಾಗೂ ಆತ್ಮಸಾಕ್ಷಾತ್ಕಾರವನ್ನು ಹೊಂದಿದ ಸಂತರಿಂದ ಪಡೆದುಕೊಳ್ಳಬಹುದಾಗಿದೆ. ನಮ್ಮ ಅಂತರಂಗದಲ್ಲಿ ಮನೆಮಾಡಿರುವ ಸಂಶಯದ ಗಂಟುಗಳನ್ನು ಸಡಿಲಗೊಳಿಸಿ, ಭೌತಿಕ ಬದುಕಿನ ಎಲ್ಲಾ

# ಪ್ರಸ್ತಾವನೆ

ಸಮಸ್ಯೆಗಳನ್ನು ಮೀರಿನಿಲ್ಲುವಂತಹ ಒಂದು ಸನ್ನಿವೇಶ ನಿಶ್ಚಯವಾಗಿಯೂ ಸಾಧ್ಯವಿದೆ.

ಈ ಅಂತ:ಕರಣವು ಹಲವುಬಗೆಯ ಬಂಧಗಳಿಂದ ತುಂಬಿದೆ. ನಮ್ಮನ್ನು ನಾವು ಸಾವಿರಾರು ಊಹೆಗಳಿಂದ ಬಂಧಿಸಿಕೊಂಡಿರುತ್ತೇವೆ. ಆದರೆ, ಈ ಕಟ್ಟುಗಳನ್ನೆಲ್ಲಾ ಒಂದೇಸಲ ಸಡಿಲಗೊಳಿಸಬಲ್ಲ ಒಂದುಬಗೆಯ ಜ್ಞಾನವು ನಮ್ಮೊಳಗೆ ಉತ್ಪತ್ತಿಯಾಗುವ ಸಾಧ್ಯತೆಯಿದೆ. ಹಾಗಾದಾಗ ನಮ್ಮೊಳಗಿರುವ ಎಷ್ಟೋ ಬಂಧಗಳು ಅನಗತ್ಯವಾದವುಗಳು ಎಂಬುದು ಮನವರಿಕೆಯಾಗುತ್ತದೆ ಮತ್ತು ಈ ಅನಗತ್ಯ ಬಂಧಗಳೆಲ್ಲಾ ಸಡಿಲಗೊಳ್ಳುತ್ತವೆ. ಈ ಬಂಧಗಳೆಲ್ಲಾ ನಮ್ಮ ವೈರಿಗಳು. ಅವುಗಳನ್ನು ನಮ್ಮ ಹಿತೈಷಿಗಳೆಂದು ಪರಿಗಣಿಸಿ ಅವುಗಳೊಡನೆ ಬಾಂಧವ್ಯವನ್ನು ಬೆಳೆಸಿಕೊಂಡಿದ್ದೆವು. ಈಗ ಈ ತಪ್ಪು ಕಲ್ಪನೆಯಿಂದ ಹೊರಬಂದು ಎಲ್ಲಾ ಗಂಟುಗಳನ್ನು ಸಡಿಲಗೊಳಿಸಿ, ಅಂತರಂಗದ ಎಲ್ಲಾ ಬಂಧಗಳನ್ನು ಕಡಿದುಹಾಕೋಣ.

ಆನಂದ, ಮಾಧುರ್ಯ, ಪ್ರೇಮ, ಸೌಂದರ್ಯ, ಕೃಪೆ ಹಾಗೂ ತೃಪ್ತಿಗಳ ಅನುಭವವನ್ನು ಅಂತರಂಗ ಬಯಸುತ್ತದೆ ಮತ್ತು ಅವುಗಳಿಗಾಗಿ ಹಾತೊರೆಯುತ್ತಿರುತ್ತದೆ. ಯಥಾರ್ಥವಾಗಿ ಮಾಧುರ್ಯವೇ ನಮ್ಮ ಅಂತರಂಗದ ಅಂತರ್ಗತ ಬಯಕೆಯಾಗಿರುತ್ತದೆ. ಈ ಮಧುರ ರಸಕ್ಕೋಸ್ಕರ ಈ ಅನಿತ್ಯವಾದ ಭೌತಿಕ ಜಗತ್ತಿನಲ್ಲಿ ನಾವು ಅತ್ತಿತ್ತ ಅಡ್ಡಾಡುತ್ತಿದ್ದೇವೆ ಮತ್ತು ಅದನ್ನು ಪಡೆಯಲಾಗದೇ ಕೆನ್ನೆಗೆ ಹೊಡಿಸಿಕೊಂಡವರಂತೆ ಹತಾಶೆಯಿಂದ ಹಿಂದಿರುಗುತ್ತೇವೆ. ಈ ರೀತಿ ಬಾಹ್ಯ ಪ್ರಕೃತಿಯ ಸೋಗಿನ ಪ್ರಭಾವಕ್ಕೊಳಗಾಗಿ ಕೊನೆಯಿಲ್ಲದಂತೆ ಅಡ್ಡಾಡುತ್ತಿದ್ದೇವೆ ಹಾಗೂ ನಮ್ಮ ಈ ಪ್ರಕ್ರಿಯೆಯಿಂದ ನಮ್ಮ ಅಂತರಂಗದ ಆಂತರಿಕ ಅವಶ್ಯಕತೆಗಳನ್ನು ಕಂಡುಹಿಡಿಯುವಲ್ಲಿ ವಿಫಲರಾಗುತ್ತೇವೆ.

ಅದೃಷ್ಟವಶಾತ್, ಉನ್ನತಲೋಕದ ಪ್ರತಿನಿಧಿಗಳು ನಮ್ಮ ಸಹಾಯಕ್ಕೆ ಬರುತ್ತಾರೆ. ನಮ್ಮ ಅರಿವಿಗೆ ಬಂದೋ ಬರದೆಯೋ, ವಿವಿಧಮೂಲಗಳಿಂದ ಬಂದ ವಿಶೇಷ ಸಂದೇಶಗಳನ್ನು ಅವರು ನಮ್ಮ ಮನಸ್ಸಿನಲ್ಲಿ ತೂರಿಸುತ್ತಾರೆ. ಉನ್ನತ ಮೂಲಗಳಿಂದ ಬಂದ ಇಂತಹ ದಿವ್ಯ ವಿಶೇಷ ಸಂದೇಶಗಳು ನಮ್ಮ ಹೃದಯದಲ್ಲಿ ಒಟ್ಟುಗೂಡಿ ನಮ್ಮಲ್ಲಿ ಒಂದು ವಿಶೇಷವಾದ ಶಕ್ತಿಯನ್ನು ಸೃಷ್ಟಿಸುತ್ತವೆ. ಆ ಶಕ್ತಿಯಿಂದ "ನಾನು ನನ್ನ ಮನೆಗೆ ಖಂಡಿತವಾಗಿ ಹಿಂದಿರುಗಲೇ ಬೇಕು" ಎಂಬ ಮನೋಭಾವವನ್ನು ದೃಢಗೊಳಿಸುತ್ತವೆ. ಆ ನಮ್ಮ ಮನೆಯಬಗ್ಗೆ ಮತ್ತು ಆ ಮನೆಗೂ ನಮಗೂ ಇರುವ ಸಂಪರ್ಕದ ಬಗ್ಗೆ ಈ ವಿಶೇಷ ಪ್ರತಿನಿಧಿಗಳಿಂದ ನಮಗೆ ಮಾಹಿತಿ ದೊರೆಯುತ್ತದೆ. ನಾವು ಅಲ್ಲಿಗೆ ಹಿಂದಿರುಗಲೇಬೇಕು. ಅದೇ ಸಂಪೂರ್ಣ ಭಗವತ್ ಪ್ರಜ್ಞೆಯ ಅಭಿಯಾನದ ಕೇಂದ್ರ ಹಾಗೂ ಶಾಶ್ವತ ಪ್ರೇಮದ ಆನಂದಮಯ ಧಾಮ. ಅದು ಎಲ್ಲವನ್ನೂ ಒಳಗೊಂಡಿರುವ ಪ್ರಶಸ್ತವಾದ ಧಾಮ. ಸಮಸ್ತ ಜೀವಾತ್ಮರಿಗೆ ಶಾಶ್ವತವಾದ ಆಶ್ರಯವನ್ನು ಒದಗಿಸಬಹುದಾದ ತಾಣವಾಗಿದೆ ಅದು. ಈ ಭೌತಿಕ ಪ್ರಪಂಚವು, ಮಧುರತೆಯ ಅಗಾಧ ಸಾಗರವಾದ ಆ ಅಪರಿಮಿತ ದೈವೀ ಪ್ರಪಂಚದ ಒಂದು ಕನಿಷ್ಠಗಣನೀಯ ಭಾಗವಾಗಿದೆ.

ಅದು ಪರಾತ್ಪರ ಸತ್ಯದ ಕೇಂದ್ರವಾಗಿದೆ. ಅದನ್ನು ಅರಿತರೆ ಎಲ್ಲವನ್ನೂ ಅರಿತಂತೆ, ಅದನ್ನು ಹೊಂದಿದರೆ ಎಲ್ಲವನ್ನೂ ಹೊಂದಿದಂತೆ. ಹಾಗಾಗಿ ನೀವು ಸತ್ಯವನ್ನು ತಿಳಿಯಲು ಹಂಬಲಿಸುವ ವಿದ್ಯಾರ್ಥಿಗಳಾಗಬೇಕೆಂದಿದ್ದರೆ, ಪರಾತ್ಪರದ ಗುಣಲಕ್ಷಣಗಳ ಸಂಗತಿಯ ಉದಾತ್ತ ಗುಣಗಳನ್ನು ಅಭ್ಯಸಿಸಬೇಕೇ ಹೊರತು ಅದರ ಯಾವುದಾದರೂ ಒಂದು ಭಾಗದಲ್ಲಿ ಪಾಂಡಿತ್ಯವನ್ನು ಹೊಂದಿದರೆ ಸಾಲದು.

ಪೂರ್ಣತೆಯನ್ನು ಶೋಧಿಸಬೇಕು ಮತ್ತು ಅದರ ಪರಿಪೂರ್ಣ ಸ್ಪಷ್ಟ ಕಲ್ಪನೆಯನ್ನು ಹೊಂದಬೇಕು. ಅದು ನಮ್ಮನ್ನು ಪೂರ್ಣದ ಐಕ್ಯತೆಯ, ಅದರ ಏಕೀಭಾವದ

ಹಾಗೂ ಆದರ ಏಕಸ್ವಾಮ್ಯದ ತಿಳುವಳಿಕೆಯತ್ತ ಕೊಂಡೊಯ್ಯುತ್ತದೆ; ಆ ಒಂದು ನಿರ್ದಿಷ್ಟ ಕೇಂದ್ರದಿಂದ ನಮ್ಮ ಅಖಂಡತೆಯ ಕಲ್ಪನೆಯು ನಿಯಂತ್ರಿತವಾಗಿದೆ ಮತ್ತು ಆಳಲ್ಪಟ್ಟಿದೆ ಎಂಬ ಮನೋಭಾವವು ನಮ್ಮಲ್ಲಿ ಹುಟ್ಟುತ್ತದೆ. ಈ ಅಖಂಡತೆಯ ಒಡೆಯ ಒಬ್ಬನೇ, ಆ ಒಬ್ಬನನ್ನು ನಾವು ಅರಿಯಲು ಸಾಧ್ಯವಾದರೆ ಅಖಂಡತೆಯನ್ನು ಅರಿಯಲು ಸಾಧ್ಯವಾಗುತ್ತದೆ.

ನಾವು ಆ ಪೂರ್ಣಪ್ರಜ್ಞೆಯ ಧಾಮದ ಒಡೆಯನನ್ನು ಅರಸಬೇಕು. ಬಹುಮಟ್ಟಿಗೆ ಎಲ್ಲವೂ ಪ್ರಜ್ಞೆಯಮೇಲೆ ಅವಲಂಬಿತವಾಗಿದೆ. ಎಲ್ಲಾ ಬಾಹ್ಯ ಸಂವೇದನೆಗಳು ಮತ್ತು ಅನುಭವಗಳು ಪ್ರಜ್ಞೆಯಮೇಲೆಯೇ ಅವಲಂಬಿತವಾಗಿವೆ. ಒಂದು ವಸ್ತು ಅಥವಾ ಸಂಗತಿ ಅಂದರೆ, ದೃಶ್ಯ, ಸ್ಪರ್ಶ ಅಥವಾ ಇತರ ಇಂದ್ರಿಯಗಳಿಂದುಂಟಾಗುವ ಅನುಭವ ಜ್ಞಾನ. ಈ ಪ್ರಪಂಚದಲ್ಲಿ ನಾವು ಅನುಭವಿಸುವ ಎಲ್ಲಾ ಸಂಗತಿಗಳೂ ಸಂವೇದನೆಯ ಮತ್ತು ಅನುಭವಗಳ ಗೊಂಚಲುಗಳಾಗಿವೆ ಮತ್ತು ಎಲ್ಲವೂ ಪ್ರಜ್ಞೆಯನ್ನು ಆಧರಿಸಿವೆ.

ಹಾಗಾಗಿ ನಾವು ಆ ಪ್ರಜ್ಞೆಯ ಪ್ರಪಂಚದ ಒಡೆಯನನ್ನು ಅರಸಬೇಕು. ಆ ಕಾರಣನನ್ನು, ಮೂಲಕಾರಣನನ್ನು ಅರಸಬೇಕು. ಅವನ ಹುಡುಕಾಟದಲ್ಲಿ ನಮ್ಮನ್ನು ನಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು. ಅದರ ಹೊರತಾಗಿ ಈ ಭೌತಿಕ ಪ್ರಪಂಚದಲ್ಲಿ ನಾವು ಮಾಡಬಹುದಾದ ಮಹತ್ತರ ಕಾರ್ಯ ಇನ್ನೊಂದಿಲ್ಲ. ಪ್ರೇಮ ಮತ್ತು ಸೌಂದರ್ಯದ ಕ್ಷೇತ್ರದವರೆಗೆ ಜೀವನದ ವಿವಿಧ ಸ್ತರಗಳಲ್ಲಿ ನಾವು ಕ್ರಮವಾಗಿ ವಿವಿಧ ಸ್ಥಾನಗಳ ಮೂಲಕ ಹಾದುಹೋಗಬೇಕಾಗುತ್ತದೆ. ಆ ಸ್ಥಾನಗಳಿಂದೆಲ್ಲಾ ಹೊರಬಂದು ಭಗವಂತನೆಡೆಗೆ, ನಮ್ಮ ಸ್ವಗೃಹದೆಡೆಗೆ, ಮುನ್ನಡೆಯಬೇಕು. ಎಲ್ಲಿ ಎಲ್ಲವೂ ದಿವ್ಯಸಮನ್ವತೆಯ ಶ್ರುತಿಯಲ್ಲಿ ಮೇಳವಿಸುವುದೋ, ಆ ಕೇಂದ್ರದೆಡೆಗೆ, ಆ ದಿವ್ಯ ಧಾಮದೆಡೆಗೆ ಮುಂದುವರಿಯಬೇಕು. ಈ ಕರೆಗೆ ಲಕ್ಷ್ಯ ಕೊಡುವುದೇ ನಮ್ಮ ಪ್ರತಿಯೊಬ್ಬರ ಬದುಕಿನ ಮೂಲಧ್ಯೇಯವಾಗಬೇಕ; ಯಾಕೆಂದರೆ,

ಇದೇ ಜೀವನದ ಏಕೈಕ ಮತ್ತು ಅತ್ಯುತ್ತಮ ಭಾಗ್ಯ. ಎಲ್ಲಿಯವರೆಗೆ ಈ ಭೌತಿಕ ಜಗತ್ತಿನಲ್ಲಿ ಸುಖ ಸಂತೋಷಗಳನ್ನು ಅರಸುತ್ತಾ ಇರುತ್ತೇವೋ, ಅಲ್ಲಿಯವರೆಗೂ ನಮ್ಮ ಪ್ರಯತ್ನಗಳು ಮತ್ತು ಪರಿಶ್ರಮಗಳು ತಡೆಯಲಾಗದ ಹತಾಶೆಯಲ್ಲೇ ಕೊನೆಗೊಳ್ಳುವಂಥದ್ದಾಗಿರುತ್ತವೆ. ಸ್ವಾಭಾವಿಕವಾಗಿ ನಿಯಮಿತ ಸಾಮರ್ಥ್ಯವನ್ನು ಹೊಂದಿರುವ ನಮ್ಮ ಬದ್ಧ ಇಂದ್ರಿಯಗಳು ನಮ್ಮ ಅನಿಯಮಿತವಾದ ಆಸೆಗಳನ್ನು ಹಾಗೂ ಭೌತಿಕ ಧ್ಯೇಯಗಳನ್ನು ಪೂರೈಸಲು ಶಕ್ತವಾಗಲಾರವು. ಮಿತಿಯಿಲ್ಲದ ನಿರಂತರ ಪ್ರೇಮದ ಮತ್ತು ಸೌಂದರ್ಯದ ತಾಣವಾದ ದಿವ್ಯ ಆಧ್ಯಾತ್ಮಿಕಧಾಮವನ್ನು ಅನ್ವೇಷಿಸುವ ಮೂಲಕ ಮಾತ್ರ ನಾವು ಕೊನೆಯಿಲ್ಲದ ಸುಖಸಂತೋಷಗಳನ್ನು ಹೊಂದುವ ನಮ್ಮ ಸಾಮಾನ್ಯ ಶೋಧನೆಯಲ್ಲಿ ಯಶಸ್ಸನ್ನು ಪಡೆಯುವ ಭರವಸೆಯನ್ನು ಹೊಂದಬಹುದು.

# ಭಾಗ ೧
# ಬದುಕಿನ ನೆಲೆಗಳು

ನಾನು ವಿವರಿಸುವುದನ್ನು ಗಮನವಿಟ್ಟು ಕೇಳಿ! ಈ ಪ್ರಪಂಚದ ಎಲ್ಲಾ ಧಾರ್ಮಿಕ ಕಲ್ಪನೆಗಳಿಂದ ಮುಕ್ತವಾಗಿರುವ ಸರ್ವಸಾಮಾನ್ಯವಾದ ಈ ವಿಷಯವನ್ನು ನಾನು ನಿಮಗೆ ವೈಜ್ಞಾನಿಕವಾಗಿ ವಿವರಿಸಲು ಪ್ರಯತ್ನಿಸುತ್ತೇನೆ.

ಮೊದಲನೇಯದಾಗಿ ನಾವು ನಮ್ಮ ಬದುಕಿನಲ್ಲಿ ಮೂರು ನೆಲೆಗಳಿವೆ ಎಂಬುದನ್ನು ಅರ್ಥೈಸಿಕೊಳ್ಳಬೇಕಾಗಿದೆ. ಪ್ರಾಪಂಚಿಕ ಭೋಗದ ನೆಲೆ; ವೈರಾಗ್ಯದ ನೆಲೆ; ಮತ್ತು, ಸಮರ್ಪಣೆಯ ನೆಲೆ.

ಪ್ರಸಕ್ತ ನಾವು ಪ್ರಾಪಂಚಿಕ ಭೋಗದ ಕೆಳಮಟ್ಟದ ನೆಲೆಯಲ್ಲಿದ್ದೇವೆ. ಭೌತಿಕ ಭೋಗ ಅಂದರೆ ಶೋಷಣೆ, ಶೋಷಣೆಯಿಲ್ಲದೇ ಈ ಪ್ರಪಂಚದಲ್ಲಿ ಯಾರೂ ಬದುಕಲು ಸಾಧ್ಯವಿಲ್ಲ. ಈ ಪ್ರಪಂಚದ ತುಂಬ ಜೀವಿಗಳಿವೆ. ಗಿಡ, ಮರ, ಬಳ್ಳಿ ಮತ್ತು ಹುಲ್ಲುಗಳಿಗೆ ಕೂಡಾ ಜೀವವಿದೆ, ಆದರೆ ಇನ್ನೊಂದು ಜೀವಿಯನ್ನು ಕೊಲ್ಲದೇ ಅಥವಾ ಶೋಷಿಸದೇ ಮತ್ತೊಂದು ಜೀವಿಯು ತನ್ನ ದೇಹವನ್ನು ಪೋಷಿಸಿಕೊಂಡು ಬದುಕುವುದು ಈ ಪ್ರಪಂಚದಲ್ಲಿ ಸಾಧ್ಯವಿಲ್ಲ.

ಈ ಭೌತಿಕ ಪ್ರಪಂಚವು ಶೋಷಣೆಯ ನೆಲೆಯಾಗಿರುತ್ತದೆ, ಮತ್ತು ಪ್ರತಿಯೊಂದು ಕ್ರಿಯೆಯೂ ಸಮನಾದ ಪ್ರತಿಕ್ರಿಯೆಯನ್ನು ಹೊಂದಿರುತ್ತದೆ ಎಂದು ನ್ಯೂಟನ್ನನ ಮೂರನೇ ನಿಯಮವು ಹೇಳುತ್ತದೆ. ಶೋಷಣೆಯಿಂದ ಒಬ್ಬ ವ್ಯಕ್ತಿಯು ಋಣಿಯಾಗುತ್ತಾನೆ ಮತ್ತು ಆ ಋಣವನ್ನು ತೀರಿಸಲು ಅವನು

ಕೆಳಮಟ್ಟಕ್ಕೆ ಇಳಿಯಲೇಬೇಕಾಗುತ್ತದೆ. ಹಾಗಾಗಿ ಕ್ರಿಯೆ ಮತ್ತು ಪ್ರತಿಕ್ರಿಯೆಯ ಪ್ರಭಾವದಿಂದ ಈ ಪ್ರಪಂಚದ ಅಸಂಖ್ಯಾತ ಜೀವಿಗಳು ಮೇಲೆಕೆಳಗೆ, ಮೇಲೆಕೆಳಗೆ ಆಗುತ್ತಲೇ ಇರಬೇಕಾಗುತ್ತದೆ. ಈ ಸಮಾಜವು ನಮ್ಮನ್ನು ತೀವ್ರವಾಗಿ ಶೋಷಿಸಲು ಪ್ರಯತ್ನಿಸುತ್ತದೆ. ಎಲ್ಲೆಲ್ಲೂ ಒಬ್ಬರು ಇನ್ನೊಬ್ಬರನ್ನು ಶೋಷಿಸಿ ಬದುಕುವ ಪ್ರಯತ್ನ ನಡೆಯುತ್ತಿದೆ. ಶೋಷಣೆಯ ವಿನ: ಈ ಪ್ರಪಂಚದಲ್ಲಿ ಬದುಕುವುದು ಅಸಾಧ್ಯವಾಗುತ್ತದೆ ಯಾಕೆಂದರೆ ಈ ಪ್ರಪಂಚವು ಶೋಷಣೆಯ ನೆಲೆಯಾಗಿರುತ್ತದೆ.

ಈ ಶೋಷಣೆಯ ಬಂಧದಿಂದ ಹೊರಬರಲು ಬೌದ್ಧರೇ ಮುಂತಾದ ಹಲವು ಇತರರು ಪ್ರಯತ್ನಿಸುತ್ತಿದ್ದಾರೆ. ಶೋಷಣೆಯಿಲ್ಲದ ಹಾಗೂ ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಲ್ಲದ ಬದುಕನ್ನು ಹುಡುಕಲು ಪ್ರಯತ್ನಿಸುತ್ತಾರೆ. ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಂದ ತಪ್ಪಿಸಿಕೊಳ್ಳುವ ಸಲುವಾಗಿ ವೈರಾಗ್ಯದ ಸ್ಥಿತಿಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಾರೆ ಮತ್ತು ಸ್ವಪ್ನರಹಿತ ನಿದ್ರೆಯ ಸ್ಥಿತಿಯನ್ನು ಹೋಲುವ, ತಾವು ವಾಸ್ತವವಾಗಿ ಬದುಕುತ್ತಿರುವ ಜಗತ್ತಿನಿಂದ ಸಂಪೂರ್ಣವಾಗಿ ನಿವೃತ್ತರಾಗಿ, ಪ್ರತಿಕ್ರಿಯೆಗಳಿಂದ ತಪ್ಪಿಸಿಕೊಳ್ಳುವೆವೆಂಬ ಕಾಲ್ಪನಿಕ ನೆಲೆಯಲ್ಲಿ ಉಳಿಯುವ ಸಮಾಧಿ ಅಥವಾ ನಿರ್ವಾಣ ಎಂಬ ಸಿದ್ಧಾಂತವನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಕೆಳಮಟ್ಟದ ಪ್ರಪಂಚದಲ್ಲಿ ತಮ್ಮ ಭಾವನೆಗಳನ್ನು ಹರಿಯಗೊಡದೆ ಅದುಮಿಟ್ಟುಕೊಂಡು ಅವರು ಯಾವಾಗಲೂ ಒಂದು ಕಾಲ್ಪನಿಕ ಸ್ಥಿತಿಯಲ್ಲಿ ಇರುತ್ತಾರೆ. ಇದು ಒಂದುರೀತಿಯ ಸ್ವಪ್ನರಹಿತ ನಿದ್ರೆಯ ಸ್ಥಿತಿ.

ಏನಿದ್ದರೂ, ಆಸ್ತಿತ್ತ್ವವಾದಿ ಬಳಗ, ಇನ್ನೊಂದು ಉನ್ನತ ಮಟ್ಟದ ಬದುಕಿನ ನಂಬಿಕೆಯನ್ನು ಹೊಂದಿದೆ, ಅದೇ ಸಮರ್ಪಣೆಯ ಜಗತ್ತು. ಅದು ಶೊಷಣೆಯ ಜಗತ್ತಿಗೆ ಸರಿಯಗಿ ವಿರುದ್ಧವಾದದ್ದು. ಈ ಭೌತಿಕ ಜಗತ್ತಿನ ಪ್ರತಿಯೊಂದು ಘಟಕವೂ ಪರಿಸರವನ್ನು ಶೋಷಿಸಲು ಇಚ್ಚಿಸಿದರೆ, ಆ ಸಮರ್ಪಣೆಯ ಉನ್ನತ

ಜಗತ್ತಿನ ಪ್ರತಿಯೊಂದು ಘಟಕವೂ ಪರಿಸರವನ್ನು ಸೇವಿಸಲು ಇಚ್ಛಿಸುತ್ತದೆ. ಕೆವಲ ಪರಿಸರವನ್ನು ಮಾತ್ರವಲ್ಲ, ಆದರೆ, ಆ ಪರಿಸರದ ಪ್ರತಿಯೊಂದು ಘಟಕದ ಬದುಕಿನ ನಿಜವಾದ ಹಾಗೂ ಪ್ರಧಾನ ಧ್ಯೇಯವೇ ಅದರ ಕೇಂದ್ರದ ಸೇವೆಯನ್ನು ಮಾಡುವುದಾಗಿದೆ. ನಾವು ಒಂದು ವ್ಯವಸ್ಥಿತ ಅಖಂಡ ಪರಿಸರದಲ್ಲಿ ಬದುಕುತ್ತಿದ್ದೇವೆ ಹಾಗೂ ಎಲ್ಲಾ ಘಟಕಗಳೂ ಆ ಅಖಂಡತೆಯ ಅಂಶಗಳಾಗಿರುತ್ತವೆ. ಆದ್ದರಿಂದ ಪ್ರತಿಯೊಂದು ಅಂಶವೂ ಆ ಅಖಂಡತೆಯ ಕೇಂದ್ರಕ್ಕೆ ಅಗತ್ಯವಾಗಿ ನಿಷ್ಠೆಯುಳ್ಳದ್ದಾಗಿರಬೇಕು.

ಯಾವುದನ್ನು ಅರಿತರೆ ಎಲ್ಲವನ್ನೂ ಅರಿತಂತಾಗುವುದೋ, ಯಾವುದನ್ನು ಹೊಂದಿದರೆ ಎಲ್ಲವನ್ನೂ ಹೊಂದಿದಂತಾಗುವುದೋ, ಅಂತಹ ಒಂದು ಪ್ರಧಾನ ವಿಷಯವಿದೆ. ಎಲ್ಲ ಪವಿತ್ರ ಗ್ರಂಥಗಳ ಲಘು ಹಾಗೂ ದೀರ್ಘ ಹಿತೋಕ್ತಿಗಳೂ ಆ ಪ್ರಧಾನ ವಿಷಯವನ್ನು ಅರಸುವ ಪ್ರಯತ್ನವನ್ನೇ ಸೂಚಿಸುತ್ತವೆ. ಪ್ರಾರಂಭದಲ್ಲಿ ಇಂತಹ ಹೇಳಿಕೆಗಳು ಹಾಸ್ಯಾಸ್ಪದವೆಂದು ಅನಿಸಬಹುದು. "ಒಂದು ವಿಷಯವನ್ನು ಅರಿತರೆ ಎಲ್ಲವನ್ನೂ ಅರಿತಂತಾಗುವುದು? ಏನು ಇದರ ಅರ್ಥ, ಇದು ಅಸಂಬದ್ಧ! ಹೀಗೆ ಹೇಳುವವರಿಗೆ ಮತಿಭ್ರಮಣೆಯಾಗಿರಬಹುದು!" ಎಂದೆಲ್ಲ ಅನಿಸಬಹುದು.

ಆದರೆ ಇಂತಹ ಹಲವು ಅನುಮಾನಗಳಿಗೆ ಪುರಾತನ ಗ್ರಂಥಗಳಲ್ಲಿ ಪರಿಹಾರಗಳು ಸಿಗುತ್ತವೆ. ಹೀಗೆ ಈ ಪ್ರಸಕ್ತ ಅನುಮಾನವನ್ನು ನಾವು ಅಂತಹ ಒಂದು ವಿಶ್ಲೇಷಣೆಯಿಂದ ಪರಿಹರಿಸಿಕೊಳ್ಳಬಹುದು. ಅದೇನೆಂದರೆ, ನಾವು ಮರದ ಬೇರಿಗೆ ನೀರನ್ನು ಹರಿಸಿದಾಗ ಮರದ ಎಲ್ಲಾ ಭಾಗಗಳೂ ಪೋಷಿಸಲ್ಪಡುತ್ತವೆ. ಆಹಾರವನ್ನು ಹೊಟ್ಟೆಗೆ ಸೇವಿಸಿದಾಗ ದೇಹದ ಎಲ್ಲಾ ಅಂಗಾಂಗಗಳೂ ಪೋಷಿಸಲ್ಪಡುತ್ತವೆ. ಹಾಗೆಯೇ ಒಂದು ಪ್ರಧಾನ ಕೇಂದ್ರವನ್ನು ಸೇವಿಸಿದಾಗ ಅದರ ಎಲ್ಲಾ ಅಂಶಗಳನ್ನೂ ಸೇವಿಸಿದಂತಾಗುವುದು. ಇದು ಸಾಧ್ಯ, ಹಾಗೂ ಹೀಗೆ ಮಾಡುವುದೆಂದರೆ ನಾವು ಆ ಸಮರ್ಪಣೆಯ ಜಗತ್ತಿಗೆ ಪ್ರವೇಶಿಸಿದಂತೆ.

# ದಿವ್ಯ ಸಮನ್ವಯ

ಶೋಷಣೆಯ ಮತ್ತು ವೈರಾಗ್ಯದ ಕೆಳಮಟ್ಟಗಳಿಂದ ತಪ್ಪಿಸಿಕೊಂಡು ಸಮರ್ಪಣೆಯ ಉನ್ನತಮಟ್ಟವನ್ನು ಪ್ರವೇಶಿಸಲು ಪ್ರಯತ್ನಿಸಿ. ನಿಮ್ಮ ಆತ್ಮ, ನಿಮ್ಮ ಸ್ವಂತ ಆತ್ಮ, ಆ ಸಮರ್ಪಣೆಯ ಜಗತ್ತಿನ ಒಂದು ಅಂಶವಾಗಿರುತ್ತದೆ. ಆ ಜಗತ್ತೇ ನಿಜವಾದ ಜಗತ್ತು. ಆ ನೈಜ ಜಗತ್ತಿನ ವಿಕೃತ ಪ್ರತಿಬಿಂಬವೇ ಈ ಭೌತಿಕ ಪ್ರಪಂಚ.

ಆದ್ದರಿಂದ ನಾನು ಈ ದೇಹ, ರಕ್ತ ಮತ್ತು ಮಾಂಸವೆಂಬ ನಿಮ್ಮ ಪಾಶವೀ ಪ್ರಜ್ಞೆಯಿಂದ ಹೊರಬನ್ನಿ. ನೀವು ಕೇವಲ ರಕ್ತ ಮತ್ತು ಮಾಂಸಗಳಿಂದ ತುಂಬಿದ ನಶ್ವರ ದೇಹಗಳಿಗೆ ಸೀಮಿತರಾಗಿಲ್ಲ! ನೀವೆಲ್ಲರೂ ಪ್ರಜ್ಞೆಯ ಒಂದೊಂದು ಘಟಕಗಳು. ಮತ್ತು ನೀವು ಅಮರರು, ಎಲ್ಲಿ ಸಕಲವೂ ನಾಶವಾಗುವುದು ನಿಶ್ಚಯವೋ, ಆ ನಶ್ವರ ಪಪಂಚದ ಸದಸ್ಯರು ನೀವಲ್ಲ! ನಿಮ್ಮನ್ನು ನೀವು ಈ ನಶ್ವರ ದೇಹದೊಂದಿಗೆ ಗುರುತಿಸಿಕೊಂಡಿರುವುದರಿಂದ, ಸಾವು, ಬಲಹೀನತೆ, ಮರುಹುಟ್ಟು, ರೋಗರುಜಿನಗಳಿಂದ ನೋವು ಹಾಗೂ ಸಂಕಟಗಳು ನಿಮ್ಮಮೇಲೆ ಬಲವಂತವಾಗಿ ಹೇರಲ್ಪಟ್ಟಿವೆ. ಇದು ಪಾಶವೀ ಪ್ರಜ್ಞೆ, ನೀವು ಪ್ರಾಣಿಗಳು ಎಂಬ ಕೀಳುಮಟ್ಟದ ಪ್ರಜ್ಞೆ. ಆದರೆ ಯಥಾರ್ಥವಾಗಿ ನೀವು ಅದಲ್ಲ, ನೀವು ಒಂದು ಉನ್ನತ ಪ್ರಜ್ಞೆಯ ಘಟಕಗಳಾಗಿರುವಿರಿ. ನೀವು ದಿವ್ಯ ಚೇತನಗಳಾಗಿರುವಿರಿ, ನೀವು ಆತ್ಮಗಳಾಗಿರುವಿರಿ.

ಆತ್ಮನು ಅವಿನಾಶಿ ಎಂಬುದು ಮಾತ್ರವಲ್ಲ, ಭಗವಂತ ಅಸ್ತಿತ್ವದಲ್ಲಿದ್ದಾನೆ ಎಂಬುದು ಮಾತ್ರವಲ್ಲ, ಭಗವಂತನೇ ಪರಮಶ್ರೇಷ್ಠ ಪ್ರಜ್ಞೆ ಹಾಗೂ ಪರಾತ್ಪರ ಸತ್ಯ ಎಂಬುದು ಮಾತ್ರವಲ್ಲ, ಆದರೆ ನಾವು, ನಾವುಗಳು, ಆ ಪ್ರಜ್ಞಾಜಗತ್ತಿನ ಘಟಕಗಳು. ದಿವ್ಯಕಿರಣಗಳಂತಿರುವ ನಾವು, ನಮ್ಮ ಆತ್ಮಗಳು, ನಿರಂತರವಾಗಿ ಆ ಪರಮ ಶೇಷ್ಠನೊಡನೆ ನಿರಂತರ ಸಂಪರ್ಕವನು ಹೊಂದಿದ್ದೇವೆ. ಭಗವಂತನನ್ನು ಸೂರ್ಯನಿಗೆ ಹೋಲಿಸಬಹುದು. ಸೂರ್ಯನು ಅಸಂಖ್ಯಾತ ಬೆಳಕಿನ ಕಿರಣಗಳ್ನು ಹೊರಸೂಸುವಂತೆ, ಭಗವಂತನು ಅಸಂಖ್ಯಾತ ಆತ್ಮಗಳನ್ನು

ಹೊರಹೊಮ್ಮುತ್ತಾನೆ. ಒಬ್ಬ ಸೂರ್ಯನಿಂದ ಹೊರಟ ಅಸಂಖ್ಯಾತ ಕಿರಣಗಳು, ಅತಿ ಸಣ್ಣ ಪಮಾಣದಲ್ಲಿ ಸೂರ್ಯನ ಎಲ್ಲಾ ಗುಣಗಳನ್ನು ಹೊಂದಿದ್ದರೂ, ನಿರಂತರವಾಗಿ ಅವನ ಸಂಪರ್ಕದಲ್ಲಿದ್ದರೂ; ಸೂರ್ಯನಿಗೂ, ಸೂರ್ಯನಿಂದ ಹೊರಹೊಮ್ಮಿದ ಕಿರಣಗಳಿಗೂ ನಿರಂತರ ವ್ಯತ್ಯಾಸವಿರುತ್ತದೆ. ಸೂರ್ಯನ ಕಿರಣಗಳನ್ನು ಎಂದಿಗೂ ಸೂರ್ಯನೆಂದು ಪರಿಗಣಿಸಲಾಗುವುದಿಲ್ಲ. ಹಾಗೆಯೇ, ಎಲ್ಲಾ ಆತ್ಮಗಳು ಭಗವಂತನೊಂದಿಗೆ ನಿರಂತರ ಸಂಪರ್ಕವನ್ನು ಹೊಂದಿರುತ್ತವೆ. ಈ ಶಾಶ್ವತವಾದ ಭಿನ್ನತೆಯೇ ಅಣ್ವಂಶಗಳಾದ ಆತ್ಮಗಳು ಮತ್ತು ಪರಿಪೂರ್ಣನಾಗಿರುವ ಅವುಗಳ ಒಡೆಯನಾದ ಭಗವಂತನ ಮಧ್ಯೆ ಪ್ರೇಮ ವಿನಿಮಯಕ್ಕೆ ಅವಕಾಶವನ್ನು ಕಲ್ಪಿಸುತ್ತದೆ. ಎಲ್ಲವೂ ದಿವ್ಯ ಸಮನ್ವಯದಲ್ಲಿ ನಡೆಯುವ ಆ ಲೋಕದ ಬದುಕೇ ಅತ್ಯಂತ ಆನಂದದಾಯಕವಾದುದು.

ಆದ್ದರಿಂದ ನಿಮ್ಮ ಈ ಭ್ರಾಮಕ ಬದುಕಿಗೆ ಕಾರಣವಾದ ಆ ತಪ್ಪು ಕಲ್ಪನೆಗಳು ಹಾಗೂ ಪ್ರಾಪಂಚಿಕ ವಿಷಯಗಳೊಡನೆ ನಿಮ್ಮನ್ನು ನೀವು ತಪಾಗಿ ಗುರುತಿಸಿಕೊಂಡಿರುವ ಉನ್ಮತ್ತತೆಯಿಂದ ನಿಮ್ಮನ್ನು ನೀವು ಶಾಶ್ವತವಾಗಿ ಬೇರ್ಪಡಿಸಿಕೊಳ್ಳಿ. ಆತ್ಮವೆಂಬ ನಿಮ್ಮ ದಿವ್ಯ ಸ್ಥಾನವನ್ನು ಪುನಃಸ್ಥಾಪಿಸಿಕೊಳ್ಳಿ. ಇದು ಹೇಗೆ ಸಾಧ್ಯ? ಸ್ವಭಾವತಃ ನೀವು ತಟಸ್ಥರಾಗಿರುವುದರಿಂದ. ನಿಮ್ಮ ಎರಡು ಕಾಲುಗಳಮೆಲೆ ನೀವು ಸ್ವತಂತ್ರವಾಗಿ ನಿಲ್ಲಲಾರಿರಿ. ನಿಮಗೆ ಯಾವುದಾದರೊಂದು ಆಶ್ರಯ ಇರಲೇಬೇಕು. ಈ ಭೌತಿಕ ಪ್ರಪಂಚದ ಪರಿಧಿಯೊಳಗೆ ಭೌತಿಕ ಗುರುತಿನೊಡನೆ ಅಥವಾ ಅದರಿಂದ ಮೇಲೆ; ಒಟ್ಟಾರೆ ನಿಮ್ಮ ತಲೆಯಮೇಲೆ ಯಾವುದದರೊಂದು ಆಶ್ರಯ ನಿಮಗೆ ಇರಲೇಬೇಕು.

ನಮ್ಮ ಪೂರ್ವಜನ್ಮದ ಕರ್ಮಗಳಿಗೆ ಅನುಗುಣವಾಗಿ, ಒಂದು ನಿರ್ದಿಷ್ಟ ಪರಿಸರದಲ್ಲಿ ನಮ್ಮ ಆತ್ಮವು, ನಮ್ಮ ಕರ್ಮಗಳಫಲಗಳಿಗೆ ಸರಿಹೊಂದುವ ಒಂದು ನಿರ್ದಿಷ್ತ ಶರೀರದಲ್ಲಿ ಸ್ಥಿತವಾಗುತ್ತದೆ. ನಾವು ಎಲ್ಲಿ ಯಾವ ದೇಹದಲ್ಲಿ ಇರಿಸಲ್ಪಡುತ್ತೇವೋ, ಅಲ್ಲಿಂದಲೇ ನಮ್ಮ ಆಧ್ಯಾತ್ಮಿಕ ಬದುಕನ್ನು

ಪ್ರಾರಂಭಿಸಬೇಕು. ನಾವು ವಾಸಿಸುತ್ತಿರುವ ಭೌತಿಕ ಮತ್ತು ಮಾನಸಿಕ ಕವಚದೊಳಗೆ ಅಡಕವಾಗಿರುವ ಎಲ್ಲಾ ಸಂಸ್ಕಾರ (ಭೌತಿಕಪ್ರವೃತ್ತಿ)ಗಳನ್ನು ದಮನ ಮಾಡುವ ಕಾರ್ಯವನ್ನು ಪ್ರಾರಂಭಿಸಲೇಬೇಕು.

ನಾವು ಈಗ ಇರುವ ಪರಿಸ್ಥಿತಿಗೆ ಸಂಪೂರ್ಣವಾಗಿ ನಾವೇ ಹೊಣೆಗಾರರು ಹೊರತು ಇನ್ನ್ಯಾರೂ ಅಲ್ಲ. ನಮ್ಮ ಮೇಲೆ ಅನ್ಯಾಯ ನಡೆಯುತ್ತಿದೆ ಎಂದು ಕೆಲವುಸಲ ನಮಗೆ ಅನ್ನಿಸಬಹುದು. ಆದರೆ ಯಥಾರ್ಥವಾಗಿ, ನಾವು ಮಾಡಿದ ಪೂರ್ವ ಕರ್ಮಗಳ ಫಲವಾಗಿ ಕಷ್ಟಕಾರ್ಪಣ್ಯಗಳು ನಮಗೆ ಬರುತ್ತವೆ. ಮರೆವು ನಮ್ಮ ಸಹಜ ಸ್ವಭಾವವಾದುದರಿಂದ ನಾವು ಯಾವಾಗಲೂ ನಮ್ಮ ಪೂರ್ವಕರ್ಮಗಳನ್ನು ಜ್ಞಾಪಿಸಿಕೊಳ್ಳಲು ಅಸಮರ್ಥರಾಗಿದ್ದೇವೆ. ಈ ಭೌತಿಕ ಜಗತ್ತಿನಲ್ಲಿ ನಮಗೆ ಆಗುವ ಒಳಿತು ಕೆಡುಕುಗಳೆಲ್ಲವೂ ನಮ್ಮ ಪೂರ್ವಕರ್ಮಗಳ ಫಲ ಎಂಬ ಸತ್ಯದ ಅರಿವು ನಮಗೆ ಉಂಟಾದಾಗ ನಾವು ನಿಜವಾಗಿಯೂ ಮೋಕ್ಷದ ಬಾಗಿಲಲ್ಲಿ ನಿಂತಿರುತ್ತೇವೆ.

ಅದಕ್ಕೋಸ್ಕರವೇ ನಾವು ನಮ್ಮ ಈಗಿನ ಪರಿಸ್ಥಿತಿಯ ಬಗ್ಗೆ ದೂರದೆ, ನಮ್ಮ ಅಧ್ಯಾತ್ಮಿಕ ಏಳಿಗೆಗೆ ಇದು ನಿಜವಾಗಿಯೂ ಅತ್ಯವಶ್ಯ ಎಂದು ಪರಿಗಣಿಸಬೇಕು. ಈ ಮೂಲಕ ನಮ್ಮ ಜೀವನದಲ್ಲಿ ಬರತಕ್ಕಂತಹ ಎಲ್ಲ ಪ್ರತಿಕೂಲ ಪರಿಸ್ಥಿತಿಗಳನ್ನು ಭಗವಂತನ ಕೃಪೆಯೆಂದು ಸ್ವೀಕರಿಸಿ ಬದುಕಬೇಕು. ಹೀಗೆ ನಾವು ನಮ್ಮ ಒಳಿತಿನ ಸಕಾರಾತ್ಮಕ ದೃಷ್ಟಿಕೋನದೊಡನೆ ಪರಿಸ್ಥಿತಿಯೊಂದಿಗೆ ಹೆಣಗಲೇಬೇಕು. “ಇದು ನನ್ನ ನೈಜ ಅವಶ್ಯಕತೆ, ಭಗವಂತನ ಲೆಕ್ಕಾಚಾರದಲ್ಲಿ ಎಲ್ಲಿಯೂ ತಪ್ಪಾಗಿಲ್ಲ ನನ್ನ ಒಳಿತಿಗೋಸ್ಕರವೇ ಈ ಪರೀಕ್ಷೆಯು ನನ್ನ ಮೇಲೆ ಹೇರಲ್ಪಟ್ಟಿದೆ, ಜೀವನದಲ್ಲಿ ಬರತಕ್ಕಂತಹ ಎಲ್ಲ ಪ್ರತಿಕೂಲ ಪರಿಸ್ಥಿತಿಗಳನ್ನು ಧೈರ್ಯವಾಗಿ ನಿಂತು ಎದುರಿಸಿ ಜಯಿಸಲು ಸಿಕ್ಕಿದ ಅವಕಾಶವೇ ಈ ಜೀವನದಲ್ಲಿ ನನ್ನ ಪ್ರಗತಿ, ನನ್ನ ಪ್ರಗತಿಪರ ಜೀವನವನ್ನು ಆದರಿಸಲು ಭಗವಂತನಿಂದ ಈ ಪರೀಕ್ಷೆಯು ನನಗೆ ಕೊಡಲ್ಪಟ್ಟಿದೆ” ಈ ರೀತಿಯ ಆಶಾವಾದದೊಡನೆ ಎಲ್ಲ

ಪರಿಸ್ಥಿತಿಗಳನ್ನು ಎದುರಿಸಬೇಕೆಂದು ಎಲ್ಲ ಲಭ್ಯ ಗ್ರಂಥಗಳು ನಮಗೆ ಸೂಚನೆಗಳನ್ನು ನೀಡುತ್ತವೆ. ಆಗ ನಾವು ಬಹಳ ಸುಲಭವಾಗಿ ಹಾಗೂ ಶೀಘ್ರವಾಗಿ ತಪ್ಪು ಕಲ್ಪನೆಗಳ ಗೋಡೆಯನ್ನು ದಾಟಿ ಮಾಯೆಯ ಅಥವಾ ಭ್ರಮೆಯ ಪ್ರಪಂಚದಿಂದ ಬಿಡುಗಡೆಯನ್ನು ಹೊಂದಬಹುದು, ಮತ್ತು ಇನ್ನೂ ಮಿಗಿಲಾಗಿ ಭಗವತ್ಪ್ರಜ್ಞೆಯಲ್ಲಿ, ಸಮರ್ಪಣೆಯ ಬದುಕಿನಲ್ಲಿ ಭಾಗಿಗಳಾಗಬಹುದು.

ಎಲ್ಲಿ ಪ್ರತಿಯೊಂದು ಘಟಕವೂ ಕೇಂದ್ರದಿಂದ ಪ್ರತಿನಿಧಿಸಲ್ಪಟ್ಟು, ತನ್ನನ್ನು ತಾನು ಅಖಂಡತ್ವಕ್ಕೆ ಸಮರ್ಪಿಸಿಕೊಂಡಿದೆಯೋ, ಅದು ನಿಜವಾದ ಜಗತ್ತು. ಒಂದು ಆರೋಗ್ಯವಂತ ದೇಹದ ಎಲ್ಲಾ ಜೀವಕೋಶಗಳು ಇಡೀ ದೇಹದ ಸುಸ್ಥಿತಿಗೋಸ್ಕರ ದುಡಿಯುವಂತೆ. ಒಂದುವೇಳೆ ಪ್ರತಿಯೊಂದು ಅಣುವೂ ತನ್ನ ಸ್ಥಳೀಯ ಆಸಕ್ತಿಯನ್ನು ಗುರಿಯಾಗಿಟ್ಟುಕೊಂಡು ತನಗೋಸ್ಕರ ಮಾತ್ರ ದುಡಿದರೆ ಇದು ನಿಃಸಂಶಯವಾಗಿ ಒಳ್ಳೆಯ ಲಕ್ಷಣವಲ್ಲ. ದೇಹದ ಪ್ರತಿಯೊಂದು ಭಾಗವೂ ಪ್ರತಿಯೊಂದು ಅಣುವೂ ಸಂಪೂರ್ಣ ವ್ಯವಸ್ಥೆಯ ಸುಸ್ಥಿತಿಗೋಸ್ಕರ ದುಡಿಯತಕ್ಕದ್ದು. ಆಲ್ಲಿ ಒಂದು ಕೇಂದ್ರವಿದೆ,ಆ ಕೇಂದ್ರದ ಮಾರ್ಗದರ್ಶನದಲ್ಲಿ ಉಳಿದ ಎಲ್ಲಾ ಭಾಗಗಳೂ ಕಾರ್ಯ ನಿರ್ವಹಿಸುತ್ತವೆ. ಆ ಕೇಂದ್ರದ ಸ್ಥಾನವೇನು?

ಪರಾತ್ಪರ ಸತ್ಯ, ಸಕಲಕ್ಕೂ ಮೂಲಕಾರಣವಾಗಿರುವಂಥಾದ್ದು. ನಿಶ್ಚಯವಾಗಿಯೂ ಎರಡು ಯೋಗ್ಯತಾ ವಿಶೇಷಗಳನ್ನು ಹೊಂದಿರಬೇಕು. ಅವುಗಳು ಯಾವುವು? ಅದು ತಾನೇ ತಾನಾಗಿ ಮತ್ತು ತನ್ನಿಂದ ತನಗಾಗಿ ಇರಬೇಕು. ದಯಮಾಡಿ ಗಮನವಿಟ್ಟು ಕೇಳಿಸಿಕೊಳ್ಳಲು ಪ್ರಯತ್ನಿಸಿ. ತಾನೇ ತಾನಾಗಿ ಅಂದರೆ ಅವನೇ ಅವನ ಇರುವಿಗೆ ಕಾರಣ, ಬೇರೆ ಯಾರೂ ಅವನನ್ನು ಸೃಷ್ಟಿಸಿಲ್ಲ, ಒಂದುವೇಳೆ ಬೇರೆ ಯಾರಾದರೂ ಅವನನ್ನು ಸೃಷ್ಟಿಸಿದ್ದರೆ, ಆ ಸೃಷ್ಟಿಕರ್ತನಿಗೆ ಮೊದಲ ಪ್ರಾಧಾನ್ಯತೆ ಸಿಗಬೇಕು. ಹಾಗಾಗಿ ಪರಾತ್ಪರನಾಗಿರುವವನು

ನಿಶ್ಚಯವಾಗಿಯೂ ಆಸ್ತಿತ್ತ್ವದಲ್ಲಿರಬೇಕು ಮತ್ತು ಅನ್ಯ ಮೂಲದಿಂದ ಸೃಷ್ಟಿಸಲ್ಪಟ್ಟವನಾಗಿರಬಾರದು. ಪರಾತ್ಪರನಾಗಿ ನಿಶ್ಚಯವಾಗಿಯೂ ಈ ಮೊದಲ ಯೋಗ್ಯತಾ ವಿಶೇಷವನ್ನು ಹೊಂದಿರಬೇಕು.

ಇನ್ನು ಎರಡನೇಯ ಯೋಗ್ಯತಾ ವಿಶೇಷವೇನೆಂದರೆ ಪರಾತ್ಪರ ಸತ್ಯವು ತಾನು ತನಗಾಗಿ ಇರುವುದು, ತನ್ನ ಸ್ವಯಮ್ ತೃಪ್ತಿಗಾಗಿ ತಾನು ಅಸ್ತಿತ್ತ್ವದಲ್ಲಿದ್ದಾನೆ. ಇತರರ ತೃಪ್ತಿಗೋಸ್ಕರವಲ್ಲ. ಒಂದುವೇಳೆ ಅವನ ಅಸ್ತಿತ್ತ್ವ ಇನ್ನೊಂದು ಅಸ್ತಿತ್ತ್ವವನ್ನು ತೃಪ್ತಿ ಪಡಿಸುವುದಕ್ಕೋಸ್ಕರವಿದ್ದಿದ್ದರೆ, ತಾನು ದ್ವಿತೀಯನಾಗುತ್ತಿದ್ದ ಮತ್ತು ಯಾರನ್ನು ತೃಪ್ತಿಪಡಿಸುವುದಕ್ಕೋಸ್ಕರ ತಾನು ಅಸ್ತಿತ್ತ್ವದಲ್ಲಿದ್ದಾನೋ, ಅವನು ಪ್ರಥಮ ಸ್ಥಾನದಲ್ಲಿರುತ್ತಿದ್ದ.

ಹಾಗಾಗಿ ಪರಾತ್ಪರನಿಗೆ ಈ ಎರಡು ಯೋಗ್ಯತಾವಿಶೇಷಗಳಿರಲೇಬೇಕು. ತಾನೇ ತನ್ನ ಮೂಲ ಕಾರಣ ಮತ್ತು ತಾನು ಕೇವಲ ತನ್ನ ಸ್ವಯಮ್ ತೃಪ್ತಿಗೋಸ್ಕರ ಅಸ್ತಿತ್ತ್ವದಲ್ಲಿದ್ದಾನೆ. ಪರಾತ್ಪರನು ತನ್ನಿಂದ ತಾನು ಮತ್ತು ತನಗಾಗಿ ತಾನು ಅಸ್ತಿತ್ತ್ವದಲ್ಲಿದ್ದಾನೆ. ಒಂದು ಹುಲ್ಲು ಕಡ್ಡಿಯ ಅಲುಗಾಟವೂ ಕೂಡಾ ಭಗವಂತನ ಸಂಕಲ್ಪವನ್ನು ಸೂಚಿಸುತ್ತದೆ. ಪ್ರತಿ ವಿಷಯ, ಪ್ರತಿಯೊಂದು ಘಟನೆ, ಎಲ್ಲಿ ಏನೇ ನಡೆಯಲಿ, ಅದು ಅವನ ತೃಪ್ತಿಗೊಸ್ಕರವೇ ಆಗಿರುತ್ತದೆ. ಆದುದರಿಂದ ನಿಜವಾದ ಆಕರ್ಷಣೆಯಿರುವುದು ಅವನ ಲೀಲೆಗಳಲ್ಲಿ, ಅವನ ಆಟದಲ್ಲಿ. ಆದರೆ, ನಾವು ನಮ್ಮ ಕುಟುಂಬದ ಹಿತಾಸಕ್ತಿ, ದೇಶದ ಹಿತಾಸಕ್ತಿ ಹಾಗೂ ಮಾನವ ಜನಾಂಗದ ಹಿತಾಸಕ್ತಿಯೇ ಮುಂತಾದ ಪ್ರಾಪಂಚಿಕ ವಿಷಯಗಳ ಸೆಳೆತಗಳನ್ನು ಹಿಂಬಾಲಿಸುತ್ತಿದ್ದೇವೆ. ಅಸಂಖ್ಯಾತ ಪ್ರಾಪಂಚಿಕ ಹಿತಾಸಕ್ತಿಗಳಮಧ್ಯೆ ಘರ್ಷಣೆಯುಂಟಾಗುವುದರಿಂದ ನಾವು ತೊಂದರೆಗೊಳಗಾಗುತ್ತೇವೆ, ಆದರೆ ನಾವು ಬಹು ಪ್ರಮುಖ ಅಂದುಕಂಡಂತಹ ನಮ್ಮ ಎಲ್ಲಾ ಪ್ರಾಪಂಚಿಕ ಹಿತಾಸಕ್ತಿಗಳನ್ನು ಬಿಟ್ಟುಬಿಡಲೇಬೆಕು, ತಪ್ಪು ಗ್ರಹಿಕೆಗಳಿಂದ ಹೊರಬರಬೇಕು, ಮತ್ತು ಅಖಂಡತೆಯ ಸಲುವಾಗಿ

ಕಾರ್ಯನಿರತರಾಗಿರುವ ಘಟಕದ ಸ್ಥಾನವನ್ನು ಹೊಂದಲು ಪ್ರಯತ್ನಿಸಬೇಕು. ನಾವು ಆ ಕೇಂದ್ರಕ್ಕೆ ವಿಶ್ವಾಸಾರ್ಹರಾಗಿರಬೆಕೆಂಬುದನ್ನು ನೆನಪಿಡಬೇಕು. ಪ್ರಸ್ತುತ, ನಮ್ಮ ಎಲ್ಲಾ ಕಾರ್ಯಕ್ರಮಗಳು ನಮ್ಮ ನಮ್ಮ ಸ್ವಂತ ಆಸಕ್ತಿಗಳನ್ನು ಅವಲಂಬಿಸಿವೆ, ಆದರೆ ನಾವು ನಮ್ಮ ಸ್ಥಳೀಯ ಪ್ರಪಂಚವನ್ನು ಬಿಟ್ಟು ಬಿಟ್ಟು ಸಂಪೂರ್ಣವಾಗಿ ಮೂಲ ವ್ಯವಸ್ಥೆಯ ಕೇಂದ್ರದ ಹಿತಾಸಕ್ತಿಯಲ್ಲಿ ಮಗ್ನರಾಗಬೇಕು. ಉದಾಹರಣೆಗೆ ಒಬ್ಬ ಸೇನಾಧಿಕಾರಿ ತನ್ನ ಹಿತಾಸಕ್ತಿಗೋಸ್ಕರ ಕೇವಲ ಹತ್ತು ರೂಪಾಯಿಗಳನ್ನು ಕೂಡಾ ತೆಗೆದುಕೊಂದರೆ ಶಿಕ್ಷೆಗೊಳಗಾಗುತ್ತಾನೆ. ಆದರೆ ಯುದ್ಧದಲ್ಲಿ ದೆಶದ ಹಿತಕ್ಕೋಸ್ಕರ ನೂರಾರು ಜನರನ್ನು ಕೊಂದಾಗ ಬಹುಮಾನಗಳಿಂದ ಸನ್ಮಾನಿಸಲ್ಪಡುತ್ತಾನೆ. ಹಾಗೆಯೇ ಸಮಗ್ರ ಹಿತಾಸಕ್ತಿಯಲ್ಲಿ ಮಾಡಿದ ಯಾವುದೇ ಕಾರ್ಯ ಒಳ್ಳೆಯದು ಅನಿಸಿಕೊಳ್ಳುತ್ತದೆ. ಆದರೆ ಯವುದೆ ಕೆಲಸವನ್ನು ತನ್ನ ಸ್ವಂತ ಹಿತಾಸಕ್ತಿಗೋಸ್ಕರ ಅಥವಾ ಬಂಧುಬಾಂಧವರ ಹಿತಾಸಕ್ತಿಗೋಸ್ಕರ ಮಾಡಿದಾಗ ನೀವು ಯಾವುದಾದರೊಂದು ರೀತಿಯಲ್ಲಿ ನಕಾರಾತ್ಮಕ ಪ್ರತಿಕ್ರಿಯೆಗಳ ಮೂಲಕ ಶಿಕ್ಷಿಸಲ್ಪಡುತ್ತೀರಿ.

ಶೋಷಣೆಯ ಮಾರ್ಗವಾಗಲಿ, ವೈರಾಗ್ಯದ ಮಾರ್ಗವಾಗಲಿ ಎರಡೂ ಸರಿಯಾದ ಮಾರ್ಗಗಳಲ್ಲ. ಶೋಷಣೆ ಮತ್ತು ವೈರಾಗ್ಯ ಎರಡೂ ಅತಿರೇಕ. ಸಮರ್ಪಣೆಯ ಬದುಕು ಆನಂದಮಯ ಬದುಕು. ಒಂದು ವ್ಯವಸ್ಥಿತ ಸಮಗ್ರತೆಯ ಸಾಮನ್ಯ ಹಿತಾಸಕ್ತಿಯೆಂದರೆ, ಅಖಂಡತೆಯ ಪ್ರತಿಯೊಂದು ಘಟಕಗಳು ಅಖಂಡತೆಯ ಕೇಂದ್ರಶಕ್ತಿಗೆ ಸಮರ್ಪಿತರಾಗಿರುವುದು. ಮತ್ತು ಕೇಂದ್ರಶಕ್ತಿ ಎಂದರೆ ಸಮಗ್ರತೆ ಎಂದರ್ಥ. ಯಾವಾಗ ನಾವು ಆಹಾರವನ್ನು ಹೊಟ್ಟೆಗೆ ಹಾಕುತ್ತೇವೆಯೋ ದೇಹದ ಪ್ರತಿಯೊಂದು ಅಂಗಾಂಗಗಳಿಗೂ ಅವುಗಳ ಅವಶ್ಯಕತೆಗಳಿಗನುಗುಣವಾಗಿ ದೇಹದ ಮೂಲೆ ಮೂಲೆಗೂ ಹೊಟ್ಟೆಯಿಂದ ಆಹಾರದ ಸರಬರಾಜು ವ್ಯವಸ್ಥಿತವಾಗಿ ನಡೆಯುತ್ತದೆ. ಈ ಮಾದರಿಯ ಬದುಕೇ ಆಸ್ತಿಕ ಬದುಕು ಅಥವಾ ವೈಷ್ಣವ ಧರ್ಮ. ಇಲ್ಲಿ ಒಂದು ವ್ಯವಸ್ಥಿತ ಸಮಗ್ರತೆಯಿದೆ, ನಾವೆಲ್ಲ ಅದರ ಅಂಗಗಳು. ಆ ಸಮಗ್ರತೆಗೆ

ಸಂಬಂಧಿಸಿ ನಮ್ಮೆಲ್ಲರಿಗೂ ವಿಶೇಷ ಕರ್ತವ್ಯಗಳಿವೆ. ಆ ಕರ್ತವ್ಯಗಳ ಯುಕ್ತ ನಿರ್ವಹಣೆಯೇ ಸಮರ್ಪಣೆ. ನಾವು ಕಣ್ಣಿನೊಳಗಾಗಲಿ, ಮೂಗಿನೊಳಗಾಗಲಿ, ಅಥವಾ ಕಿವಿಯೊಳಗಾಗಲಿ, ಆಹಾರವನ್ನು ಹಾಕುವುದಿಲ್ಲ.ಹೊಟ್ಟೆಯನ್ನಲ್ಲದೇ ಬೇರೆಲ್ಲಿಗೂ ಆಹಾರವನ್ನು ಹಾಕುವುದಿಲ್ಲ. ಹೊಟ್ಟೆಯೊಳಗೆ ಆಹಾರವನ್ನು ಹಾಕಿದಾಗ ಮಾತ್ರ ಅದು ಸುಸೂತ್ರವಾಗಿ ಎಲ್ಲ ಅಂಗಗಳಿಗೂ ಸರಬರಾಜಾಗುತ್ತದೆ, ಮತ್ತು ನಮ್ಮ ದೈಹಿಕ ವ್ಯವಸ್ಥೆ ಆರೋಗ್ಯಕರವಾಗಿರುತ್ತದೆ. ನಾವೆಲ್ಲರೂ ಆ ಸಮಗ್ರತೆಯ ಅಂಗಗಳು. ಆ ಸಮಗ್ರತೆಗೋಸ್ಕರ ದುಡಿಯುವುದೇ ನಮ್ಮ ಕರ್ತವ್ಯ ಮತ್ತು ಆ ಕರ್ತವ್ಯವೇ ಭಕ್ತಿ. ಸಮರ್ಪಣೆ ಅಥವಾ ಶರಣಾಗತಿ.

ಇದನ್ನು ಅರಿಯುವುದು ಹೇಗೆ? ಪ್ರಕಟಿತ ವೈದಿಕ ಗ್ರಂಥಗಳಿಂದ ನಾವು ಸಹಾಯವನ್ನು ಪಡೆಯಬಹುದಾಗಿದೆ, ಅಲ್ಲದೇ, ನಮ್ಮನ್ನು ಈ ಸಮನ್ವಯತೆಗೆ ಕೊಂಡೊಯ್ಯಲು ಆ ಲೋಕದಿಂದ ಅವತರಿಸುವ ಹಲವು ಸಾಧು ಸಂತರಿಂದಲೂ ನಾವು ಸಹಾಯವನ್ನು ಪಡೆಯಬಹುದಾಗಿದೆ.

ಹದಿನೈದನೇ ಶತಮಾನದ ಶ್ರೇಷ್ಠ ಸಂತ ಶ್ರೀ ಚೈತನ್ಯರು ದಿವ್ಯ ಸಮನ್ವಯದ ಧರ್ಮವನ್ನು ಬೋಧಿಸಿದರು. ಎಲ್ಲಾ ಪ್ರಕಟಿತ ವೈದಿಕ ಗ್ರಂಥಗಳಿಗೆ ಉಪಸಂಹಾರಗಳೆಂದು ಪರಿಗಣಿಸಲ್ಪಟ್ಟಿರುವ, ಎಲ್ಲಾ ಶಾಸ್ತ್ರಗಳಿಗೂ ಪ್ರಮಾಣಗಳಾಗಿರುವ ಭಗವದ್ಗೀತೆ ಮತ್ತು ಭಾಗವತ ಪುರಾಣಗಳನ್ನು ಆಧರವಾಗಿಟ್ಟುಕೊಂಡು ಶ್ರೀ ಚೈತನ್ಯರು ಭಕ್ತಿಮಾರ್ಗದ ವಿಧಾನವನ್ನು ಪರಿಚಯಿಸಿದರು. ಈ ಮೂಲಕ ಅವರು ವೀರ್ಯ ಅಥವಾ ಶಕ್ತಿ ಸಾಮರ್ಥ್ಯಗಳಿಂದ ಜ್ಞಾನವು ಮಿಗಿಲಾದುದು ಎಂದು ವಿವರಿಸಿದರು. ಜ್ಞಾನವು ಬಲವನ್ನು ನಿಯಂತ್ರಿಸಬಲ್ಲುದು ಮತ್ತು ಅದಕ್ಕಿಂತ ಉನ್ನತವಾದ ಪ್ರಯೋಜನಕಾರಿ ಫಲಿತಾಂಶವನ್ನು ನೀಡಬಲ್ಲದು. ಆದರೆ ಜ್ಞಾನಕ್ಕೂ ಮೇಲ್ಪಟ್ಟು ಪ್ರೇಮ ಮತ್ತು ಭಾವಗಳು ಇರುವುದರಿಂದ ಅವುಗಳಿಗೆ ಹೋಲಿಸಿದರೆ ಜ್ಞಾನವೂ ಕೂಡಾ ಕಳಮಟ್ಟದ್ದೆ. ಪ್ರೇಮ ಭಾವವು ಎಲ್ಲಕ್ಕಿಂತಲೂ ಮಿಗಿಲಾದುದು ಮತ್ತು ಬಲ

ಮತ್ತು ಜ್ಞಾನಗಳ ಹೊರತಾಗಿಯೂ ಪ್ರೇಮಭಾವವೊಂದೇ ನಮಗೆ ಬದುಕಿನ ಪರಿಪೂರ್ಣತೆಯನ್ನು ನೀಡಬಲ್ಲದು ಎಂದು ಶ್ರೀ ಚೈತನ್ಯರು ವಿವರಿಸಿದರು.

ದಯೆಯು ನ್ಯಾಯಕ್ಕಿಂತ ಮಿಗಿಲಾದುದು, ನೀತಿನಿಯಮಗಳ ಅವಶ್ಯಕತೆಯಿರುವಲ್ಲಿ ಮಾತ್ರ ನ್ಯಾಯದ ಅಸ್ತಿತ್ತ್ವವಿರುತ್ತದೆ. ಆದರೆ ಸಕಲಸದ್ಗುಣಗಳ ಸಾಕಾರವಾಗಿರುವ ಪರಾತ್ಪರನ ನಿರಂಕುಶ ಪ್ರಭುತ್ತ್ವದ ಸಾಮ್ರಾಜ್ಯದಲ್ಲಿ, ಅವನಿಂದ ಅಥವಾ ಇತರರಿಂದ ಭಯ ಅಥವಾ ಶಂಕೆಯ ಪ್ರಶ್ನೆಯೇ ಇಲ್ಲ. ಅವನು ಸಕಲ ಸದ್ಗುಣಗಳ ಪ್ರಭು, ಅಂದರೆ ನಿರಂಕುಶ ಪ್ರೇಮ ಹಾಗೂ ಭಾವದ ಮೂಲ. ಅವನ ನೆಲೆಯೇ ನಮ್ಮ ಮನೆ! ಮರಳಿ ಭಗವಂತನಲ್ಲಿಗೆ! ಮರಳಿ ಮನೆಗೆ!

ಮನೆ ಎಂದರೆ ಏನು? ನಾವು ಸಂಪೂರ್ಣವಾಗಿ ನಮ್ಮ ಹಿತಚಿಂತಕರ ಮಧ್ಯದಲ್ಲಿದ್ದೇವೆ  ಎಂಬುದನ್ನು ಎಲ್ಲಿ ನಾವು ಕಂಡುಕೊಳ್ಳುತ್ತೇವೆಯೋ ಅದೇ ನಮ್ಮ ನಿಜವಾದ ಮನೆ. ನಾವು ಸ್ವತಃ ನಮ್ಮ ಹಿತಾದಕ್ತಿಗಳಬಗ್ಗೆ ನಿಗಾವಹಿಸದಿದ್ದರೂ, ನಮ್ಮ ಬಗ್ಗೆ ಕಳಕಳಿ ತೋರುವವರು ನಮ್ಮೊಡನಿರುತ್ತಾರೆ, ಸಂಪೂರ್ಣ ಪರಿಸರವೇ ನಮ್ಮ ಬಗ್ಗೆ ಆಸಕ್ತವಾಗಿರುತ್ತದೆ ಮತ್ತು ನಮ್ಮ ಹಿತಚಿಂತನೆಯನ್ನು ಮಾಡುತ್ತದೆ. ಅದೇ ನಿಜವಾದ ಮನೆ, ಅದೇ ಪರಾತ್ಪರನ ಸಾಮ್ರಾಜ್ಯ, ಅಲ್ಲಿ ನಾವು ನಮ್ಮ ಅತ್ಯುನ್ನತ ಪದವಿಯಲ್ಲಿ ಅವನ ನಿರಂತರ ಸೇವೆಗೆ ಪ್ರವೇಶವನ್ನು ಪಡೆಯಬಹುದು. ಆ ಮೂಲಕ ಅಲ್ಲಿ ಆಸ್ತಿತ್ತ್ವದಲ್ಲಿರುವ ಪ್ರೇಮ, ಭಾವ, ಸೌಂದರ್ಯ ಹಾಗೂ ಸಮನ್ವಯತೆಯನ್ನು ಪ್ರತ್ಯಕ್ಷವಾಗಿ ಅನುಭವಿಸಬಹುದು. ಈ ಎಲ್ಲ ಗುಣಗಳೂ ಇಲ್ಲಿ ಸಮಾನರೂಪದಲ್ಲಿದ್ದು ಇವೆಲ್ಲವೂ ಸಕಲಕ್ಕೂ ಮೂಲಕಾರಣನ ಪ್ರಮುಖ ಗುಣಲಕ್ಷಣಗಳನ್ನೊಳಗೊಂಡಿವೆ. ನಾವು ಅಲ್ಲಿಗೆ ಹೋಗಬೇಕು! ನಮ್ಮ ಅನಿರ್ಬಂಧಿತ ಸಂಕಲ್ಪವನ್ನು ದುರುಪಯೋಗಪಡಿಸಿಕೊಂಡು, ಸನ್ಮಾರ್ಗದ ದಾರಿಯನ್ನು ಬಿಟ್ಟು ಹೇಗೋ ಇಲ್ಲಿಗೆ ಬಂದಿರುವೆವು, ಆದರೆ ಈಗ ನಾವು

ಆ ಲೋಕಕ್ಕೆ ಕರೆಯಲ್ಪಟ್ಟಿದ್ದೇವೆ "ಮರಳಿ ಬನ್ನಿ! ಮರಳಿ ಭಗವಂತನೆಡೆಗೆ, ಮರಳಿ ಮನೆಗೆ ಬನ್ನಿ! ನಿಮ್ಮ ಅತ್ಯುನ್ನತವಾದ ಸ್ಥಾನವನ್ನು ಪಡೆದುಕೊಳ್ಳಿ, ಪವಿತ್ರ ಪ್ರೇಮದ ಧರೆಗೆ ಬನ್ನಿ!"

ಈ ಮೂಲಕ ಪ್ರಧಾನ ವಿಷಯದ ಒಟ್ಟು ಸಾರಾಂಶವನ್ನು ಲಘುವಾಗಿ ಪ್ರಸ್ತುತಪಡಿಸಿದ್ದೇನೆ. ಇದು ಭಗವದ್ಗೀತೆ ಮತ್ತು ಭಾಗವತಗಳಲ್ಲಿ ಕಂಡುಬರುವ ಭಗವತ್ಪ್ರಜ್ಞೆಯ ಸ್ಪಷ್ಟ ಪರಿಕಲ್ಪನೆ ಮತ್ತು ಇದೇ ಶ್ರೀ ಚೈತನ್ಯರಿಂದ ಕೊಡಲ್ಪಟ್ಟ ಭಗವತ್ಪ್ರಜ್ಞೆಯ ಪರಿಕಲ್ಪನೆ. ಆ ಲೋಕಕ್ಕೆ ತೆರಳಿ, ನಿಮ್ಮ ಜೀವನವನ್ನು ಅಲ್ಲಿಯ ಕೇಂದ್ರಕ್ಕೆ ಸಂಪೂರ್ಣವಾಗಿ ಸಮರ್ಪಿಸಿ, ಆ ಲೋಕವು ನ್ಯಾಯದ ಪ್ರಕ್ರಿಯೆಗೆ ಸಂಪೂರ್ಣವಾಗಿ ಅತೀತವಾದುದು, ಅದು ಸಂಪೂರ್ಣವಾಗಿ ದಯಾಮಯವಾದುದು, ಸಂಪೂರ್ಣವಾಗಿ ಭಾವಪೂರ್ಣವಾಗಿರುವುದು, ಪ್ರೇಮಮಯವಾದುದು ಮತ್ತು ಅತ್ಯಂತ ಸುಂದರವಾದುದು.

ಭಗವದ್ಗೀತೆಯು ಎಲ್ಲಾ ಧಾರ್ಮಿಕ ವಿಚಾರಗಳ ಬಗ್ಗೆ ಒಂದು ಸಂಕ್ಷಿಪ್ತ ಪಕ್ಷಿನೋಟವನ್ನು ಕೊಡುತ್ತದೆ, ಅದೇನೆಂದರೆ, ಶೋಷಣೆ, ಪರಿತ್ಯಾಗ ಮತ್ತು ಸಮರ್ಪಣೆ ಇವು ಜೀವನದ ಮೂರು ಮಟ್ಟಗಳು, ಮತ್ತು ಶುದ್ಧಾತ್ಮನು ಸಮರ್ಪಣಾ ಲೋಕದ ಸದಸ್ಯ. ಎಲ್ಲಾ ಆತ್ಮಗಳು ಸಮರ್ಪಣೆಯ ಘಟಕಗಳು. ಆದರೆ, ಹೇಗೋ ತಮ್ಮ ಭಾಗಶಃ ನಿರ್ಬಂಧಿತ ಸಂಕಲ್ಪವನ್ನು ದುರುಪಯೋಗಪಡಿಸಿಕೊಂಡು, ಶೋಷಣೆಯ ಪ್ರಪಂಚಕ್ಕೆ ಪ್ರವೇಶಿಸಿವೆ. ಬುದ್ಧ ಹಾಗೂ ಇತರ ಹಲವರು ಕ್ರಿಯೆ ಮತ್ತು ಪ್ರತಿಕ್ರಿಯೆಗಳಿಂದ ಸಂಪೂರ್ಣ ನಿವೃತ್ತಿ ಹೊಂದುವ ಮೂಲಕ ಶೋಷಣೆಯ ಪ್ರಪಂಚದಿಂದ ಹೊರಬಂದು ಈ ಪ್ರಪಂಚದಿಂದ ಹಿಂದೆಗೆಯಬೇಕೆಂದು ಕೊಳ್ಳುತ್ತಾರೆ. ಅವರು ಇಲ್ಲಿಂದ ನಿವೃತ್ತಿ ಹೊಂದಿದ ನಂತರ ಆತ್ಮನು ಆನಂದದಿಂದ ಇರಬಹುದು ಎಂದು ಹೇಳಿದ್ದಾರೆ. ಅದಾಗ್ಯೂ ಈ ಆತ್ಮಗಳು ಯಾವುದೇ ಸಂದರ್ಭದಲ್ಲಿ ಮತ್ತೆ ಈ ಶೊಷಣೆಯ ಪ್ರಪಂಚಕ್ಕೆ ಹಿಂದಿರುಗುವ ಸಂಭವವಿರುತ್ತದೆ.

ಆದರೆ ಎಲ್ಲಿ ಸಂಪೂರ್ಣ ಮುಕ್ತ ಜೀವಗಳು ಬದುಕುತ್ತಿವೆಯೋ, ಆ ಎಲ್ಲ ಜೀವಗಳೂ ಸಂಪೂರ್ಣ ಸಮರ್ಪಿತ ಘಟಕಗಳು. ಇವುಗಳನ್ನು ಆ ಸಮರ್ಪಣೆಯ ಲೋಕದಲ್ಲಿ ಯಾವುದು ಸಮನ್ವಯ ಗೊಳಿಸಿದೆ? ಅವುಗಳನ್ನು ಯಾರು ಪೋಷಿಸುತ್ತಾರೆ? ಎಂದು ಶೋಧಿಸಿದರೆ, ಆ ಮುಕ್ತ ಘಟಕಗಳೆಲ್ಲವೂ ಅಖಂಡತೆಯನ್ನು ಪ್ರತಿನಿಧಿಸುವ ಸರ್ವಗುಣಸಂಪನ್ನ ಏಕೈಕ ನಿರಂಕುಶ ಪ್ರಭುವಿನ ನಿರಂತರ ಸೇವೆಯಲ್ಲಿ ತೊಡಗಿರುವುದನ್ನು ಕಾಣಬಹುದು.

ಆದರೆ ಇದನ್ನು ಅರ್ಥೈಸಿಕೊಳ್ಳಲು ನೀವು, ಇದರ ಆಳಕ್ಕೆ ಧುಮುಕಬೇಕು. ಮನಸ್ಸು ಮತು ಬುದ್ಧಿಗಳ ಮಟ್ಟದಿಂದ ಇನ್ನೂ ಆಳಕ್ಕೆ ಅಂದರೆ ಆತ್ಮನ ಮಟ್ಟಕ್ಕೆ ಧುಮುಕಬೇಕು. ನಮ್ಮೊಳಗೆ ಇರುವ ನೈಜತೆಯ ಆಳಕ್ಕೆ ಧುಮುಕಬೇಕು. ಆತ್ಮ ಎನ್ನುವುದು ಎರವಲು ಪಡೆದುಕೊಳ್ಳಬಹುದಾದ ಪರಕೀಯ ವಸ್ತುವಲ್ಲ, ಇದು ಪ್ರತಿಯೊಬ್ಬರಲ್ಲಿಯೂ ಇರುವಂಥಾದ್ದು, ಕೀಟಗಳು ಮತ್ತು ಮರಗಿಡಗಳಲ್ಲಿಯೂ ಆತ್ಮನ ಅಸ್ತಿತ್ವವಿದೆ. ಆದ್ದರಿಂದ ನಾವು ಆ ಆತ್ಮನ ಮಟ್ಟಕ್ಕೆ ಏರಬೇಕು. ದೈಹಿಕ ಮತ್ತು ಮಾನಸಿಕ ಕವಚಗಳನ್ನು ತೆಗೆದುಹಾಕಿ ನಮ್ಮನ್ನು ನಾವು ಕಂಡುಕೊಳ್ಳಬೇಕು. ಆಗ ನಮಗೆ ಯೋಗ್ಯ ರೀತಿಯಲ್ಲಿ ನಮ್ಮ ನೈಜ ಬದುಕನ್ನು ಬದುಕುವ, ನೈಜ ಪ್ರಪಂಚದ ಸುಳಿವನ್ನು ನೀಡಬಲ್ಲ ಮಾರ್ಗವು ಗೋಚರಿಸುತ್ತದೆ.

ನಾವು ಆ ಉನ್ನತ ಲೋಕದಲ್ಲಿ ಬದುಕ ಬೇಕಿದ್ದರೆ, ನಾವು ಸೇವೆ ಮಾಡಲೇ ಬೇಕು. ತ್ಯಾಗ ಮನೋಭಾವದಲ್ಲಿ ಸೇವೆ ಮಾಡುವುದರಿಂದ ನಾವು ಮೇಲ್ಮಟ್ಟಕ್ಕೆ ಏರುತ್ತೇವೆ. ಭೌತಿಕ ಸುಖಾನುಭವದ ಉತ್ಸಾಹದಲ್ಲಿ ನಾವು ಅಧಃ ಪತನ ಗೊಳ್ಳುತ್ತೇವೆ. ಶೋಷಣೆ ಎಂದರೆ ಏನು, ಸುಖಾನುಭವ ಎಂದರೆ ಏನು ಮತ್ತು ತ್ಯಾಗಮನೋಭಾವದಲ್ಲಿ ಮಾಡುವ ಉನ್ನತವಾದ ಸೇವೆ ಎಂದರೇನೆಂದು ನಾವು ಅರ್ಥೈಸಿಕೊಳ್ಳಬೆಕಾಗಿದೆ. ದೈವಿಕ ಸೇವೆ ಶುದ್ಧವಾದದ್ದು, ಮತ್ತು ಆ ಸೇವೆಯನ್ನು ಮಾಡುವುದರಲ್ಲಿ ಒಂದು ತರಹದ ನೈಜ ಸುಖಾನುಭವವಿದೆ,

ಆನಂದವಿದೆ. ನಮನ್ನು ನಾವು ಅರ್ಪಿಸುವುದರಿಂದ ನಮಗೆ ಲಾಭವಿದೆ, ಮತ್ತು ಶೋಷಿಸುವುದರಿಂದ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಇವೆಲ್ಲವನ್ನು ನಾವು ಪರಿಗಣಿಸ ಬೇಕಾಗುತ್ತದೆ ಮತ್ತು ಇದನ್ನು ವಿವೇಚಿಸಲು ಮತ್ತು ಅರ್ಥೈಸಿಕೊಳ್ಳಲು ಮನುಷ್ಯ ಜನ್ಮವು ಬಹಳ ಅವಶ್ಯಕವಾಗಿದೆ. ಆ ಉನ್ನತ ಲೋಕಗಳ ಪ್ರತಿನಿಧಿಗಳ ಹಾಗೂ ಸಂತರ ಸಂಪರ್ಕದಲ್ಲಿ ಶೊಷಣೆಯ ಪ್ರಪಂಚದ ಬಂಧವನ್ನು ಕಳಚಿಕೊಂಡು, ಪ್ರೇಮ, ಭಾವ ಹಾಗೂ ಸಮರ್ಪಣೆಯ ಲೋಕಕ್ಕೆ ಪ್ರವೇಶಿಸುವ ಅತ್ಯುತ್ತಮ ಪ್ರಯತ್ನವನ್ನು ಮಾಡೋಣ.

## ಭಾಗ ೨

# ಆತ್ಮನ ನೆಲೆ

"ಆ ನಮ್ಮಮನೆ  ಸ್ವಾತಂತ್ರ್ಯ ಮತ್ತು ನೆಮ್ಮದಿಗಳ ತಾಣವಾಗಿದೆ. ಆ ತಾಣವು ಪ್ರೇಮ, ಭಾವ ಹಾಗೂ ವಿಶ್ವಾಸಗಳ ಸ್ವಾಭಾವಿಕ ವಿನಿಮಯದ ಸ್ಥಳವಾಗಿದೆ ಮತ್ತು ಅದು ಅಲೌಕಿಕವಾದುದಾಗಿದೆ. ಯೋಚನೆಗೆ ನಿಲುಕದ ವಿಷಯವನ್ನು ತಾರ್ಕಿಕವಾಗಿ ಪರೀಕ್ಷಿಸುವ ಸಾಹಸವನ್ನು ಮಾಡಬೇಡಿ. ಆ ಲೋಕವು ಯಥಾರ್ಥವಾಗಿ ನಿಮ್ಮ ಯೋಚನೆಯ ಸಾಮರ್ಥ್ಯವನ್ನು ಮೀರಿದ್ದಾಗಿದೆ. ಅದು ಭಿನ್ನ ರೀತಿಯ ನಿಯಮಗಳಿಗೊಳಪಟ್ಟಿದೆ. ಈ ಲೋಕದಲ್ಲಿ ನಿಮ್ಮ ಗಣಿತದ ಲೆಕ್ಕಾಚಾರಗಳು ಹಾಗೂ ನಿರ್ಣಯಗಳು ಬಿಂದು, ಘನ ಹಾಗೂ ಮಟ್ಟಗಳ ಮೂಲಕ ತೀರ್ಮಾನಿಸಲ್ಪಡುತ್ತವೆ. ಪ್ರಸ್ತುತ ನೀವು ಘನ ರೂಪದ ಪ್ರಪಂಚದ ವ್ಯಕ್ತಿಯಾಗಿರುವಿರಿ, ಮತ್ತು ಇಲ್ಲಿಯ ಮಟ್ಟಗಳೊಂದಿಗೆ ಮತ್ತು ಬಿಂದುಗಳೊಂದಿಗೆ ನೀವು ಒಂದುರೀತಿಯ ಅಸ್ವಾಭವಿಕವಾದ ನಿಯಮಿತ ಸಂಬಂಧನ್ನು ಹೊಂದಿದ್ದೀರಿ. ಹಾಗಿರುವಾಗ ನಿಮ್ಮ ತಿಳುವಳಿಕೆಗೆ ಮೀರಿದ ಉನ್ನತ ವಸ್ತುಗಳ ಬಗ್ಗೆ ಹೇಗೆ ಲೆಕ್ಕಾಚಾರ ಮಾಡುವಿರಿ?  ಆ ಪ್ರದೇಶದ ಜೀವನ ವಿಧಾನ ಹಾಗೂ ಅಲ್ಲಿನ ನಿಯಮಗಳು ನಿಮಗೆ ಅಪರಿಚಿತವಾದವುಗಳಾಗಿವೆ. ಹಾಗಾಗಿ ನೀವು ಅವುಗಳಬಗ್ಗೆ ಚರ್ಚಿಸುವ ಪ್ರಯತ್ನ ಮಾಡಲಾರಿರಿ. ಆ ಲೋಕವು ಸಂಪುರ್ಣವಾಗಿ ಒಂದು ಬೇರೆ ಸ್ವರೂಪದ್ದಾಗಿದೆ, ಹಾಗಾಗಿ ನಿಮ್ಮ ಯೋಚನೆಯ ಸಾಮರ್ಥ್ಯಕ್ಕೆ ನಿಲುಕದ ಅ ವಸ್ತುಗಳನ್ನು ನಿಮ್ಮ ಪ್ರಯೋಗಶಾಲೆಯ ಪರಿಧಿಯೊಳಗೆ ತರಲು ಮುಂದಾಗಬೇಡಿ. ಅದು ಮೂರ್ಖತನವಾದೀತು" ಎಂದು ಶಾಸ್ತ್ರಗಳು ಹೇಳುತ್ತವೆ.

ಉನ್ನತವಸ್ತುಗಳು ಅಸ್ತಿತ್ತ್ವದಲ್ಲಿವೆ, ಆದರೆ ಈ ಲೋಕದ ಸಾಮಾನ್ಯ ಮನುಷ್ಯನಿಗೆ ಅವುಗಳಬಗ್ಗೆ ತಿಳುವಳಿಕೆಯಿಲ್ಲ. ನಾವು ಅನುಭವಿಗಳು ಮತ್ತು ತಿಳುವಳಿಕೆಯುಳ್ಳವರು ಹೌದು! ಆದರೆ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ನಿರ್ದಿಷ್ಟ ಹಂತದವರೆಗೆ ಮಾತ್ರ ನಾವು ಅವುಗಳನ್ನು ಅವಲಂಬಿಸಬಹುದು. ನಮ್ಮ ವ್ಯಾಪ್ತಿಗೆ ಮೀರಿದ ವಿಚಾರಗಳನ್ನು ವಿಮರ್ಶೆ ಮಾಡುವ ಸಾಹಸವನ್ನು ನಾವು ಮಡಬಾರದು. ಉನ್ನತ ಲೋಕಗಳ ಪ್ರತ್ಯಕ್ಷ ಅನುಭವವಿರುವವರು ನಮ್ಮಲ್ಲಿಗೆ ಬಂದು ಕೆಲವು ಮಾಹಿತಿಗಳನ್ನು ಕೊಡುತ್ತಾರೆ. ಆಗ ನಾವು ಕೆಲವು ಹೋಲಿಕೆಗಳ ಮೂಲಕ ಅವುಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಮಾಡಬಹುದು. "ಈ ಮಹನೀಯರೊಬ್ಬರು ಆಕಾಶದ ಬಗ್ಗೆ ತಮ್ಮ ಒಂದು ನಿರ್ದಿಷ್ಟ ಅನುಭವವನ್ನು ಹೀಗೆ ಬರೆದಿದ್ದಾರೆ; ಇನ್ನೊಬ್ಬ ಮಹನೀಯರು ಆಕಾಶದ ಬಗ್ಗೆ ತಾವು ಮಾಡಿದ ಪ್ರಯೋಗ ಹಾಗೂ ತಮ ಅನುಭವವನ್ನು ಇನ್ನೊಂದು ರೀತಿಯಲ್ಲಿ ವಿವರಿಸಿದ್ದಾರೆ" ಈ ಮೂಲಕ ಒಂದು ನಿರ್ದಿಷ್ಟ ವಸ್ತುವಿನ ಬಗ್ಗೆ ನೈಜ ಸಂಬಂಧ ಹೊಂದಿರುವ ವ್ಯಕ್ತಿಗಳು ಮಾಡಿರುವ ವಿವಿಧ ಸಂಶೋಧನೆಗಳಿಂದ ನಾವು ಆ ವಸ್ತುಗಳ ಬಗ್ಗೆ ಸ್ವಲ್ಪ ಜ್ಞಾನವನ್ನು ಗಳಿಸಬಹುದು.

ಬೇರೆ ಬೇರೆ ವ್ಯಕ್ತಿಗಳು ತಮ್ಮ ದೂರದರ್ಶಕಗಳ ಮೂಲಕ ಶೋಧಿಸಿ ಕಂಡುಕೊಂಡ ಫಲಿತಾಂಶಗಳಿಂದ ನಾವು ಕೆಲವು ಹೋಲಿಕೆಗಳನ್ನು ಮಾಡಬಹುದು. ಒಬ್ಬ ಶೋಧಕನು ತನ್ನ ನಿರ್ದಿಷ್ಟ ದೂರದರ್ಶಕದಲ್ಲಿ ಕಂಡು ಕೊಂಡ ಒಂದುಬಗೆಯ ಅನುಭವದೊಡನೆ, ಇತರ ಶೋಧಕರು ತಮ್ಮ ನಿರ್ದಿಷ್ಟ ದೂರದರ್ಶಕಗಳಲ್ಲಿ ಕಂಡು ಕೊಂಡ ಅನುಭವಗಳ ಬಗ್ಗೆ ಕೂಡಾ ನಮಗೆ ಮಾಹಿತಿ ದೊರೆಯುತ್ತದೆ. ದೂರದರ್ಶಕಗಳೊಂದಿಗೆ ಅವರಿಗಿರುವ ನಿಕಟ ಸಂಪರ್ಕದಿಂದ ಮತ್ತು ಅವರ ಶೋಧನೆಗಳಿಂದ ನಮಗೆ ದೊರಕುವ ವಿವಿಧ ಮಾಹಿತಿಗಳಿಂದ "ಬಹುಷಃ ಒಂದು ನಿರ್ದಿಷ್ಟ ದೂರದರ್ಶಕವು ಇನ್ನೊಂದು ನಿರ್ದಿಷ್ಟ ದೂರದರ್ಶಕದಿಂದ ಹೆಚ್ಚು ಶಕ್ತಿಯುತವಾಗಿರಬಹುದು" ಎಂಬ ನಿರ್ಣಯಕ್ಕೆ ಬರಲು ಸಾಧ್ಯವಾಗಬಹುದು.

ಆದ್ದರಿಂದ ನಾವು ದೂರದರ್ಶಕವನ್ನು ಪ್ರತ್ಯಕ್ಷವಾಗಿ ನೋಡದೇ ಇದ್ದರೂ, ದೂರದರ್ಶಕದ ಮಾಧ್ಯಮದಿಂದ ಕಂಡುಕೊಂಡ, ನಮ್ಮ ಇಂದ್ರಿಯಗಳ ಸಾಮರ್ಥ್ಯಕ್ಕೆ ನಿಲುಕದ ವಿಷಯಗಳಬಗ್ಗೆ ಕೆಲವು ಹೋಲಿಕೆಗಳನ್ನು ಮಾಡುವ ನಿಯಮಿತ ಸಾಮರ್ಥ್ಯವನ್ನು ಹೊಂದಿರುತ್ತೇವೆ.

ಅಲೌಕಿಕ ವಸ್ತುಗಳ ಬಗ್ಗೆ ಶೋಧಿಸಲ್ಪಟ್ಟ ವಿಷಯಗಳನ್ನು ಮನಃಶಕ್ತಿಯ ದೂರದರ್ಶಕದ ಮೂಲಕ ಅಥವಾ ಆತ್ಮದ ದೂರದರ್ಶಕದ ಮೂಲಕ ಪ್ರಕಟಿತ ವೇದಶಾಸ್ತ್ರಗಳ ಆಧಾರದಲ್ಲಿ ವಿಮರ್ಶಿಸಲಾಗುತ್ತದೆ. ಅಂತಹ ವಿಷಯಗಳನ್ನು ನಾವು ಸಾಧುಸಂತರ ಸಹಾಯದಿಂದ ತಿಳಿದುಕೊಳ್ಳಬಹುದು. ಆ ಮೂಲಕ ನಾವು ಆ ಲೋಕಗಳಿಗೆ ಪ್ರವೇಶವನ್ನು ಪಡೆಯಬಹುದು. ಪ್ರಸ್ತುತ ನಾವು ಉನ್ನತ ಮಟ್ಟದ ವಸ್ತುಗಳಬಗ್ಗೆ ಅರಿಯುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಆದರೆ ಸಾಧುಸಂತರ ಮತ್ತು ವೇದ ಶಾಸ್ತ್ರಗಳ ಸಹಾಯವನ್ನು ಪಡೆದನಂತರ ನಮ್ಮದೇ ಆದ ಮನಃಶಕ್ತಿಯ ದೂರದರ್ಶಕದಿಂದ ಅಂತಹ ಉನ್ನತ ವಸ್ತುಗಳ ಅನುಭವವನ್ನು ಪಡೆಯಬಹುದು.

ಪ್ರತಿಯೊಂದು ವಸ್ತುವನ್ನು ವಾದವಿವಾದದಿಂದ ನಿರ್ಣಯಿಸಲು ಪ್ರಯತ್ನಿಸಬೇಡಿ. ತರ್ಕವೇ ಪರಿಪೂರ್ಣವಲ್ಲ, ನಮ್ಮ ಪ್ರತಿಯೊಂದು ನಂಬಿಕೆಯೂ ಕಡ್ಡಾಯವಾಗಿ ವಾದವಿವಾದಗಳನ್ನು ಅವಲಂಬಿಸಿರಬೇಕೆಂದಿಲ್ಲ. ಆಧ್ಯಾತ್ಮಿಕ ಜಗತ್ತು ಅಚಿಂತ್ಯವಾದುದು. ಹಾಗಿದ್ದರೂ, ನಾವು ನಮ್ಮ ಶ್ರದ್ಧೆ, ಸಾಮರ್ಥ್ಯ ಹಾಗೂ ತಿಳುವಳಿಕೆಗನುಗುಣವಾಗಿ ಅಲ್ಲಿಯ ವಿಷಯಗಳನ್ನು ಅರ್ಥೈಸಿಕೊಳ್ಳಬಹುದು. ಎಲ್ಲಕ್ಕೂ ಮಿಗಿಲಾಗಿ ನಾವು ನಮ್ಮ ಮನಸ್ಸಿನೊಳಗೆ "ಆ ಮಾಧುರ್ಯತೆಯು ಅತಿ ಮಧುರ ಮತ್ತು ಆ ಸತ್ಯವೇ ಪರಮ ಸತ್ಯ" ಎಂಬ ವಿಷಯಕ್ಕೆ ನಮ್ಮ ಚಿತ್ತದಲ್ಲಿ ಸ್ಥಳ ಕೊಡಬೇಕು. ಎಷ್ಟೇ ಕಠಿಣವಾದರೂ ನಾವು ಇಲ್ಲಿಯ ನಿಯಮಗಳನ್ನು ಉನ್ನತ ಲೋಕದ ವಿಷಯಗಳನ್ನು ಅರ್ಥೈಸಿಕೊಳ್ಳಲು ಅಳವಡಿಸಿಕೊಳ್ಳಬಾರದು.

ಒಂದುವೇಳೆ ಒಬ್ಬನಿಗೆ ಕಣ್ಣುಗಳಿಲ್ಲವೆಂದಾದರೂ ಇನ್ನೊಬ್ಬ ನೋಡಬಹುದು; ಅಂಧನಾದವನು, ಸ್ವಾಭಾವಿಕವಾಗಿ, ಅಂಧನಲ್ಲದವನ ಸಹಾಯವನ್ನು ಕೋರುತ್ತಾನೆ. ನಮ್ಮ ಒಳಗಿನ ವಿಷಯಗಳಲ್ಲಿ ನಾವು ಕೂಡಾ ಅಂಧರೇ! ಅಲ್ಲದಿದ್ದರೆ ನಾವು ವೈದ್ಯರ ಸಹಾಯಕೋರುವ ಅವಶ್ಯಕತೆಯೇನಿದೆ? ನಾವು ನೋಡಲಾರದ್ದನ್ನು ವೈದ್ಯರು ನೋಡುತ್ತಾರೆ; ಅವರು ನಮ್ಮ ರೋಗದ ತಪಾಸಣೆಯನ್ನು ಮಾಡುತ್ತಾರೆ; ಮತ್ತು ಅದಕ್ಕೆ ತಕ್ಕ ಚಿಕಿತ್ಸೆಯನ್ನು ನೀಡುತ್ತಾರೆ. ಸ್ವಾಭಾವಿಕವಗಿ ನಾವು ಆ ವೈದ್ಯರನ್ನು ಗೌರವಿಸುತ್ತೇವೆ ಮತ್ತು ಅವರ ಸಹಾಯಕ್ಕೆ ತಕ್ಕ ಸಂಭಾವನೆಯನ್ನು ಕೊಡುತ್ತೇವೆ. ಇದೇನೂ ಅನುಚಿತವಾದದ್ದಲ್ಲ.

ಒಬ್ಬ ದಿವ್ಯ ಮಾರ್ಗದರ್ಶಕ ಅಥವಾ ಗುರು ಒಬ್ಬ ತಜ್ಞ ವೈದ್ಯನ ಹಾಗೆ. ಅವರು ಹೇಳುವ ವಿಷಯಗಳು ಸತ್ಯವಾದದ್ದು, ಊಹಾಪೋಹಗಳಲ್ಲ ಎಂದು ಅರಿತಾಗ ಅವರ ಯೋಗ್ಯತೆಯ ಅರಿವು ನಮಗುಂಟಾಗುತ್ತದೆ. ಅಂತಹ ಒಂದು ದೃಷ್ಟಿಕೋನ ನಮ್ಮ ಕಣ್ಣಿನ ದೃಷ್ಟಿಯ ಸಾಮರ್ಥ್ಯದ ಮೇಲೆ ಅವಲಂಬಿತವಾಗಿದೆ. ಅಂಧನಾದವನು ಒಬ್ಬ ನಿಷ್ಣಾತ ವೈದ್ಯನಿಂದ ಚಿಕಿತ್ಸೆ ಪಡೆದರೆ ಅವನು ಕ್ರಮೇಣ ನೇರವಾಗಿ ನೋಡಬಲ್ಲ. "ಹೌದು, ಈಗ ನಾನು ಸ್ವಲ್ಪಮಟ್ಟಿಗೆ ನೋಡಬಲ್ಲೆ! ಈಗ ನನಗೆ ನೋಟದ ಅನುಭವವಾಗುತ್ತದೆ" ಆ ಕ್ಷಣದಿಂದ ಅವನು ಇತರ ಅಂಧರ ಊಹಾಪೋಹದ ಅಭಿಪ್ರಾಯಗಳಿಗೆ ಮಹತ್ವವನ್ನು ನೀಡುವುದಿಲ್ಲ. ತಾನೇ ಸ್ವತಃ ಪರಾಂಬರಿಸುವ ಸಮರ್ಥ್ಯವನ್ನು ಹೋಂದುತ್ತಾನೆ. ದೃಷ್ಟಿ ಬರುವುದರ ಜೊತೆಗೆ ಅವನಿಗೆ ಔಷಧಿಯ ಬಳಕೆಯಿಂದ ಉಂಟಾದ ನಿಜವಾದ ಪರಿಣಾಮವೂ ಅರ್ಥವಾಗುತ್ತದೆ.

ವೈಜ್ಞಾನಿಕ ತಿಳುವಳಿಕೆಯೂ ಕೂಡಾ ಇದೇ ರೀತಿಯದು. ಫರಾದೆ ಎಂಬ ವಿಜ್ಞಾನಿ ವಿದ್ಯುಚ್ಛಕ್ತಿಯನ್ನು ಕಂಡುಹಿಡಿದ ಮೊದಲ ದಿನಗಳಲ್ಲಿ ಬಹಳ ಜನ ಅವನನ್ನು ನೋಡಿ ಲೇವಡಿ ಮಾಡಿದರು. "ಏನಿದು? ಇದು ಕೇವಲ ಕುತೂಹಲಕ್ಕೆ ಅಷ್ಟೇ! ಈ ವಿದ್ಯುಚ್ಛಕ್ತಿಯಿಂದ ನಮಗೇನು ಲಾಭವಿದೆ?" ಎಂದು

ನಕ್ಕರು! ಫರಾದೆಯು ತಾನು ಕಂಡುಹಿಡಿದ ವಿದ್ಯುಚ್ಛಕ್ತಿಯ ಪರಿಣಾಮವನ್ನು ಪ್ರದರ್ಶಿಸುವ ವರದಿಯೊಂದನ್ನು ನಾನು ಒಮ್ಮೆ ಓದಿದೆ. ಅವನು ಯಂತ್ರದಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿದ ಮತ್ತು ಆ ವಿದ್ಯುಚ್ಛಕ್ತಿಯ ಪ್ರಭಾವದಿಂದ ಸಣ್ಣ ಕಾಗದದ ಚೂರುಗಳು ಚಲಿಸುವುದನ್ನು ಪ್ರದರ್ಶಿಸಿದ. ಬಹಳ ಮಂದಿ ಅವನ ಶೋಧನೆಯನ್ನು ಶ್ಲಾಘಿಸಿದರು. ಆದರೆ ಒಬ್ಬ ಮಹಿಳೆ ಹೀಗೆಂದು ಟೀಕಿಸಿದಳು "ಶ್ರೀಮಾನ್ ಫರಾದೆಯವರೇ, ಕೊನೆಗೆ ಈ ನಿಮ್ಮ ವಿಲಾಸಮಯ ಕ್ರೀಡೆಯಿಂದ ಯಾವ ರೀತಿಯ ಕಾರ್ಯಶೀಲ ಪ್ರಯೋಜನವನ್ನು ಪಡೆಯಬಹುದು?

ವಿಜ್ಞಾನಿ ಫರಾದೆ ಉತ್ತರಿಸಿದ "ಶ್ರೀಮತಿಯವರೇ! ಒಂದು ನವಜಾತ ಶಿಶುವಿನಿಂದ ನಮಗೇನು ಪ್ರಯೋಜನವಿದೆ ಎಂದು ತಿಳಿಸುವಿರಾ? ಅವನು ಹೀಗೆ ಕೇಳಿದುದರ ಉದ್ದೇಶವೇನೆಂದರೆ, ಒಂದು ಶಿಶುವು ಜನಿಸಿದ ನಂತರ ನಾವು ಅದನ್ನು ಪೋಷಿಸಬೇಕು, ಆ ಶಿಶುವು ದೊಡ್ಡದಾದಮೇಲೆ ಅವನ ಅಥವಾ ಅವಳ ಶಕ್ತಿಯನ್ನು ಉಪಯೋಗಿಸಿ ಅದರ ಲಾಭ ಪಡೆಯಬಹುದು. ಹಾಗೆಯೇ, ಭಗವತ್ಪ್ರಜ್ಞೆಯು ಒಂದು ರೀತಿಯ ಹವ್ಯಾಸ, ಸೋಗು, ವಿಲಾಸ ಅಥವಾ ಮೋಜು ಎಂದು ಕೆಲವರು ಭಾವಿಸುತ್ತಾರೆ. ಇದರಲ್ಲಿ ನೇರವಾಗಿ ಅಳವಡಿಸಬಹುದಾದಂಥಹ ಯಾವುದೇ ಕಾರ್ಯಶೀಲ ಉಪಯೋಗವಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿರುತ್ತಾರೆ.

ಆದರೆ ಭಗವತ್ಪ್ರಜ್ಞೆ ಗಾಢವಾದಾಗ, ಅದನ್ನು ಅನುಭವಿಸುವವರು ಭಗವತ್ಪಜ್ಞೆಗೆ ಸಂಬಂಧಪಡದ ಇತರ ಚಟುವಟಿಕೆಗಳನ್ನು, ಅವು ಎಷ್ಟೇ ಸಹಜವಾಗಿ ಕಂಡರೂ, ಅವುಗಳಿಗೆ ಯಾವುದೇ ಶಾಶ್ವತವಾದ ಮಹತ್ವವನ್ನು ಕೊಡುವುದಿಲ್ಲ. ಏಕೆಂದರೆ, ನಮ್ಮ ಕಟ್ಟಕಡೆಯ ಧ್ಯೇಯವೇನೆಂದರೆ ನಾವು ಬದುಕಬೇಕು, ಸಾಯಬಾರದು, ಎಂಬುದು.

ಬದುಕುವುದೇ ನಮ್ಮ ಪ್ರಧಾನ ಅವಶ್ಯಕತೆ ಮತ್ತು ಸಾಮಾನ್ಯ ಅವಶ್ಯಕತೆ. ನಾವು ಬದುಕಬೇಕು, ಮತ್ತು ಬದುಕುವುದು ಮಾತ್ರವಲ್ಲ, ಸುಖ ಸಂತೋಷದಿಂದ ಯೋಗ್ಯರೀತಿಯಲ್ಲಿ ಮತ್ತು ಪ್ರಜ್ಞಾವಂತರಾಗಿ ಬದುಕಬೇಕು, ಅಲ್ಲದೇ ದುಃಖ ಕ್ಲೇಶಗಳಿಲ್ಲದ ಬದುಕನ್ನು ಬದುಕಬೇಕು. ಇದು ಎಲ್ಲರ ಇಚ್ಛೆ, ಇದನ್ನು ಯಾರೂ ಅಲ್ಲಗಳೆಯಲಾರರು. ಯಾವಾಗ ಒಬ್ಬನಲ್ಲಿ ಭಗವತ್ಪ್ರಜ್ಞೆ ಜಾಗೃತವಾಗುತ್ತದೋ, ಅವನು ಸ್ಪಷ್ಟವಾಗಿ ನೋಡುತ್ತಾನೆ "ಯಾಕೆ ಪ್ರತಿಯೊಬ್ಬರೂ ಈ ಭೌತಿಕ ಪ್ರಪಂಚದಲ್ಲಿ ವ್ಯರ್ಥ ಪರಿಶ್ರಮ ಮಾಡುತ್ತಾರೆ? ಎಲ್ಲರಿಗೂ ಸುಖ ಸಂತೋಷಗಳು ಬೇಕು, ಆದರೆ ಎಲ್ಲರೂ ಭ್ರಾಮಕ ಸುಖಸಂತೋಷಗಳ ಹಿಂದೆ ಓಡುತ್ತಿದ್ದಾರೆ".

ನಶ್ವರ ವಸ್ತುಗಳೊಂದಿಗೆ ಶಾಶ್ವತ ಸುಖಸಂತೋಷಗಳಿರಲು ಎಂದೂ ಸಾಧ್ಯವಿಲ್ಲ. ನಾವು ಮರ್ತ್ಯಲೋಕದೊಂದಿಗೆ ವ್ಯವಹರಿಸುತ್ತಿದ್ದೇವೆ, ಆದರೆ ಅದು ನಮಗೆ ತೃಪ್ತಿಯನ್ನು ಕೊಡಲಾರದು, ಅದು ನಮ್ಮನ್ನು ಕೇವಲ ಅಶಕ್ತರನ್ನಾಗಿಸುತ್ತದೆ. ನಾವು ಒಂದು ಕಡೆ ಗಳಿಸಿದ್ದನ್ನು ಇನ್ನೊಂದುಕಡೆ ಕಳೆದುಕೊಳ್ಳುತ್ತೇವೆ. ಒಬ್ಬ ತಿಳುವಳಿಕೆಯುಳ್ಳ ಪುರುಷ ಅಥವಾ ಮಹಿಳೆ ಈ ರಿತಿಯ ಬಲಹೀನತೆ ಜೀವನದ ಧ್ಯೇಯವಾಗುವುದನ್ನು ಸ್ವೀಕರಿಸಬಾರದು ಮತ್ತು ಸಹಿಸಲೂ ಕೂಡದು. ಅಂತಹ ಜ್ಞಾನಿ ಬದುಕಿನ ಇನ್ನೊಂದು ನೆಲೆಯನ್ನು ಕಾಣುತ್ತಾನೆ. ಆಟದ ಮೈದಾನದಂತಿರುವ ಈ ಪ್ರಪಂಚದ ಭಾಗಿ ತಾನಲ್ಲ ಎಂಬುದನ್ನು ಮನಗಾಣುತ್ತಾನೆ. " ನಾನು ಅಮರ, ನಾನು ಸನಾತನ ಲೋಕಕ್ಕೆ ಸೇರಿದವನು, ಆದರೆ ಹೇಗೋ ಈ ಮರ್ತ್ಯಲೋಕದ ಬದುಕಿನಲ್ಲಿ ಸಿಕ್ಕಿ ಬಿದ್ದಿದ್ದೇನೆ, ಆದ್ದರಿಂದ ಸಾಧ್ಯವಾದಷ್ಟು ಬೇಗ ಈ ಕೊಂಡಿಯಿಂದ ಕಳಚಿಕೊಂಡರೆ ಆಗ ನಾನು ನನ್ನ ಸಹಜ ಸ್ಥಿತಿಯಲ್ಲಿ ಇರಬಹುದು" ಎಂಬ ನಂಬಿಕೆಯಲ್ಲಿ ಸ್ಥಿತನಾಗುತ್ತಾನೆ. ತಾನು ಸಂವೇದನಾಶೀಲ, ಕಲ್ಪನಾಸಾಮರ್ಥ್ಯವುಳ್ಳವನು, ಉನ್ನತ ನೆಲೆಯ ಸದಸ್ಯನಾಗಿರುವ ತಾನು ಈ ದೇಹವಲ್ಲ ಆತ್ಮ ಎಂಬ ಸತ್ಯವನ್ನು ಮನಗಾಣುತ್ತಾನೆ. ನೋವನ್ನು ಕೋಡುವ ಈ ಜಗತ್ತಿನಲ್ಲಿ

ಹೇಗೋ ಬಂದಿಯಾಗಿದ್ದೇನೆ ಎಂದು ಕಂಡುಕೊಳ್ಳುತ್ತಾನೆ. ಹೇಗಿದ್ದರೂ, ತನ್ನ ತಿಳುವಳಿಕೆಯ ಬಲದಿಂದ, ತಾನು ಅಮರ ಲೋಕಕ್ಕೆ ಏರುವ ಸಾಧನೆಯಲ್ಲಿ ಪ್ರಗತಿಯನ್ನು ಸಾಧಿಸಬಲ್ಲ. ಸಕಾರಾತ್ಮಕ ಸಾಕ್ಷ್ಯಗಳು ನಮ್ಮ ಮುಂದೆ ಬಂದಾಗ "ನಾನು ಈಗ ನೋಡುವ ಹಾಗೂ ಕೇಳುವ ವಸ್ತು ವಿಷಯಗಳು, ನನ್ನ ಈಗಿನ ಅನುಭವ, ಇವೆಲ್ಲವೂ ಪ್ರಸ್ತುತ ನಾನಿರುವ ಅನಿಶ್ಚಿತತೆಯ ಪ್ರಪಂಚದಲ್ಲಿ ನೋಡುವ ವಿಷಯಗಳಿಗಿಂತ ಹೆಚ್ಚು ವಾಸ್ತವಿಕವಾಗಿವೆ" ಎಂಬ ಮನೋಭಾವ ಉಂಟಾಗುತ್ತದೆ.

ಅತ್ಮನೊಂದಿಗೆ, ಪರಮಾತ್ಮನೊಂದಿಗೆ ಮತ್ತು ಭಗವಂತನ ಲೋಕದೊಂದಿಗೆ ನೇರ ವ್ಯವಹಾರ ಸಾಧ್ಯ. ನಾವು ಈಗ ಬದುಕುತ್ತಿರುವ ಲೋಕದಲ್ಲಿ ನಡೆಯುವುದು ಪರೋಕ್ಷ ಅಥವಾ ವಕ್ರ ವ್ಯವಹಾರ, ಮೊದಲು
ನಮ್ಮ ಕಣ್ಣು ,ಕಿವಿ ಮತ್ತು ಇತರ ಇಂದ್ರಿಯಗಳು ಅನುಭವವನ್ನು ಸಂಗ್ರಹಿಸುತ್ತವೆ, ನಂತರ ಈ ಪ್ರಪಂಚದ ಅನುಭವ ನಮಗೆ ಆಗುವ ಮುನ್ನ ಆ ಅನುಭವಗಳು ನಮ್ಮ ಮನಸ್ಸಿಗೆ ರವಾನೆಯಾಗುತ್ತವೆ. ಆದರೆ ಆತ್ಮನ ವಿಷಯದಲ್ಲಿ ಇತರ ಯಾವುದೇ ಸಲಕರಣೆಯ ಸಹಾಯವಿಲ್ಲದೇ ನಾವು ನೇರವಾಗಿ ನಮ್ಮಲ್ಲೇ ಎಲ್ಲವನ್ನೂ ಅನುಭವಿಸುತ್ತೇವೆ. ಸೂಕ್ಷ್ಮ ದರ್ಶಕದ ಮುಲಕ ಒಂದು ವಸ್ತುವನ್ನು ನೋಡುವುದು ಒಂದು ವಿಧ ಮತ್ತು ಬರಿಗಣ್ಣಲ್ಲಿ ವೀಕ್ಷಿಸುವುದು ಇನ್ನೊಂದು ಬೇರೆ ವಿಧಾನ. ಇಲ್ಲಿ ವ್ಯತ್ಯಾಸವಿದೆ. ನಮ್ಮ ಕಣ್ಣು, ಕಿವಿ, ಮೂಗು ಮತ್ತು ನಾಲಿಗೆಗಳಿಂದ ನಾವು ಈ ಪ್ರಪಂಚದ ಕೆಲವು ಅನುಭವಗಳನ್ನು ಪಡೆಯುತ್ತೇವೆ. ಆದರೆ ಆತ್ಮಕ್ಕೆ ಸಂಬಂಧಿಸಿದಂತೆ, ನಕಾರಾತ್ಮಕ ಭಾಗದ ಅಂದರೆ ಭೌತಿಕ ಬೆಳವಣಿಗೆಯಿಂದ ನಾವು ಹಿಂದೆಗೆದರೆ "ಓ, ಇದು ಆತ್ಮನ ಲಕ್ಷಣ" ಎಂಬುದನ್ನು ನಾವು ಅರಿತು ಕೊಳ್ಳಲು ಸಾಧ್ಯವಾಗುತ್ತದೆ. ಯಾವುದೇ ಸಾಧನದ ಸಹಾಯವಿಲ್ಲದೇ ನೇರವಾಗಿ ನಾವು ಯಾರು ಎಂಬುದನ್ನು ಅರಿತು ಕೊಳ್ಳುತ್ತೇವೆ.

ಆತ್ಮವು ತನ್ನನ್ನು ತಾನು ನೋಡಬಲ್ಲುದು, ಅದು ತನ್ನಲ್ಲೇ ಏಕಾಗ್ರಗೊಳ್ಳ ಬಲ್ಲುದು ಹಾಗೂ ತನ್ನ ಅಂತರಂಗ ಪರೀಕ್ಷೆಯ ಪ್ರಕ್ರಿಯೆಯ ಮುಲಕ ಬೇರೆ ಯಾವುದೇ ಸಾಧನದ ಸಹಾಯವಿಲ್ಲದೇ, ನೇರವಾಗಿ ತನ್ನ ಬಗೆಗಿನ ಎಲ್ಲಾ ಸಾಧ್ಯವಿರುವ ವಿಚಾರಗಲನ್ನು ಗ್ರಹಿಸಬಲ್ಲುದು. ಅದು ತನ್ನ ನೈಜ ನೆಲೆಯನ್ನು ಅರ್ಥೈಸಿಕೊಳ್ಳಬಲ್ಲದು. ಉನ್ನತ ಲಕ್ಷಣದ ಒಂದು ನೆಲೆಯ ವಿಚಾರವನ್ನು ಪಡೆಯಬಲ್ಲ, ಸಕಾರಾತ್ಮಕ ಭಾಗದಲ್ಲಿದ್ದು "ತಾನು ಅಮರ, ತನಗೆ ಸಾವಿಲ್ಲ" ಎಂಬ ಸತ್ಯವನ್ನು ಕಂಡುಹಿಡಿಯಬಲ್ಲದು.

ಈ ಭೌತಿಕ ಜಗತ್ತು ತಪ್ಪು ನಿರೂಪಣೆಯ ಅಬದ್ಧ ತಿಳುವಳಿಕೆಯ ಲೋಕವಾಗಿದೆ. ಆದರೆ, ಆ ಉನ್ನತ ಲೋಕದಲ್ಲಿ ತಪ್ಪು ತಿಳುವಳಿಕೆಗೆ ಅವಕಾಶವಿಲ್ಲ. ಅಲ್ಲಿಗೆ ಪ್ರವೇಶ ಸಿಕ್ಕಿದಾಗ, ನಮ್ಮ ವಿಚಾರ, ಒಂದು ಪಕ್ಷ ಭಾಗಶಃವಾಗಿದ್ದರೂ, ಸ್ಪಷ್ಟ ಹಾಗೂ ನೈಜವಾಗಿರುತ್ತದೆ. ಆ ಅನುಭವನ್ನು ಪಡೆದ ಯಾವುದೆ ವ್ಯಕ್ತಿ, ವಿಷಯವನ್ನು ಮನದಟ್ಟು ಮಾಡಿಕೊಂಡು ಆ ದಿಶೆಯಲ್ಲಿ ಮುಂದುವರಿಯುವ ನಿರ್ಧಾರವನ್ನು ಮಾಡುತ್ತಾನೆ.

ಆತ್ಮನು ಅಮರ ಎಂಬುದನ್ನು ಸಾಕ್ರೆಟೀಸ್ ಎಂಬ ಯೂರೋಪಿನ ತತ್ತ್ವಶಾಸ್ತ್ರಜ್ಞ ಅರ್ಥಮಾಡಿಕೊಂಡಿದ್ದ. ಅವನ ನಂಬಿಕೆ ಎಷ್ಟು ಗಾಢವಾಗಿತ್ತೆಂದರೆ ಅವನು ತನ್ನ ಭೌತಿಕ ಜೀವನಕ್ಕೆ ಯಾವುದೇ ಮಹತ್ವವನ್ನು ಕೊಡುತ್ತಿರಲಿಲ್ಲ.ಆತ್ಮನು ಅಮರ ಎಂಬ ಒಂದು ನಿಶ್ಚಿತ ಅಭಿಪ್ರಾಯವನ್ನು ಹೊಂದಿದ್ದ ಅವನು ಈ ಪ್ರಪಂಚದೊಡನೆ ನಿರ್ಲಕ್ಷ್ಯ ಭಾವದಿಂದ ಸಂಪೂರ್ಣವಾಗಿ ಸಂಬಂಧವನ್ನು ಕಡಿದುಕೊಂಡಿದ್ದ. ಕ್ರಿಸ್ತನು ಕೂಡಾ ತನ್ನ ದೇವರ ಬಗ್ಗೆ ಒಂದು ನಿಶ್ಚಿತ ಅಭಿಪ್ರಾಯವನ್ನು ಹೊಂದಿದ್ದು ಈ ಪ್ರಪಂಚದ ಯಾವುದೇ ಸುಖ ಸಂತೋಷಗಳ ಬಗ್ಗೆ ಗಮನ ಹರಿಸಲಿಲ್ಲ. ನಿರ್ಲಕ್ಷ್ಯಭಾವದಿಂದ ಎಲ್ಲವನ್ನೂ ತಿರಸ್ಕರಿಸಿದ.

# ಆತ್ಮನ ನೆಲೆ

ನಮ್ಮ ಐಹಿಕ ಇಂದ್ರಿಯಗಳಿಗೆ ಕಾಣದೇ ಇರುವ ಎಷ್ಟೋ ವಿಷಯಗಳನ್ನು ನಾವು ಜ್ಞಾನ ಚಕ್ಷುಗಳ ಮೂಲಕ ನೋಡಬಹುದು. ಈ ಮಾತನ್ನು ನಾವು ನಿಃಸಂಶಯವಾಗಿ ಒಪ್ಪಿಕೊಳ್ಳಬಹುದು. ಅದೇ ರೀತಿ, ಹೆಚ್ಚು ಆಶಾಜನಕ ರೀತಿಯಲ್ಲಿ ವಿಷಯವನ್ನು ಆಳವಾಗಿ ವೀಕ್ಷಿಸುವ ಬೇರೊಂದು ವಿಧಾನವೂ ಅಸ್ತಿತ್ತ್ವದಲ್ಲಿದೆ. ಕಣ್ಣಿಗೆ ಪರೆ ಬಂದಾಗ ಅದಕ್ಕೆ ಎನೂ ಕಾಣಿಸಲಾರದು. ಆದರೆ ಆ ಪರೆಯನ್ನು ತೆಗೆದಾಗ ಅದೇ ಕಣ್ಣು ಎಲ್ಲವನ್ನೂ ನೋಡಬಲ್ಲದು. ಅಜ್ಞಾನವೆಂಬುದು ನಮ್ಮ ಕಣ್ಣನ್ನು ಕುರುಡು ಮಾಡುವ ಪರೆಯಾಗಿದೆ. ನಮ್ಮ ದೃಷ್ಟಿ ಕೇವಲ ಮೇಲುಮೇಲಿನದನ್ನು ನೋಡುವ ಶಕ್ತಿಯನ್ನು ಮಾತ್ರ ಹೊಂದಿದೆ. ಆದರೆ ಜ್ಞಾನ ಚಕ್ಷುವಿನ ತೀಕ್ಷ್ಣವಾದ ದೃಷ್ಟಿಯು ಬಹಳ ವಿಷಯಗಳನ್ನು ಇನ್ನೂ ಆಳವಾಗಿ ವೀಕ್ಷಿಸಬಲ್ಲುದು. ನಮ್ಮ ಬಾಹ್ಯ ದೃಷ್ಟಿಗೆ ಯಾವುದೇ ಹೆಚ್ಚಿನ ಮಹತ್ವವಿಲ್ಲ. ನಿಜವಾದ ಮಹತ್ವವಿರುವುದು ವಿಷಯಗಳನ್ನು ಆಳವಾಗಿ ವೀಕ್ಷಿಸಿ ಅರ್ಥಮಾಡಿಕೊಳ್ಳಬಲ್ಲ ಜ್ಞಾನದೃಷ್ಟಿಗೆ, ಆ ದೃಷ್ಟಿಯನ್ನು ಹೊಂದಿರುವ ಜ್ಞಾನಿಗೆ. ಎಲ್ಲಾ ಜ್ಞಾನಿಗಳೂ ಸಮಾನರಲ್ಲ, ಅವರಲ್ಲಿಯೂ ವಿವಿಧ ದರ್ಜೆಗಳಿರುತ್ತವೆ, ಇವರನ್ನು ಸಾಮಾನ್ಯಜ್ಞಾನಿ, ಉನ್ನತಜ್ಞಾನಿ, ಹಾಗೂ ಶ್ರೇಷ್ಠಜ್ಞಾನಿ ಎಂದು ಮೂರು ವಿಧವಾಗಿ ವಿಂಗಡಿಸಬಹುದು. ಅವರವರ ಸಾಮರ್ಥ್ಯಕ್ಕನುಗುಣವಾಗಿ ಅವರು ವಿಷಯಗಳನ್ನು ಆಳವಾಗಿ ವೀಕ್ಷಿಸುತ್ತಾರೆ. ಪ್ರಸಕ್ತ ನಾವು ಈ ಮರ್ತ್ಯಲೋಕದ ಸದಸ್ಯರು ಎಂದು ಗುರುತಿಸಿಕೊಳ್ಳುವುದು ಬಹಳ ಸುಲಭ, ಆದರೆ, ಯಾವ ಅರ್ಥದಲ್ಲಿ ನಾವು ಈ ಪ್ರಪಂಚಕ್ಕೆ ಸಂಬಂಧಪಟ್ಟಿದ್ದೇವೆ? ಅದು ನಮ್ಮ ಈ ಭೌತಿಕ ದೇಹ ಮಾತ್ರ ಈ ಪ್ರಪಂಚಕ್ಕೆ ಸಂಬಂಧಪಟ್ಟದ್ದಾಗಿದೆ. ಒಂದು ವೇಳೆ ನಾವು ನಮ್ಮ ದೇಹಕ್ಕಿಂತ ಒಂದು ಹಂತ ಮೇಲೇರಿದರೆ ನಮ್ಮ ಮನಸ್ಸನ್ನು ಗುರುತಿಸಿಕೊಳ್ಳಬಹುದು, ಅದಕ್ಕಿಂತಲೂ ಮೇಲೆ ಹೋದರೆ ಬುದ್ಧಿಯನ್ನು ಗುರುತಿಸಿಕೊಳ್ಳಬಹುದು, ಮತ್ತು ಅದಕ್ಕಿಂತ ಮೇಲೆ ಆತ್ಮನನ್ನು ನೋಡಬಹುದು. ಆವಾಗ ನಾವು ಆತ್ಮನಿರುವ ನೆಲೆ ಶಾಶ್ವತವಾದದ್ದು ಮತ್ತು ಸ್ವತಹ ಆತ್ಮ ಕೂಡಾ ಶಾಶ್ವತವಾದದ್ದು ಎಂಬುದನ್ನು ಮನಗಾಣುತ್ತೇವೆ. ಆ ಹಂತದಿಂದ ನಾವು ನಮ್ಮೆಲ್ಲ ವಿಚಾರಗಳಿಗೆ ಮೂಲನಾದ

ಪರಮಾತ್ಮನ ಹುಡುಕಾಟದಲ್ಲಿ ತೊಡಗಬಹುದು. ಪರಮಾತ್ಮನನ್ನು ನಾವು ಬೆಳಕಿನ ಕಿರಣಗಳಿಗೆ ಮೂಲನಾದ ಸೂರ್ಯನಿಗೆ ಹೋಲಿಸಬಹುದು ಮತ್ತು ಸೂರ್ಯನಿಂದ ಹೊರಟ ಕಿರಣಗಳನ್ನು ಪ್ರತ್ಯೇಕ ಜೀವಾತ್ಮಗಳಿಗೆ ಹೋಲಿಸಬಹುದು. ಅಂದರೆ ನಾವು ಆಪರಮಾತ್ಮನ ಅಂಶಗಳು. ಒಮ್ಮೆ ನಾವು ಸೂರ್ಯನ ಒಂದು ಕಿರಣವನ್ನು ನೋಡಿದರೆ, ಆ ಕಿರಣದ ಮೂಲಕ ಎಲ್ಲ ಕಿರಣಗಳಿಗೆ ಕಾರಣನಾದ ಸೂರ್ಯನ ನೆಲೆಯನ್ನು ಕಂಡುಹಿಡಿಯಬಹುದು. ಹಾಗೆಯೇ ನಮ್ಮ ನೈಜ ಅಸ್ತಿತ್ತ್ವದ ಪರಿಕಲ್ಪನೆಯಿಂದ ನಮ್ಮನ್ನು ನಾವು ಆತ್ಮನೊಡನೆ ಗುರುತಿಸಿಕೊಳ್ಳುವುದರಿಂದ ನಮ್ಮನ್ನು ನಾವು ಪ್ರಜ್ಞೆಯ ಕಣಗಳು ಎಂಬುದನ್ನು ಅರಿತು ಕೊಳ್ಳುವ ಮೂಲಕ, ಪರಮ ಪ್ರಜ್ಞೆಯನ್ನು, ಪರಮ ಜ್ಞಾನವನ್ನು ಹಗೂ ಪರಮ ಅಸ್ತಿತ್ತ್ವವನ್ನು ಅಂದರೆ ಪರಮಾತ್ಮನನ್ನು ಮತ್ತು ಅವನ ನೆಲೆಯನ್ನು ಹುಡುಕಬಹುದು. ಈ ಮೂಲಕ ನಾವು ಪರಮ ಕಾರಣನಾದ, ಎಲ್ಲಕ್ಕೂ ಮೂಲನಾದ ಪರಮಾತ್ಮನೆಡೆಗೆ ಪ್ರಗತಿಯನ್ನು ಸಾಧಿಸಬಹುದು.

ಪ್ರಸ್ತುತ ಈ ಪ್ರಪಂಚದಲ್ಲಿ ನಾವು ನೋಡುವುದೆಲ್ಲದಕ್ಕೂ ನಾವೇ ಅಧಿಪತಿಗಳೆಂದುಕೊಳ್ಳುತ್ತೇವೆ. ಆದರೆ ನಾವು ನೋಡುವುದೆಲ್ಲವೂ ಅಸ್ಥಿರವಾದದ್ದು, ನಾಶವಾಗಲ್ಪಡುವಂಥದ್ದು, ಮತ್ತು ಪ್ರತೀಕಾರವನ್ನು ತೆಗೆದುಕೊಳ್ಳುವಂಥದ್ದು. ಇವತ್ತು ಅನಂದದಯಕವಾಗಿರುವ ವಿಷಯ ಮುಂದೆ ಸಂಕಟವಾಗಿ ಪರಿವರ್ತನೆಗೊಳ್ಳಬಹುದು. ಹಾಗಾಗಿ ನಾವು ಬೇರೊಂದು ಸುರಕ್ಷಿತವಾದ ಸ್ಥಳವನ್ನು ಹುಡುಕಲೇಬೇಕು. ನಮ್ಮದೇ ಆದ ಒಂದು ನಿವಾಸವನ್ನು ಹೊಂದಲೇಬೆಕು. ಅದಕ್ಕೆ ಒಂದು ಸುರಕ್ಷಿತವಾದ ಜಾಗವನ್ನು ಹುಡುಕಬೆಕು. ಈ ನಮ್ಮ ಹುಡುಕಾಟದ ಮಾರ್ಗದಲ್ಲಿ ನಮ್ಮದೇ ಆದ ಒಂದು ಸ್ವಂತ ಮನೆಯನ್ನು ನಾವು ಈಗಾಗಲೆ ಹೊಂದಿರುವುದರ ಬಗ್ಗೆ ತಿಳಿದುಕೊಳ್ಳುತ್ತೇವೆ, ಮತ್ತು ಆ ಮನೆಯು ಪರಿಪೂರ್ಣವಾಗಿರುವುದು ಮತ್ತು ದೋಷರಹಿತವಾಗಿರುವುದು ಎಂಬುದನ್ನು ಕೂಡಾ ಮನಗಾಣುತ್ತೇವೆ.

# ಆತ್ಮನ ನೆಲೆ

ನಾವು ಯಾವುದೋ ನಮಗೆ ಗೊತ್ತಿಲ್ಲದ ಲೋಕಕ್ಕೆ ಹೋಗುತ್ತಿದ್ದೇವೆಂದು ಆರಂಭದಲ್ಲಿ ನಮಗೆ ಅನಿಸಬಹುದು. "ನನ್ನ ಈ ಪ್ರಸಕ್ತ ಜಗತ್ತಿನಲ್ಲಿ ನನ್ನ ಸುತ್ತಮುತ್ತ ಲೆಕ್ಕವಿಲ್ಲದಷ್ಟು ಜೀವಿಗಳಿದ್ದಾರೆ, ಆದರೆ ನಾನು ಈಗ ಹೋಗಬೇಕೆಂದು ಕೊಂಡಿರುವ ಜಗತ್ತು ಅಪರಿಚಿತವಾದದ್ದು, ಅನಿಶ್ಚಿತವಾದದ್ದು, ಅದು ಕಾಲ್ಪನಿಕ ಹಾಗೂ ಅವಾಸ್ತವಿಕ ಅನಿಸುತ್ತಿದೆ" ಅದಾಗ್ಯೂ, ಆ ಜಗತ್ತಿನೆಡೆಗೆ ನಮ್ಮ ಪ್ರಯಾಣ ಪ್ರಾರಂಭವಾಗುತ್ತಲೇ, ಕ್ರಮೇಣ, ಅಲ್ಲಿಯೂ ಎಲ್ಲ ತರಹದ ಜೀವಿಗಳು ಅಸ್ತಿತ್ತ್ವದಲ್ಲಿರುವುದನ್ನು ಅರಿಯುತ್ತೇವೆ, ಮತ್ತು ವಿಶೇಷವಾಗಿ ಅಲ್ಲಿರುವವರೆಲ್ಲರೂ ಪ್ರಾಮಾಣಿಕರೆಬುಂದು ನಮ್ಮ ಅರಿವಿಗೆ ಬರುತ್ತದೆ. ನಾವಿರುವ ಈ ಭೌತಿಕ ಜಗತ್ತು ನಿಯಮಿತವಾದದ್ದು, ಸತ್ವಹೀನವಾದದ್ದು ಹಾಗೂ ಇಲ್ಲಿ ಸತ್ಯದ ಪ್ರಾತಿನಿಧ್ಯತೆ ಬಹು ಅಲ್ಪ ಪ್ರಮಾಣದಲ್ಲಿರುವುದು ಎನ್ನುವ ಯಥಾರ್ಥ ವಿಷಯ ಕೂಡಾ ನಮ್ಮ ಅರಿವಿಗೆ ಬರುತ್ತದೆ.

ಬದುಕಿನ ಅಧಿಕ ಭಾಗ ಈ ಜಗತ್ತಿನಲ್ಲಿದೆ, ಮತ್ತು, ಋಷಿ ಮುನಿಗಳು, ತಪಸ್ವಿಗಳು, ಯೋಗಿಗಳು, ಬುದ್ಧ, ಮೊಹಮ್ಮದ್‌ರಂತಹ ಪ್ರವರ್ತಕರು ಮತ್ತು ಸಾಕ್ರೆಟೀಸ್‌ರಂತಹ ವಿಶಿಷ್ಟ ಜೀವಾತ್ಮರು ಮಾತ್ರ ಸಾವಿಲ್ಲದ ಲೋಕಕ್ಕೆ ತೆರಳುತ್ತಾರೆ ಎಂದು ನಾವು ಅಂದುಕೊಳ್ಳಬಹುದು. ಆದರೆ ಕ್ರಮೇಣ, ನಾವು ಇಲ್ಲಿ ನೋಡುವ ಭೌತಿಕ ಜಗತ್ತಿನ ಭಾಗಕ್ಕಿಂತ, ಅಮರತ್ವದ ಉನ್ನತ ಜಗತ್ತು ಅಗಣಿತವಾಗಿ ದೊಡ್ಡದಾಗಿರುವುದು ಎಂಬ ವಿಷಯ ನಮಗೆ ಅರ್ಥವಾಗುತ್ತದೆ. ಈ ದೇಶದಲ್ಲಿ ಹೇಗೆ ಕೆಲವು ಜನರು ಆಸ್ಪತ್ರೆಗಳಲ್ಲಿ ಅಥವಾ ಸೆರೆಮನೆಗಳಲ್ಲಿ ನೋವು ಸಂಕಟಗಳನ್ನು ಅನುಭವಿಸುತ್ತಾರೋ, ಹಾಗೆಯೇ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲ್ಪಡತಕ್ಕವರೂ ಈ ಭೌತಿಕ ಜಗತ್ತಿನಲ್ಲಿ ಕೆಲವರಿದ್ದಾರೆ ಎನ್ನುವುದು ಕ್ರಮೇಣ ನಮ್ಮ ತಿಳುವಳಿಕೆಗೆ ಬರುತ್ತದೆ. ಈ ತಿಳುವಳಿಕೆಗಳು ನಮಗೆ ಹೆಚ್ಚು ಹೆಚ್ಚು ಸ್ಪಷ್ಟವಾಗತೊಡಗಿದಾಗ ಉನ್ನತ ಜಗತ್ತಿನೆಡೆಗೆ ಮುನ್ನಡೆಯಲು ನಮಗೆ ಹೆಚ್ಚಿನ ಧೈರ್ಯವುಂಟಾಗುತದೆ, ಮತ್ತು ನಮ್ಮ ಮನೆಯತ್ತ ನಾವು ಧಾವಿಸುವ ವೇಗವು ಹೆಚ್ಚುತ್ತದೆ. ನಮ್ಮ ಮನೆಯು ಹತ್ತಿರವಾಗುತ್ತಿದ್ದ ಹಾಗೆ ಬೇಗನೇ

ಮನೆಗೆ ಹೋಗೋಣವೆಂಬ ಭಾವ ತೀವ್ರವಾಗುತ್ತಾ, ನಮ್ಮ ಚಲನೆಯ ವೇಗವೂ ತೀವ್ರವಾಗುತ್ತಾ ಹೋಗುತ್ತದೆ. "ಓಹ್! ಇದೇ ನನ್ನ ಜನ್ಮಭೂಮಿ!"

ಪ್ರಸಕ್ತ ನಾವು ಬಾಹ್ಯ ಜಗತ್ತಿನಲ್ಲಿದ್ದೇವೆ ಮತ್ತು ನಮ್ಮ ಏಕಾಗ್ರತೆ ಕೂಡಾ ಬಹಿರ್ಮುಖವಾಗಿದೆ. ನಾವು ಇಲ್ಲಿ ಅಸಹಾಯಕರಾಗಿ ಚಲಿಸುತ್ತಿದ್ದೇವೆ. ನಮ್ಮ ಭರವಸೆ ಕೇವಲ ದೈವಿಕ ಪ್ರತಿನಿಧಿಗಳ ಕರುಣೆಯಮೇಲೆ ಅವಲಂಬಿತವಾಗಿದೆ. ಅವರು ಮೇಲಿನ ಲೋಕಗಳಿಂದ ನಮಗೆ ಹಿತವಚನಗಳನ್ನು ನೀಡಿ ನಮ್ಮನ್ನು ಎಚ್ಚರಿಸಲು ಬರುತ್ತಾರೆ, "ನಿಮ್ಮದಲ್ಲದ ಈ ಜಗತ್ತಿನಲ್ಲಿ ಏನು ಮಾಡುತ್ತಿರುವಿರಿ? ಆ ಕಡೆಗೆ ಹೋಗಬೇಡಿ, ಅಲ್ಲಿ ಅಪಾಯವಿದೆ, ನನ್ನೊಡನೆ ಬನ್ನಿ, ನಾನು ನಿಮ್ಮನ್ನು ಅಪಾಯಗಳಿಲ್ಲದ ಅಮರತ್ವದ ಲೋಕಕ್ಕೆ ಕರೆದೊಯ್ಯುತ್ತೇನೆ" ದಿವ್ಯ ಲೋಕದಿಂದ ಬಂದಂತಹ ಪ್ರತಿನಿಧಿಗಳು ನಮ್ಮನ್ನು ನಿದ್ದೆಯಿಂದ ಎಚ್ಚರಿಸಿ, ಅಜ್ಞಾನದ ಅಂಧಕಾರದಿಂದ ಜ್ಞಾನದ ಬೆಳಕಿನೆಡೆಗೆ ನಿರ್ದೇಶಿಸುತ್ತಾರೆ. ಅವರೆ ವೈಷ್ಣವರು, ಶುದ್ಧ ಭಕ್ತರು. ಅವರು ಉನ್ನತ ಲೋಕದ ಹಾಗೂ ಹಿಂದೆ ಉನ್ನತ ಲೋಕಗಳನ್ನು ಸೇರಿದ ಮಹಾನುಭಾವರ ಚರಿತ್ರೆಗಳನ್ನು ತಿಳಿಸುವ ವೇದ ಶಾಸ್ತ್ರಗಳ ಜ್ಞಾನವನ್ನು ಕೂಡ ನಮಗೆ ದಯಪಾಲಿಸುತ್ತಾರೆ. ಈ ಜ್ಞಾನದ ಮೂಲಕ ನಮ್ಮ ವಿಶ್ವಾಸವು ಹೆಚ್ಚುತ್ತಾ ಹೋಗುತ್ತದೆ ಮತ್ತು ಈ ಶಾಸ್ತ್ರಗಳಿಂದ ಪರಿಚಿತರಾಗುವ ಸಾಧುಸಂತರೊಂದಿಗಿನ ನಮ್ಮ ಸಾಂಗತ್ಯ ವೃದ್ಧಿಸಿ ನಮ್ಮ ಆಧ್ಯಾತ್ಮಿಕ ಚಿಂತನೆಗೆ ಒಂದು ಹೊಸ ಆಯಾಮ ದೊರಕುತ್ತದೆ. ಈ ಮೂಲಕ ನಮ್ಮ ಪ್ರಯಾಣದಲ್ಲಿ ನಾವು ಹಿಂದೆಂದಿಗಿಂತಲೂ ಹೆಚ್ಚಿನ ಪ್ರಗತಿಯನ್ನು ಸಾಧಿಸುತ್ತೇವೆ.

"ಮನೆಗೆ! ಮರಳಿ ಭಗವಂತನೆಡೆಗೆ! ಮರಳಿ ಮನೆಗೆ! ಮಧುರವಾದ ಮನೋಹರವಾದ ಮನೆಗೆ!" ಪವಿತ್ರ ಪ್ರೇಮದ ನೆಲೆಯ ಸಂದೇಶವಾಹಕರಾದ ಭಗವಂತನ ಪ್ರತಿನಿಧಿಗಳ ಸ್ವಲ್ಪಮಾತ್ರ ಸಾಂಗತ್ಯದ ಅವಕಾಶ ಭಾಗ್ಯವನ್ನು ನಾವು ನಮ್ಮದಾಗಿಸಿಕೊಂಡರೆ, ಈ ರೀತಿಯ ಒಂದು ದಿವ್ಯ ಭಾವ ನಮ್ಮ

ಅಂತರಂಗದಲ್ಲಿ ಉತ್ಪತ್ತಿಯಾಗುವುದಕ್ಕೆ ಸಾಧ್ಯ. ಭಗತ್ಪ್ರಜ್ಞೆಯ ಆ ಪ್ರಚಾರಕರು ನಮ್ಮನ್ನು ನಮ್ಮ ಮನೆಯತ್ತ ಕರೆದೊಯ್ಯುತ್ತಾರೆ, ಅವರ ಕರುಣೆಯಿಂದ ನಮ್ಮಲ್ಲಿ ನಮ್ಮ ನಿಜ ನಿವಾಸದ ಕುರಿತು ಒಂದು ನಿಶ್ಚಲವಾದ, ಆತ್ಮೀಯ ಪರಿಕಲ್ಪನೆ ಮೂಡುತ್ತದೆ. ಈ ಮೂಲಕ ನಾವು ಆ ಜಗತ್ತಿನೆಡೆಗೆ ಮುನ್ನಡೆಯನ್ನು ಸಾಧಿಸುತ್ತೇವೆ.

## ಭಾಗ ೩

# ಮರಳಿ ಮನೆಗೆ

ಸಾಮಾನ್ಯವಾಗಿ ಈ ಜಗತ್ತಿನಲ್ಲಿ ನಾವು ಹೆಚ್ಚಿನ ಶಕ್ತಿಯನ್ನು ಸಂಗ್ರಹಿಸಲು ಪರಿಸರವನ್ನು ಶೋಷಿಸುವ ಕ್ರಿಯಾಶೀಲ ವ್ಯಕ್ತಿಗಳು. ನಮ್ಮ ಅಧಿಕಾರದ ಬಳಕೆಗೆ ಮತ್ತು ಅವಶ್ಯಕತೆಗನುಗುಣವಾಗಿ ಬಳಸಲು ಅನುಕೂಲವಾಗುವಹಾಗೆ ಕೂಡಿಹಾಕಲು ಹೆಚ್ಚು ಹೆಚ್ಚು ದ್ರವ್ಯವನ್ನು ಸಂಗ್ರಹಿಸುವ ಪ್ರಯತ್ನ ಸತತವಾಗಿ ಜಾರಿಯಲ್ಲಿರುತ್ತದೆ. ಇದು ಇಲ್ಲಿಯ ಸಾರ್ವತ್ರಿಕ ಬದುಕಿನ ವಾಸ್ತವ ಲಕ್ಷಣ. ಈ ಪ್ರಯತ್ನದಲ್ಲಿ ಏನಾದರೂ ಅಡಚಣೆಗಳುಂಟಾದಲ್ಲಿ ಅಂತಹ ಸನ್ನಿವೇಶಗಳನ್ನು, ಅಧಿಕ ದ್ರವ್ಯವನ್ನು ಸಂಗ್ರಹಿಸುವ ಇಲ್ಲಿಯ ಬದುಕಿನ ಧ್ಯೇಯವನ್ನು ವಿರೋಧಿಸುವುದರಿಂದ, ಕೆಟ್ಟಸನಿವೇಶಗಳು ಎಂದು ಪರಿಗಣಿಸಲಾಗುತ್ತದೆ. ಅದಾಗ್ಯೂ ನಮ್ಮ ಆಂತರಿಕ ಬದುಕಿಗೆ, ನಮ್ಮೊಳಗಿರುವ ಆತ್ಮನ ಬದುಕಿಗೆ ಅವಶ್ಯವಿರುವ ಸಂಪತ್ತನ್ನು ಗಳಿಸುವಲ್ಲಿ ನಮ್ಮ ಆಂತರಿಕ ಸ್ವಭಾವವು ತೋರುವ ಉದಾಸೀನತೆಯು ಉಂಟುಮಾಡುವ ಅಪಾಯದಷ್ಟು ನಮ್ಮ ಬಾಹ್ಯ ಪ್ರಕೃತಿಯಿಂದ ಎದುರಾಗುವ ಅಡಚಣೆಗಳು ನಮಗೆ ಅಪಾಯಕಾರಿಯಲ್ಲ ಎಂಬ ವಿಷಯವನ್ನು, ನಮ್ಮ ಆಂತರಿಕ ಸಂಪತ್ತಿನ ಪ್ರಾಮುಖ್ಯತೆಯನ್ನು ಮನಗಾಣಿಸಲು ಉಪದೇಶಿಸಲಾಗಿದೆ.

ಹೊರಗಿಂದ ಬರುವ ಸಂಪತ್ತು ಅಷ್ಟೇನೂ ಪ್ರಾಮುಖ್ಯವಾದುದಲ್ಲ. ಅದು ಬರುತ್ತದೆ ಹೋಗುತ್ತದೆ. ಪ್ರಸ್ತುತ ನಮ್ಮ ಎಲ್ಲಾ ವಿಚಾರಗಳಿಗೆ ಕೇಂದ್ರವಾಗಿರುವ ಈ ದೇಹ ಕೂಡ ಒಂದು ದಿನ ನಾಶವಾಗುತ್ತದೆ. ಹಾಗಾಗಿ ನಾಶಗೊಳ್ಳುವ ಈ ದೇಹವನ್ನು ಸಂಬಂಧಿಸಿ ಅಷ್ಟೊಂದು ಕಷ್ಟಪಟ್ಟು ಸಂಪತ್ತನ್ನು ಅಥವಾ ಶಕ್ತಿಯನ್ನು

ಸಂಗ್ರಹಿಸುವ ಅವಶ್ಯಕತೆಯಾದರೂ ಏನು? ಎಂಬ ವಿಷಯದ ಬಗ್ಗೆ ನಾವು ಸದ ಜಾಗರೂಕರಾಗಿರಬೇಕು. ಆಂತರಿಕವಾಗಿ ನಮ್ಮೊಳಗೆ ಅಡಕವಾಗಿರುವ ನಮ್ಮಗುರುತಾದ ಆತ್ಮನ ಮೂಲಕ ಅಂತರಂಗದಿಂದ ಎಚ್ಚೆತ್ತುಕೊಳ್ಳಿ. ನಿಮ್ಮ ದಿವ್ಯ ಸ್ವಭಾವವನ್ನು ಕಂಡುಕೊಳ್ಳಿ. ಒಬ್ಬ ಸಾಧು ಅಥವಾ ಶುದ್ಧಭಕ್ತನ ಸಂಪರ್ಕದಿಂದ ಮಾತ್ರ ಈ ಅಭಿಯಾನ ಸಾಧ್ಯವಾಗುತ್ತದೆ.

ಸಾಧುಸಂತರ ಸಂಗದಿಂದ ಹೊರತಾದ ಹಾಗೂ ನಮ್ಮ ನೈಜ ಬದುಕಿನ ಸಾರಾಂಶದ ಬಗ್ಗೆ ನಾವು ಚರ್ಚಿಸದ ಪ್ರತಿ ದಿನವೂ ವ್ಯರ್ಥವೆಂದೇ ತಿಳಿದುಕೊಳ್ಳತಕ್ಕದ್ದು. ಇದು ನಮಗಾಗುವ ವೈಯಕ್ತಿಕ ಹಾನಿ. ಈ ವಿಚಾರದ ಬಗ್ಗೆ ನಾವು ಯಾವಾಗಲೂ ಪ್ರಜ್ಞೆಯುಳ್ಳವರಾಗಿರಬೇಕು. ಎಲ್ಲಾ ವಿಷಯಗಳಲ್ಲಿ ಹೇಗಾದರೂ ನಾವು ನಮ್ಮ ಸ್ವಂತ ವ್ಯಕ್ತಿತ್ವದ ಬಗ್ಗೆ ಪ್ರಜ್ಞೆಯುಳ್ಳವರಾಗಿರಬೇಕು. ನಮ್ಮನ್ನು ನಾವು ಗುರುತಿಸಿಕೊಂಡು ನಮ್ಮ ಸ್ವಹಿತಾಸಕ್ತಿಯಬಗ್ಗೆ ಎಚ್ಚರವಹಿಸಿಕೊಳ್ಳಬೇಕು.ಬಾಹ್ಯ ಪ್ರಪಂಚ ಮತ್ತು ಅದರ ಅನಗತ್ಯ ಚಟುವಟಿಕೆಗಳಬಗ್ಗೆ ಉದಾಸೀನರಾಗಿರಬೇಕು ಮತ್ತು ನಮ್ಮ ನಮ್ಮ ಆಂತರಿಕ ಸಂಪತ್ತಿನ ನೈಜತೆಯಲ್ಲಿ ಆಳವಾಗಿ ಧುಮುಕಬೇಕು. ನಮ್ಮ ಅಂತರಾತ್ಮವು ಬದುಕುತ್ತಿರುವ ಆಂತರಿಕ ಜಗತ್ತನ್ನು ಕಂಡುಕೊಳ್ಳಬೇಕು. ನಮ್ಮ ಮೂಲ ನಿವಾಸವನ್ನು ಹುಡುಕಲು ಪ್ರಯತ್ನಿಸಬೇಕು. ಮರಳಿ ಮನೆಗೆ ! ಮರಳಿ ಭಗವಂತನೆಡೆಗೆ!. ನಿಮ್ಮಲ್ಲಿರುವ ಶಕ್ತಿಯನ್ನು ನಿಮ್ಮ ಮೂಲ ನಿವಾಸಕ್ಕೆ ತೆರಳಲು ಮಾತ್ರ ಉಪಯೋಗಿಸಿ. ನಿಮ್ಮದಲ್ಲದ ನೆಲೆಯಲ್ಲಿ, ಸಾವಿನ ಜಗತ್ತಿನಲ್ಲಿ, ಅನವಶ್ಯಕವಾಗಿ ಅಡ್ಡಾಡಲು ಅದನ್ನು ಉಪಯೋಗಿಸಬೇಡಿ. ಹೇಗಾದರೂ ಸರಿ, ಸಾವಿನ ನೆಲದ ಸಂಪರ್ಕವನ್ನು ಕಡಿದುಕೊಳ್ಳಿ, ಮತ್ತು ಅಮರತ್ವದ ನೆಲವನ್ನು ಸೇರಲು ಪ್ರಯತ್ನಿಸಿ. ನೀವು ಆ ನೆಲದ ಸದಸ್ಯರೆಂಬುದನ್ನು ಕಂಡುಕೊಳ್ಳಬೆಕು .ನಿಮ್ಮ ಸ್ವಗೃಹ ಯಾವುದು ಮತ್ತು ಅದು ಏಕೆ ನಿಮ್ಮ ಮನೆಯಾಗಿದೆ ಎಂಬುದನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಿ. ಗೃಹ ಸೌಲಭ್ಯದ ಅರ್ಥವೇನು? ನಮ್ಮ ಜನ್ಮಸಿದ್ಧ ಹಕ್ಕಿನ ಸ್ವಾಭಾವಿಕ ನೆಲೆ ಎಂದು ಅರ್ಥ. ಪ್ರಸ್ತುತ ನಾವು

ನಮ್ಮ ಸ್ವಗೃಹದಲ್ಲಿ ನೆಲೆಸಿಲ್ಲ ಎಂಬ ಸತ್ಯವನ್ನು ನಾವು ಎದುರಿಸಬೇಕು. ನಮ್ಮ ಸ್ವಗೃಹವನ್ನು ಹುಡುಕುವಲ್ಲಿ ನಾವು ಕಾತುರರಾಗಿದ್ದರೆ, ಅದೇ ನಮ್ಮ ಭಾಗ್ಯ!

ನಮ್ಮ ಆಂತರಿಕ ದಾಹವನ್ನು ತಣಿಸುವ ವಿಧಾನವನ್ನು ಕಂಡುಕೊಳ್ಳುವುದೇ ನಮ್ಮ ಮೂಲ ಅವಶ್ಯಕತೆಯಾಗಿರಬೇಕು. "ಇಲ್ಲಿ ಈ ಜಗತ್ತು ಇದೆ ಮತ್ತು ಈ ಜಗತ್ತಿನಲ್ಲಿ ನಾನಿದ್ದೇನೆ, ಆದರೆ ನಾನು ತೃಪ್ತನಾಗಿಲ್ಲ, ನನ್ನ ಅಂತರಾತ್ಮನನ್ನು ತೃಪ್ತಿಪಡಿಸುವ ವಿಧಾನ ಯಾವುದು?" ಎಂಬುದೇ ನಮ್ಮ ಭಾವನೆಯಾಗಿರಬೇಕು. ನಮ್ಮೊಳಗೆ ಒಂದು ಕೋರಿಕೆಯಿದೆ. ಹಾಗಿದ್ದರೆ ಯಾವ ವಿಧಾನದಿಂದ ಈ ಕೋರಿಕೆಯ ನ್ನು ಈಡೇರಿಸಬಹುದು? ಪ್ರಸ್ತುತ ನಾವು ಈ ಮಾಂಸಭರಿತ ದೇಹದಲ್ಲಿದ್ದೇವೆ. ಆದರೆ ಈ ದೇಹದ ಭಾಗಗಳಾದ ಮಾಂಸ, ಮೂಳೆ, ಚರ್ಮ, ನರಮಂಡಲ ಮತ್ತು ರಕ್ತಗಳಬಗ್ಗೆ ಎಲ್ಲ ವಿವರಗಳನ್ನು ತಿಳಿದುಕೊಳ್ಳುವುದು ಬದುಕಿನ ಪ್ರಧಾನ ಅಂಶವಲ್ಲ. ರಕ್ತದ ಮಿಶ್ರಣವನ್ನು ಅರಿತುಕೊಳ್ಳುವುದು ಕೇವಲ ಬಾಹ್ಯ ವಿವರ. ಅನೇಕ ಬಾಹ್ಯ ವಿಷಗಳ ಅಧ್ಯಯನಕ್ಕೆ ನಾವೇಕೆ ನಮ್ಮ ಅಮೂಲ್ಯವಾದ ಸಮಯವನ್ನು ವ್ಯರ್ಥಮಾಡಬೇಕು? "ನಾನು ಯಾರು? ನಾನೇಕೆ ಸಂಕಟದಲ್ಲಿದ್ದೇನೆ? ಈ ಸಂಕಟದಿಂದ ಪಾರಾಗುವ ವಿಧಾನ ನನಗೆ ತಿಳಿದಿಲ್ಲ, ನಾನು ಎಲ್ಲಿಂದ ಬಂದಿದ್ದೇನೆ? ಹೇಗೆ ಬದುಕುತ್ತಿದ್ದೇನೆ? ಮತ್ತು ನನ್ನ ಭವಿಷ್ಯವೇನು? ಈ ರೀತಿಯಾಗಿ ನಮ್ಮ ಯೋಚನೆಗಳು ನಿಯಂತ್ರಿತವಾಗಿರಬೇಕು.ಈ ಮೇಲಿನ ಪ್ರಶ್ನೆಗಳು ನಮ್ಮ ವಿಚಾರಗಳ ಪ್ರಧಾನ ಅಂಶಗಳಾಗಿರಬೇಕು. ಈ ಪ್ರಶ್ನೆಗಳಿಗೆ ಸಮಾಧಾನವೇ ನಮ್ಮ ಪ್ರಧಾನ ಆಸಕ್ತಿಯಾಗಬೇಕು, ಮತ್ತು ನಾವು ಅವಶ್ಯವಾಗಿ ಈ ಪ್ರಶ್ನೆಗಳಿಗೆ ಸಮಾಧಾನವನ್ನು ಹುಡುಕಲು ಶ್ರಮಿಸಬೇಕು ಹಾಗೂ ನಮ್ಮ ಎಲ್ಲಾ ಶಕ್ತಿಯನ್ನು ಈ ಶ್ರಮದಲ್ಲಿ ಕೇಂದ್ರೀಕರಿಸಬೇಕು. ಇದು ಕೇವಲ ನನಗೊಬ್ಬನಿಗೇ ಅನ್ವಯವಾದುದಲ್ಲ, ಬದಲಾಗಿ ಸಕಲ ಜೀವಸಂಕುಲದ ಹಿತಾಸಕ್ತಿಯಾಗಬೇಕು ಎಂಬ ಭಾವ ನಮ್ಮದಾಗಬೇಕು.

ಪ್ರತಿಯೊಂದು ವಸ್ತುವಿನ ಮೂಲವನ್ನು ಶೋಧಿಸುವುದು ಯುಕ್ತ ಜಿಜ್ಞಾಸೆ. ಆದರೆ ಅಗತ್ಯವಿಲ್ಲದ ನೂರಾರು ವಿಷಯಗಳ ಶೋಧನೆಗೆ ಸಮಯವನ್ನು ಮತ್ತು ಶಕ್ತಿಯನ್ನು ವ್ಯಯಿಸುವುದು ಬರೇ ವ್ಯರ್ಥ. ಶಾಸ್ತ್ರಗಳು ಯುಕ್ತವಾದ ಜಿಜ್ಞಾಸೆಯನ್ನು ಈ ರೀತಿ ಸ್ಪಷ್ಟೀಕರಿಸಿವೆ, "ನಾನು ಎಲ್ಲಿಂದ ಬಂದಿರುತ್ತೇನೆ? ಯಾವುದು ನನ್ನನ್ನು ಸಂರಕ್ಷಿಸುತ್ತಿದೆ? ನನ್ನ ಭವಿಷ್ಯವೇನು? ನಾನೇಕೆ ಅಸ್ವಸ್ಥನಾಗಿದ್ದೇನೆ ಮತು ನನ್ನ ಆಂತರಿಕ ಪರಿಪೂರ್ಣತೆಯನ್ನು ನಾನು ಹೇಗೆ ಹೊಂದಬಹುದು? ನಮ್ಮ ಎಲ್ಲಾ ಪ್ರಶ್ನೆಗಳು ಹಾಗೂ ವಿಚಾರಗಳು ಈ ಮಾದರಿಯನ್ನು ಅನುಸರಿಸಬೇಕು. ಇಲ್ಲವಾದಲ್ಲಿ ನಮ್ಮ ವಿಚಾರಗಳು ಕುಲುಷಿತಗೊಳ್ಳುತ್ತವೆ. ಅವು ಯುಕ್ತ ವಿಚಾರಗಳಾಗಿರುವುದಿಲ್ಲ. ಹೆಚ್ಚು ಹೆಚ್ಚು ಕುತೂಹಲಗಳು ಮೂಡುತ್ತಿರುತ್ತವೆ. ಅವುಗಳಿಗೆ ಕೊನೆಯೆಂಬುವುದೇ ಇರುವುದಿಲ್ಲ. ಹಾಗಾಗಿ ನಮ್ಮ ಪ್ರಶ್ನೆಗಳು ಯುಕ್ತವಾಗಿರಬೇಕು, ನಿಯಂತ್ರಿತವಾಗಿರಬೇಕು. ನಾವು ಪ್ರಶ್ನೆಗಳನ್ನು ಹೇಗೆ ಕೇಳಬೇಕು ಎಂಬುದನ್ನು ಕೂಡಾ ಕಲಿತುಕೊಳ್ಳಬೇಕು. ಈ ಮೂಲಕ ನಮ್ಮ ಶಕ್ತಿಗೆ ಸ್ವಲ್ಪ ಮಹತ್ವ ದೊರೆಯುತ್ತದೆ, ನಮ್ಮ ಶಕ್ತಿಯು ಅನಗತ್ಯವಾಗಿ ನಷ್ಟವಾಗಲಾರದು.

ನಮ್ಮ ಮೂಲ ಧ್ಯೇಯಗಳನ್ನು ಪರಿಪೂರ್ಣಗೊಳಿಸುವಲ್ಲಿ ನಮ್ಮನ್ನು ನಿರ್ದೇಶಿಸುವ ಪ್ರಶ್ನೆಗಳು ನಂಬಲರ್ಹವಾಗಿರುತ್ತವೆ. ಹಾಗಾಗಿ ನಾವು ನಮ್ಮ ಶಕ್ತಿಯನ್ನು ಕಾಪಾಡಿಕೊಳ್ಳಬೇಕು ಮತ್ತು ಅದನ್ನು ಯುಕ್ತವಾದ ಮಾರ್ಗದಲ್ಲಿ ನಿಯಂತ್ರಿಸಬೇಕು. ಪ್ರಸ್ತುತ ನಾವು ಕಲಹಗಳ ಕಾಲವಾದ ಕಲಿಯುಗದಲ್ಲಿ ಬದುಕುತ್ತಿದ್ದೇವೆ. ಇಲ್ಲಿ ನಮಗೆ ಇರುವ ಏಕೈಕ ಮತ್ತು ನೈಜ ಅಗತ್ಯ ಸಹಾಯವೆಂದರೆ ಶುದ್ಧ ಭಕ್ತರ ಸಾಂಗತ್ಯ ಮತ್ತು ಭಗವಂತನ ದಿವ್ಯನಾಮ. ಅದಿಲ್ಲದಿದ್ದರೆ, ಅದರಿಂದ ನಾವು ಕ್ರಮ ತಪ್ಪಿದರೆ ನಾವಿಡುವ ಪ್ರತಿ ಹೆಜ್ಜೆಯೂ ನಮ್ಮನ್ನು ತಪ್ಪುದಾರಿಗೆ ನಿರ್ದೇಶಿಸುವ ಸಂಭವವಿದೆ.

ಶ್ರೀ ಚೈತನ್ಯರು ಇದನ್ನು ಎಲ್ಲಾ ಉಪದೇಶಗಳ ಸಾರ ಎಂದು ವಿವರಿಸಿದರು. ಅನಪೇಕ್ಷಿತ ಬದುಕಿನಿಂದ ಹೊರಬರಲು ಇದಕ್ಕಿಂತ ಉತ್ತಮ ಸಾಧನ ಇನ್ನೊಂದಿಲ್ಲ ಎಂದು ಅವರು ಒತ್ತಿ ಹೇಳಿದ್ದಾರೆ. ಭಗವಂತನ ನಾಮಗಳನ್ನು ಸಾಧುಸಂತರ ಅಥವಾ ಶುದ್ಧಭಕ್ತರ ಸಂಗರಹಿತವಾಗಿ ಜಪಿಸುವುದು ಅಥವಾ ಹಾಡಿ ನರ್ತಿಸುವುದರಿಂದ ನಾವು ಯಾವುದೇ ರೀತಿಯ ಆಧ್ಯಾತ್ಮಿಕ ಮುನ್ನಡೆಯನ್ನು ಸಾಧಿಸಲಾಗುವುದಿಲ್ಲ ಎಂದು ಅವರು ಹೇಳಿದ್ದಾರೆ. ಹಾಗಾಗಿ ಒಂದೇ ಶಬ್ದದಲ್ಲಿ ಹೇಳಬೇಕೆಂದರೆ, ಕಲಿಯುಗದಲ್ಲಿ ಎಲ್ಲಾ ಸಂಕಷ್ಟಗಳಿಂದ ಮುಕ್ತರಾಗಬೇಕಾದರೆ ಸರಳವಾದ ಮತ್ತು ಸುರಕ್ಷಿತವಾದ ಮಾರ್ಗ ಒಂದೇ **"ಸಾಧು ಸಂಗ"**. ನಾವು, ಭಗವತ್ಪ್ರಜ್ಞೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಿದ ಒಬ್ಬ ಸಿದ್ಧಾತ್ಮನ ಅಥವಾ ಶುದ್ಧಭಕ್ತನ ಸಾಂಗತ್ಯವನ್ನು ಗಳಿಸಿಕೊಳ್ಳಬೇಕು. ಆವಾಗ ಎಲ್ಲವೂ ನಿಯಂತ್ರಣಕ್ಕೆ ಬರುತ್ತದೆ ಮತ್ತು ಆತ್ಮ ಸಾಕ್ಷಾತ್ಕಾರ ಹೊಂದಿದ ಸಂತನೇ ನಮ್ಮ ಗುರು. ಆಧ್ಯಾತ್ಮಿಕ ಜ್ಞಾನದ ಒಡೆಯನಾದ ಗುರುದೇವರೇ ನಮ್ಮ ಮಾರ್ಗದರ್ಶಕರು. ನಮ್ಮನ್ನು ತೃಪ್ತಿಕರವಾಗಿ ಮಾರ್ಗದರ್ಶಿಸುವವರೇ ನಮ್ಮ ಗುರುಗಳು. ಅವರಲ್ಲಲ್ಲದೇ ಇನ್ಯಾರ ಮೇಲೆ ತಾನೇ ನಾವು ನಮ್ಮ ಸಂಪೂರ್ಣ ವಿಶ್ವಾಸವನ್ನಿಡಬಹುದು? ಮತ್ತು ಯಾರಿಗೆ ತಾನೇ ನಾವು ಸಂಪೂರ್ಣ ಶರಣಾಗಬಹುದು? ಅವರನ್ನಲ್ಲದೇ ಮತ್ಯಾರನ್ನು ನಾವು ಅನುಸರಿಸಬಹುದು? ನಿಜವಾದ ಗುರು ಮತ್ತು ಆಧ್ಯಾತ್ಮಿಕ ಮಾರ್ಗ ದರ್ಶಕರೇ ನಮ್ಮ ಜಿಜ್ಞಾಸೆಯ ಅಂತಿಮ ಅಗತ್ಯಗಳನ್ನು ಪೂರೈಸಬಲ್ಲರು. ಅವರ ಮೂಲಕ ಪ್ರೇಮದ ಉನ್ನತೋನ್ನತ ನೆಲೆಯಿಂದ ನಮಗೆ ಉಚ್ಚ ಸಂದೇಶಗಳು ಹಾಗೂ ಮಾರ್ಗದರ್ಶನಗಳು ದೊರಕುತ್ತವೆ. ಆ ಸೂಕ್ಷ್ಮಾತಿಸೂಕ್ಷ್ಮ ಹಾಗೂ ಉದಾತ್ತ ತರಂಗಗಳೊಡನೆ ನಾವು ಸಂಪರ್ಕ ಬೆಳೆಸಿಕೊಳ್ಳಬೇಕು. ಆವಾಗ ನಾವು ಹೆಚ್ಚಿನ ಫಲಾನುಭವಿಗಳಾಗಬಹುದು. ಇದು ಸರ್ವ ಸಾಮಾನ್ಯವಾಗಿ ಅನ್ವಯಿಸುವ ಉಚ್ಚ ಮನೋಭಾವ. ಒಟ್ಟಾರೆ, ನಾವು ಯಾವಾಗಲೂ ಉನ್ನತ ಪ್ರಾಂತ್ಯಗಳ, ಉನ್ನತ ವಿಚಾರಗಳನ್ನು ಹೊಂದಿದ, ಉನ್ನತ ಪ್ರತಿನಿಧಿಗಳ ಅಜ್ಞಾಧಾರಿಗಳಾಗಿರಬೇಕು. ಈ ಮೂಲಕ ನಾವು ಅತ್ಯುನ್ನತ ಹಾಗೂ ಅತಿ ಸೂಕ್ಷ್ಮ ನೆಲೆಯ ಬದುಕಿನ

ಸಂಪರ್ಕವನ್ನು ಹೊಂದಬಹುದು. ಈ ನಮ್ಮ ಪ್ರಯತ್ನದಲ್ಲಿ ನಾವು ವಿವಿಧ ಆಸಕ್ತಿಗಳ ವಿವಿಧ ನೆಲೆಗಳನ್ನು ಕಾಣಬಹುದು, ಮತ್ತು ವಿವಿಧರೀತಿಯ ಲಾಭ-ನಷ್ಟಗಳೂ ಉಂಟಾಗಬಹುದು. ಆದರೆ, ಆ ಅತ್ಯುನ್ನತ ನೆಲೆಯೊಂದಿಗೆ ಸಂಪರ್ಕವನ್ನು ಬೆಳೆಸುವುದು ನಮ್ಮ ಗುರಿಯಾಗಬೇಕು. ಈ ಐಹಿಕ ಪ್ರಕೃತಿಯ ಮೋಡಿಯಿಂದ ನಾವು ಹೊರಬರಬೇಕು.ಇಲ್ಲಿಯ ಬದುಕು ಸಂಪೂರ್ಣ ಹಳಸಲು ಎಂಬುದನ್ನು ನಾವು ಮನಗಂಡಿದ್ದಾಯಿತು. ಹುಟ್ಟು, ಸಾವು, ಮುಪ್ಪುತನ ಮತ್ತು ರೋಗಗಳ ತಾಣವಾಗಿರುವ ಈ ಐಹಿಕ ಜಗತ್ತು ಖಂಡಿತವಾಗಿ ಶಾಶ್ವತವಾದ ಸುಖ ಸಂತೋಷಗಳನ್ನು ನೀಡಲಾರದು. ಇಲ್ಲಿ ನಾವು ಸತತವಾಗಿ ಈ ನಾಲ್ಕು ವಿಷಯಗಳ ಬೆದರಿಕೆಯಡಿಯಲ್ಲಿ ಬದುಕುತ್ತಿರುತ್ತೇವೆ. ಈ ಪ್ರಾಪಂಚಿಕ ಬದುಕಿನಲ್ಲೇನೂ ಸ್ವಾರಸ್ಯವಿಲ್ಲ, ಎಲ್ಲ ಆಕರ್ಷಣೆಯೂ ಮುಗಿದುಹೋಯಿತು. ಹಾಗಾಗಿ, ಕೃತ್ರಿಮತೆಯಿಲ್ಲದ, ನಿರಂತರ ಆನಂದವನ್ನು ಅನುಭವಿಸುವ ಬದುಕನ್ನು ಎಲ್ಲಿ ಬದುಕಬಹುದು ಎಂಬುದನ್ನು ನಾವು ವಿಚಾರಿಸಬೇಕು. ನಮಗೆ ನೈಜ ಬದುಕನ್ನು ಪ್ರದಾನಿಸುವ ಒಂದು ಉನ್ನತ ನೆಲೆಯನ್ನು ಆರಿಸಿಕೊಳ್ಳಬೇಕು.

"ಯಾವ ನೆಲೆಯಿಂದ ಮತ್ತೆ ಈ ಮರ್ತ್ಯಲೋಕಕ್ಕೆ ಮರಳಿಬರುವ ಸಂಭವವಿರುವುದಿಲ್ಲವೋ, ಅದು ನನ್ನ ಉನ್ನತವಾದ ಧಾಮ" ಎಂದು ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ಹೇಳುತ್ತಾ ಅರ್ಜುನನಿಗೆ ಹೀಗೆ ಉಪದೇಶಿಸುತ್ತಾನೆ "ಶಾಶ್ವತವಾದ ಒಂದು ಸ್ಥಾನ ಕೇವಲ ನನ್ನ ಧಾಮದಲ್ಲಿ ಮಾತ್ರ ಸಾಧ್ಯ, ಈ ಲೋಕದ ಯಾವದೇ ಸ್ಥಾನಮಾನಗಳೂ, ಸ್ವಯಮ್ ಒಬ್ಬ ರಾಜನ ಪದವಿಯೂ ಕೂಡಾ ಶಾಶ್ವತವಾದುದಲ್ಲ! ಇಲ್ಲಿನ ಎಲ್ಲಾ ಸ್ಥಾನಮಾನ ಹಾಗೂ ವಿಶೇಷ ಪದವಿಗಳು ಎಷ್ಟೇ ಉನ್ನತವಾಗಿದ್ದರೂ ಕೂಡಾ ಒಂದು ಕನಸಿನ ಹಾಗೆ; ಆದ್ದರಿಂದ ಈ ಸ್ವಪ್ನಮಯ ಬದುಕಿನಿಂದ ಹೊರಬಂದು ನೈಜ ಬದುಕಿಗೆ ಪ್ರವೇಶಿಸಬೇಕೆಂದಿದ್ದರೆ, ಆ ನೈಜ ಬದುಕಿನ ನೆಲೆಯನ್ನು ಕಂಡುಹಿಡಿಯುವ ಉನ್ನತ ದರ್ಜೆಗೆ ನಿನ್ನನ್ನು ನೀನು ಮೇಲಕ್ಕೇರಿಸಿಕೊ, ಆ ಬದುಕು ಎಷ್ಟೇ ಸೂಕ್ಷ್ಮವಾಗಿರಲಿ, ನಿಶ್ಚಯವಾಗಿಯೂ ಅದು ಸಾವಿಗೆ ತುತ್ತಾಗಲಾರದು"

ಶಾಶ್ವತವಾದ ಒಂದು ಬದುಕನ್ನು ರೂಪಿಸಿಕೊಳ್ಳಲು ನಿಮ್ಮ ಶಕ್ತಿಯನ್ನು ಒಟ್ಟುಗೂಡಿಸಿಕೊಳ್ಳಿ. ಪ್ರಸ್ತುತ, ಯಾವುದೇ ಕ್ಷಣದಲ್ಲಾದರೂ ನಾಶಗೊಳ್ಳಬಲ್ಲ ವಿಷಯಗಳಿಗೆ ನಿಮ್ಮ ಅಮೂಲ್ಯ ಸಮಯ ಮತ್ತು ಸಂಪತ್ತನ್ನು ಇಲ್ಲಿ ವ್ಯಯಿಸುತ್ತಿದ್ದೀರಿ. ಇದೊಂದು ಮೂರ್ಖ ಪ್ರವೃತ್ತಿ. ನೀವೇ ನಿಮ್ಮ ಅತ್ಯುತ್ತಮ ಸ್ನೇಹಿತರೆಂಬುದನ್ನು ತಿಳಿದುಕೊಳ್ಳಿ. ಆದರೆ ನೀವೆ ನಿಮ್ಮ ಅತ್ಯಂತ ಕೆಟ್ಟ ವೈರಿಗಳೂ ಕೂಡಾ ಆಗಬಹುದು ಎಂಬುದನ್ನು ಮರೆಯಬೇಡಿ. ನಿಮ್ಮ ನೈಜ ಅಭಿವೃದ್ಧಿಯತ್ತ ಉತ್ತಮ ಪ್ರಗತಿಯನ್ನು ಸಾಧಿಸುವಲ್ಲಿ ನಿಮ್ಮ ಗಮನವನ್ನು ಹರಿಸದಿದ್ದರೆ ನೀವೇ ನಿಮ್ಮ ವೈರಿಗಳು! ಆದರೆ ನೀವು ನಿಮ್ಮ ಅತ್ಯುತ್ತಮ ಬಂಧುಗಳಾಗಬಹುದು! ನೀವೇ ನಿಮಗೆ ಮಾಡಿಕೊಳ್ಳುವಷ್ಟು ಸಹಾಯ ಇತರರು ನಿಮಗೆ ಮಾಡಲಾರರು. ನಿಮ್ಮನ್ನು ನೀವು ನಿಯಂತ್ರಿಸಿಕೊಳ್ಳಬಲ್ಲಿರಾದರೆ, ನಿಮ್ಮ ಶಕ್ತಿಯನ್ನು ಅನವಶ್ಯಕವಾಗಿ ಹರಿಯಗೊಡದೇ ಅದನ್ನು ಯುಕ್ತವಾದ ರೀತಿಯಲ್ಲಿ ನಿಮ್ಮ ನಿಜವಾದ ಏಳಿಗೆಗೆ ಅನುಕೂಲವಾಗುವಂತೆ ಬಳಸಿಕೊಳ್ಳಿ. ಆಗ ನೀವು ನಿಮ್ಮ ಉತ್ತಮ ಸ್ನೇಹಿತರಾಗುವಿರಿ. ಮುಖ್ಯವಾಗಿ ವಿಚರಮಾಡಬೇಕಾಗಿರುವ ವಿಷಯವೆಂದರೆ, ಒಂದುವೇಳೆ, ಶೋಷಣೆ, ಪ್ರತೀಕಾರ ಹಾಗೂ ಸಂಕಷ್ಟಗಳ ಜಗತ್ತಿಗೆ ನಿಮ್ಮನ್ನು ಸದಾ ಎಳೆದೊಯ್ಯಲು ಪ್ರಯತ್ನಿಸುವ ಕೆಳಮಟ್ಟದ ನಿಮ್ಮ ವಿವಿಧ ಇಂದ್ರಿಯಗಳ ಆಧೀನಕ್ಕೆ ನಿಮ್ಮನ್ನು ನೀವು ಒಪ್ಪಿಸಿಕೊಂಡಿರೆಂದಾದರೆ, ಆಗ ನೀವೇ ನಿಮ್ಮ ಕೆಟ್ಟ ವೈರಿಗಳಾಗುವಿರಿ.

ಈ ವಿಷಯವನ್ನು ನಾವು ಸತತವಾಗಿ ಚಿಂತಿಸುತ್ತಿರಬೇಕು ಮತ್ತು ಆಳವಾಗಿ ಯೋಚಿಸಬೇಕು. ಇದರಬಗ್ಗೆಯೇ ವಿಚಾರಮಾಡುತ್ತಾ ಮುಂದೆ ಏನು ಮಾಡಬೇಕೆಂಬುದನ್ನು ನಿರ್ಧರಿಸಬೇಕು. ಮಾನವ ಜನ್ಮವೆಂಬುದು ಅತ್ಯಮೂಲ್ಯವಾದುದು. ಯಾವುದು ಸರಿ ಯಾವುದು ತಪ್ಪು ಎಂದು ಕಂಡುಕೊಳ್ಳುವ ವಿವೇಚನಾಶಕ್ತಿ ನಿಮ್ಮಲ್ಲಿದೆ, ಆದರೆ ಪ್ರತಿಫಲಗಳ ಬಲೆಗೆ ಬಿದ್ದರೆ ಆ ಶಕ್ತಿಯನ್ನು ಕಳೆದುಕೊಳ್ಳಬೇಕಾಗುತ್ತದೆ, ಮತ್ತು ಮರ, ಮೃಗ ಅಥವಾ ಇನ್ಯಾವುದಾದರೂ ಕ್ರಿಮಿ ಕೀಟಗಳ ದೇಹವನ್ನು ಸೇರಬೇಕಾಗುತ್ತದೆ. ಮುಂದಿನ

ಜನ್ಮದಲ್ಲಿ ನೀವು ಯಾವುದಾದರೂ ಪ್ರಾಣಿಯಾಗಿ ಅಥವಾ ಮರಗಿಡವಾಗಿ ಹುಟ್ಟಲಾರಿರಿ ಎಂದು ಯಾರಾದರೂ ನಿಖರವಾಗಿ ಹೇಳಬಲ್ಲಿರಾ? ಇಲ್ಲ ಎನ್ನುವುದಕ್ಕೆ ಖಾತರಿಯೇನಿದೆ?

ಎಲ್ಲ ಕ್ರಿಯಾಶೀಲ ಪ್ರಕ್ರಿಯೆಗಳು ಮತ್ತು ಅಭಿವೃದ್ಧಿಗಳು ಈ ಜಗತ್ತಿನಲ್ಲಿ ಮಾತ್ರ ಜರುಗುತ್ತವೆ ಎಂಬುದು ಸರಿಯಾದ ವಾದವಲ್ಲ. ಪ್ರಗತಿಯೆಂಬುದು ಕೇವಲ ಅಜ್ಞಾನ ಮತ್ತು ಅಂಧಕಾರಗಳ ಲೋಕಕ್ಕೆ ಸೀಮಿತವಾಗಿಲ್ಲ. ನೀವು ಸಕಾರಾತ್ಮಕವಾಗಿ ಅಭಿವೃದ್ಧಿಯಲ್ಲಿ ಭಾಗಿಗಳಾದರೆ ನಿಜವಾದ ಪ್ರಗತಿಯೆಂದರೆ ಏನೆಂಬುದನ್ನು ತಿಳಿದುಕೊಳ್ಳಬಲ್ಲಿರಿ. ನಿಮ್ಮ ಅಂತರಾತ್ಮ ಮೆಚ್ಚುವ ರೀತಿಯಲ್ಲಿ ನೀವು ಅದನ್ನು ಗ್ರಹಿಸಿ ಅನುಭವಿಸಬಲ್ಲಿರಿ. “ಇದೊಂದು ಕಾಲ್ಪನಿಕ ಹುಸಿ ಭರವಸೆ, ಈ ಮೂಲಕ ನೀವು ಯಾವುದೋ ಅರಿಯದ ಲೋಕಕ್ಕೆ ಕೊಂಡೊಯ್ಯಲ್ಪಟ್ಟು ಹಿಂಸಿಸಲ್ಪಡುವಿರಿ, ಅನಾದರಕ್ಕೊಳಪಡುವಿರಿ ಅಥವಾ ಕೊಲ್ಲಲ್ಪಡುವಿರಿ” ಎಂದು ತಿಳಿದುಕೊಳ್ಳಬೇಡಿ. ಅಲ್ಲಿ ಅಂತಹ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ನೀವು ಏನನ್ನಾದರೂ ತಿಂದಾಗ ನಿಮ್ಮ ಹೊಟ್ಟೆ ಅದಕ್ಕೆ ಸಾಕ್ಷಿಯಾಗಿರುತ್ತದೆ. “ಹೌದು! ನಾನು ತಿನ್ನುತ್ತಿದ್ದೇನೆ” ಎಂಬುದನ್ನು ರುಜುವಾತುಪಡಿಸುತ್ತದೆ. ಹಸಿವು ಇಂಗಿಹೋಗುತ್ತದೆ, ದೇಹಕ್ಕೆ ಪೌಷ್ಟಿಕಾಂಶಗಳು ದೊರೆಯುತ್ತವೆ, ಅಹಾರ ಸೇವನೆಯ ಪರಿಪೂರ್ಣತೆಯ ಅನುಭವವಾಗುತ್ತದೆ, ದೇಹದಲ್ಲಿ ಶಕ್ತಿಯ ಉತ್ಪಾದನೆಯಾಗುತ್ತದೆ ಮತ್ತು ಆಹಾರ ಸೇವಿಸಿದುದಕ್ಕೆ ಅಂತರಂಗದಿಂದ ಮೆಚ್ಚುಗೆಯಿರುತ್ತದೆ. ಇನ್ನೂ ಹೆಚ್ಚು ಹೆಚ್ಚು ತಿನ್ನಬೇಕೆಂಬ ಅವಶ್ಯಕತಾ ಮನೋಭಾವ ಇರುವುದಿಲ್ಲ. ಹಾಗೆಯೇ, ಆಧ್ಯಾತ್ಮಿಕ ಬದುಕಿನಲ್ಲಿ ನಿಮ್ಮ ಪ್ರಗತಿಯನ್ನು ರುಜುವಾತುಪಡಿಸುವ ವಿವಿಧ ಸೂಚನೆಗಳು ನಿಮ್ಮ ಅರಿವಿಗೆ ಬರುತ್ತವೆ. ನಾವು ಈಗ ಮಾನವ ದೇಹದಲ್ಲಿದ್ದೇವೆ ಮತ್ತು ಇದು ನಮಗೆ ಅತ್ಯಮೂಲ್ಯವಾದ ಅವಕಾಶ, ಆದರೆ ಇದು ವ್ಯರ್ಥ ಪರಿಶ್ರಮದಲ್ಲಿ ಕಳೆದು

ಹೋಗುತ್ತಿದೆ. ನಮ್ಮ ಅತ್ಯಮೂಲ್ಯವಾದ ಶಕ್ತಿ ಅನಗತ್ಯ ಉದ್ದೇಶಗಳ ಸಾಧನೆಗೆ ವ್ಯಯವಾಗುತ್ತಿದೆ.

ಆದ್ದರಿಂದ, ಎಚ್ಚರಗೊಳ್ಳಿ! ಎದ್ದೇಳಿ! ಮತ್ತು ಈ ಅಭಿಯಾನದಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಿ. ಕೇವಲ ನಿಮ್ಮೊಬ್ಬರಿಗೋಸ್ಕರ ಮಾತ್ರವಲ್ಲ, ಆದರೆ, ಇತರರು ಇದರಲ್ಲಿ ಪಾಲ್ಗೊಳ್ಳುವಂತೆ ಆಗ್ರಹಿಸಿ. ಇದು ನಿಮಗೆ ನಿಮ್ಮ ನಿರ್ದಿಷ್ಟ ಮಾರ್ಗದಲ್ಲಿ ಮುಂದುವರೆಯಲು ಹೆಚ್ಚಿನ ಸಹಾಯವನ್ನು ನೀಡುತ್ತದೆ. ಮುಖ್ಯವಾಗಿ ಗಮನದಲ್ಲಿಡಬೇಕಾದ ಅಂಶವೆಂದರೆ, ಒಬ್ಬ ಶ್ರೇಷ್ಟ ಪ್ರತಿನಿಧಿಯ ಮಾರ್ಗದರ್ಶನದಡಿಯಲ್ಲಿ ನಾವು ನಮ್ಮನ್ನು ಭಕ್ತಿಮಾರ್ಗದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ಯಾವುದೇ ರೀತಿಯ ಭೌತಿಕ ವಿಷಯಗಳಲ್ಲಿ ಅನಗತ್ಯವಾಗಿ ನಮ್ಮನ್ನು ತೊಡಗಿಸಿಕೊಳ್ಳಲು ಸಮಯಾವಕಾಶವಿಲ್ಲದಂತಹ ಅವಿಶ್ರಾಂತ ಕಾರ್ಯಕ್ರಮವನ್ನು ಯೋಜಿಸಿಕೊಳ್ಳಬೇಕು. ಶುದ್ಧಭಕ್ತರ ಸಂಗದಲ್ಲಿ ಅಂತಹ ಒಂದು ಅವಿಶ್ರಾಂತ ಕಾರ್ಯಕ್ರಮ ನಮಗೆ ಬಹಳ ಸಹಕಾರಿಯಾಗಬಲ್ಲದು ಮತ್ತು ಅವರು ನಮ್ಮನ್ನು ಸುರಕ್ಷಿತವಾಗಿ ನಮ್ಮ ಸ್ವಗೃಹಕ್ಕೆ ಮರಳಲು ಮಾರ್ಗದರ್ಶನ ಮಾಡುವರು.

## ಭಾಗ ೪
# ದಿವ್ಯ ಸಮನ್ವಯ

ಈ ಆಧುನಿಕ ಯುಗದಲ್ಲಿ ನಮ್ಮ ವಿಚಾರಗಳು ಶೋಷಣೆಯೆಡೆಗೇ ನಿರ್ದೇಶಿತವಾಗಿರುವುದರಿಂದ ಪರಮ ಸತ್ಯದೊಡನೆ ಸಾಮ್ಯತೆ ಅಥವಾ ಆಕರ್ಷಣೆಯನ್ನು ಕಾಣುವುದು ಬಹಳ ವಿರಳ. ಸ್ವತಹ ಜ್ಞಾನವೂ ಕೂಡಾ ಶೋಷಣೆಯ ಆಧೀನದಲ್ಲಿರುವುದರಿಂದ ಸಮಾಜದಲ್ಲಿ ಅದು ವಿಕೋಪಗಳನ್ನು ಸೃಷ್ಟಿಸುತ್ತಿದೆ. ಅಣು ಶಕ್ತಿಯೇ ಮುಂತಾದ ವೈಜ್ಞಾನಿಕ ಸಂಶೋಧನೆಗಳು ಅತ್ಯಂತ ಭಯಾನಕ ಘಟನೆಗಳಿಗೆ ಕಾರಣಗಳಾಗಿವೆ. ಈ ಜಗತ್ತು ಯಾವುದೇ ಕ್ಷಣದಲ್ಲಾದರೂ ನಾಶವಾಗಬಹುದೆಂಬ ಆತಂಕವಿದೆ. ಈ ವೈಜ್ಞಾನಿಕ ಜ್ಞಾನ ಯಾವಕ್ಷಣದಲ್ಲಾದರೂ ಸರ್ವನಾಶ ನಿಶ್ಚಿತ ಎಂಬ ಸ್ಥಿತಿಗೆ ನಮ್ಮನ್ನು ತಂದಿದೆ. ಈ ಜ್ಞಾನವು ಆತ್ಮ ಘಾತುಕವಾಗಿದೆ. ಜಗತ್ತಿನಲ್ಲಿ ಈ ರೀತಿಯ ಜ್ಞಾನದ ವೃದ್ಧಿ ಎಂದರೆ ನಾವು ಸಾಮೂಹಿಕ ಆತ್ಮಹತ್ಯೆಯೆಡೆಗೆ ಸಾಗುತ್ತಿದ್ದೇವೆಂದೇ ಅರ್ಥ.

ಶೋಷಣೆ ಎಂದರೆ ಪ್ರತಿಕ್ರಿಯೆ. ಆದ್ದರಿಂದ ನಾವು ಸಾರಾಸಗಟು ಶೋಷಣೆಯನ್ನು ಸ್ವೀಕರಿಸಿದರೆ ಅದರ ಫಲಿತಾಂಶ ಸರ್ವನಾಶ. ಅಣುಬಾಂಬಿನ ಮೂಲಕವೇ ಇರಬಹುದು ಅಥವಾ ಯಾವುದಾದರೂ ನೈಸರ್ಗಿಕ ವಿಕೋಪವಿರಬಹುದು, ಯಾವ ರೀತಿಯಲ್ಲಾದರೂ ನಾಶವಂತೂ ಜರಗುತ್ತದೆ. ನಾಶದ ನಂತರ ಪುನಃ ಸೃಷ್ಟಿ; ಹುಟ್ಟು – ಸಾವು: ಇವೆರಡರ ಮಧ್ಯೆ ರೋಗ, ಸಂಕಷ್ಟಗಳು,ಮುಪ್ಪು, ಪ್ರತಿಯೊಬ್ಬಜೀವಿಯೂ ಪುನಃ ಹುಟ್ಟುತ್ತಾನೆ ಮತ್ತು ಸಾಯುತ್ತಾನೆ ಜೀವಿಗಳಷ್ಟೇ ಅಲ್ಲ ಸಮಗ್ರ ಸೌರವ್ಯವಸ್ಥೆ ಕೂಡಾ ಪುನಃ ಸೃಷ್ಟಿಯಾಗುತ್ತದೆ ಮತ್ತು ನಾಶವಾಗುತ್ತದೆ. ಈ ಪ್ರಕ್ರಿಯೆಗೆ ಕೊನೆಯೆಂಬುದೇ ಇಲ್ಲ.

ಈ ತೊಡಕಿನಿಂದ ನಾವು ಹೊರಬರಬೇಕೆಂದಿದ್ದರೆ ನಮ್ಮ ಭೌತಿಕ ಇಂದ್ರಿಯಗಳ ಮೂಲಕ ಅನುಭವಿಸಲ್ಪಡುವ ಈ ವಾತಾವರಣವನ್ನು ಬಿಟ್ಟುಬಿಡಬೇಕು.ಇದನ್ನು ಭಗವದ್ಗೀತೆಯಲ್ಲಿ ವಿವರಿಸಿದೆ. ನಮ್ಮ ಇಂದ್ರಿಯಗಳು ಪ್ರಮುಖಸ್ಥಾನವನ್ನು ಹೊಂದಿರುವುದರಿಂದ ಕಣ್ಣು, ಕಿವಿ, ನಾಲಿಗೆ ,ಸ್ಪರ್ಷ ಮತ್ತು ವಾಸನೆಗಳು ನಮ್ಮಿಂದ ಬಿಟ್ಟುಹೋದರೆ ಈ ಸಂಪೂರ್ಣ ಭೌತಿಕ ಜಗತ್ತು ನಮ್ಮಿಂದ ಅಗಲಿದಹಾಗೆ. ನಮ್ಮ ಇಂದ್ರಿಯಗಳು ಅಸ್ತಿತ್ತ್ವದಲ್ಲಿರುವುದರಿಂದ ನಮ್ಮ ಪಾಲಿಗೆ ಈ ಜಗತ್ತು ಇರುವುದು. ಅನುಭವದ ಜಗತ್ತಿನಲ್ಲಿ ಇಂದ್ರಿಯಗಳೇ ಬಹು ಮುಖ್ಯ. ಮತ್ತು ಅವುಗಳೊಳಗೆ ಮನಸ್ಸು ಇರುತ್ತದೆ. ಮನಸ್ಸು ಎಂದರೇನು? ನಮ್ಮ ಬೇಡಿಕೆಗಳನ್ನು ಪರಿಗಣಿಸುವ ವೈಚಾರಿಕ ಶಕ್ತಿಯೇ ಈ ಮನಸ್ಸು! ಕೆಲವು ವಿಷಯಗಳಲ್ಲಿ ನಾವು ಆಸಕ್ತಿಯನ್ನು ಹೊಂದುತ್ತೇವೆ, ಇನ್ನು ಕೆಲವು ವಿಷಯಗಳಬಗ್ಗೆ ಉದಾಸೀನರಾಗುತ್ತೇವೆ, "ಇದು ನನಗೆ ಬೇಕು, ಇದು ನನಗೆ ಬೇಡ" ಇದು ನಮ್ಮೊಳಗೆ ಇರುವ ಮನಸ್ಸಿನ ಮೂಲತತ್ತ್ವ, ಅಥವಾ ಸಾಮಾನ್ಯ ಲಕ್ಷಣ. ಈ ಮನಸ್ಸು ಇಂದ್ರಿಯಗಳಿಗಿಂತ ಹೆಚ್ಚು ಪ್ರಮುಖವಾದುದು, ಏಕೆಂದರೆ ಒಂದೊಂದೊ ಸಲ ಯಾರಾದರೂ ನಮ್ಮ ಮುಂದೆ ಹಾದುಹೋದರೆ ನಾವು ಅನ್ಯಮನಸ್ಕರಾಗಿದ್ದ ಪಕ್ಷದಲ್ಲಿ, ನಾವು ಅವರನ್ನು ಗಮನಿಸದೇ ಹೋಗಬಹುದು. ಆಗ ನಾವು ಹೇಳಬಹುದು "ಓಹ್! ನಾನು ಅವರನ್ನು ನೋಡಲೇ ಇಲ್ಲ, ಅವರು ಮಾತನಾಡಿದ್ದು ನನಗೆ ಕೇಳಿಸಲೇ ಇಲ್ಲ, ನನ್ನ ಮನಸ್ಸು ಎಲ್ಲಿಯೋ ಇತ್ತು" ಆದ್ದರಿಂದ ಮನಸ್ಸು ಎಲ್ಲದರ ಕೇಂದ್ರ ಮತ್ತು ಅದು ಇಂದ್ರಿಯಗಳಿಂದ ಹೆಚ್ಚಿನದು.

ಇಂದ್ರಿಯಗಳು ಬಾಹ್ಯ ಜಗತ್ತಿಗಿಂತ ಹೆಚ್ಚು ಪ್ರಮುಖವಾದವುಗಳಾಗಿವೆ, ಮತ್ತು ಮನಸ್ಸು ಇಂದ್ರಿಯಗಳಿಗಿಂತ ಹೆಚ್ಚು ಪ್ರಮುಖವಾದುದಾಗಿದೆ. ಏಕೆಂದರೆ, ಮನಸ್ಸು ಒಂದುವೇಳೆ ಬಾಹ್ಯಪ್ರಪಂಚದಿಂದ ಏನನ್ನೂ ಸ್ವೀಕರಿಸದಿದ್ದರೆ, ಹಲವು ದ್ವಾರಗಳಂತಿರುವ ಇಂದ್ರಿಯಗಳು ನಿಷ್ಪ್ರಯೋಜಕವಾಗುತ್ತವೆ. ನಂತರ, ನಾವು ಕಂಡುಕೊಳ್ಳಬೇಕಾಗಿರುವ ನಮ್ಮೊಳಗಿರುವ ಇನ್ನೊಂದು ಮೂಲತತ್ತ್ವವೆಂದರೆ,

ಕಾರಣ ಎಂದು ತಿಳಿಯಲ್ಪಡುವ ಒಂದು ಉತ್ಕೃಷ್ಟ ಧಾತು, ಅದುವೇ ಬುದ್ಧಿ! ಇದರ ಲಕ್ಷಣಗಳೇನು? ಮನಸ್ಸು ಹೇಳುತ್ತದೆ "ಓಹ್! ನಾನು ಇದನ್ನು ತೆಗೆದು ಕೊಳ್ಳುತ್ತೇನೆ" ಆದರೆ ಬುದ್ಧಿ ಹೇಳುತ್ತದೆ "ಓ! ಬೇಡ, ಬೇಡ, ನೀನು ಅದನ್ನು ತೆಗೆದುಕೊಳ್ಳಬೇಡ, ಅದರಿಂದ ನಿನಗೆ ಅಪಾಯವಾಗಬಹುದು! ಅದರ ಬದಲಾಗಿ ನೀನು ಇದನ್ನು ತೆಗೆದು ಕೋ! ಇದರಿಂದ ನಿನಗೆ ಉಪಯೋಗವಾಗುತ್ತದೆ" ಆಯ್ಕೆಯ ಈ ವಿಚಾರಶಕ್ತಿ, ಕಾರಣ ಅಥವಾ ಬುದ್ಧಿ ನಮ್ಮೊಳಗಿರುವ ಉತ್ಕೃಷ್ಟ ಮೂಲತತ್ತ್ವವಾಗಿರುತ್ತದೆ.

ಹೀಗೆ ನಾವು ಮೂಲ ಧಾತುಗಳನ್ನು ಪತ್ತೆ ಹಚ್ಚಬೇಕು. ಬಾಹ್ಯ ಪ್ರಪಂಚದಿಂದ ಹೆಚ್ಚು ಪ್ರಮುಖವಾದವು ಇಂದ್ರಿಯಗಳು; ಇಂದ್ರಿಯಗಳಿಗಿಂತ ಹೆಚ್ಚು ಪ್ರಮುಖವಾದುದು ಮನಸ್ಸು; ಮನಸ್ಸಿಗಿಂತ ಮೇಲಮಟ್ಟದಲ್ಲಿರುವ ಬುದ್ಧಿಯು ಮನಸ್ಸಿಗಿಂತ ಹೆಚ್ಚು ಪ್ರಮುಖವಾದದ್ದು, ಮತ್ತು ಇದು ಎಲ್ಲಕ್ಕಿಂತ ಉತ್ಕೃಷ್ಟವಾದದ್ದು ಹಾಗೂ ನಂಬಲರ್ಹವಾಗಿರುವುದು. ಈ ಬುದ್ಧಿಗಿಂತಲೂ ಮೇಲ್ಮಟ್ಟದಲ್ಲಿರುವ ಇನ್ನೊಂದು ವಸ್ತುವಿದೆ, ಅದುವೇ ಆತ್ಮ, ಮತ್ತು ಇದರ ಗುಣಲಕ್ಷಣಗಳು? ಇದು ಬೆಳಕಿನ ಹಾಗೆ.

ವೇದಗಳನ್ನು ರಚಿಸಿದ ಮಹರ್ಷಿ ವೇದವ್ಯಾಸರು ವೇದಗಳಲ್ಲಿ ಈ ಕೆಳಗಿನ ಉದಾಹರಣೆಯ ಮೂಲಕ ಆತ್ಮನ ಗುಣಲಕ್ಷಣಗಳನ್ನು ವಿವರಿಸಿದ್ದಾರೆ. ಬೆಳದಿಂಗಳ ರಾತ್ರಿಯಲ್ಲಿ ಮೋಡಗಳು ಚಂದ್ರನನ್ನು ಆವರಿಸಬಹುದು, ಆದರೆ ಚಂದಿರನ ಬೆಳಕಿನ ಮೂಲಕ ನಮಗೆ ಮೋಡಗಳು ಗೋಚರಿಸುತ್ತವೆ. ಹೀಗೆ ವ್ಯಾಸರು ಆತ್ಮನನ್ನು ಚಂದಿರನಿಗೆ ಹೋಲಿಸಿದ್ದಾರೆ. ಅಥವಾ ಸೂರ್ಯನನ್ನು ಆವರಿಸಿದ ಮೋಡವು ಸೂರ್ಯನ ಬೆಳಕಿನ ಮೂಲಕ ಗೋಚರಿಸುವುದು. ಹಾಗೆಯೇ ಆತ್ಮವೆನ್ನುವುದು ನಮ್ಮೊಳಗಿರುವ ಒಂದು ಬೆಳಕಿನ ಅಂಶವಾಗಿದೆ. ಹಿನ್ನೆಲೆಯಲ್ಲಿ ಆತ್ಮನ ಆಸ್ತಿತ್ತ್ವವಿರುವುದರಿಂದ ನಾವು ನಮ್ಮ ಮಾನಸಿಕ ಸ್ಥಿತಿಯನ್ನು ಅರಿಯಬಹುದು. ಒಂದುವೇಳೆ ಬೆಳಕನ್ನು ಹಿಂತೆಗೆದರೆ, ಎಲ್ಲವೂ

ನಿಶ್ಚೇತನಗೊಳ್ಳುತ್ತದೆ. ಮಾನಸಿಕ ವ್ಯವಸ್ಥೆ, ಬುದ್ಧಿ, ಆಯ್ಕೆಯ ವಿಚಾರಶಕ್ತಿ, ಮತ್ತು ಬಾಹ್ಯ ಪ್ರಪಂಚದ ಬಗ್ಗೆ ಜ್ಞಾನವನ್ನು ಗಳಿಸಲು ಸಹಾಯಕವಾಗುವ ಎಲ್ಲಾ ಮಾರ್ಗಗಳೂ, ಬೆಳಕನ್ನು ಹಿಂತೆಗೆದುಕೊಂಡಾಗ ತಮ್ಮ ಬೆಲೆಯನ್ನು ಕಳೆದುಕೊಳ್ಳುತ್ತವೆ. ಆ ಬೆಳಕೇ ಆತ್ಮ, ಬೆಳಕಿನ ಒಂದು ಕಿರಣ, ಇದು ನಮ್ಮೊಳಗಿರುವ ಇತರ ಎಲ್ಲಾ ಮೂಲಧಾತುಗಳಿಂದ ಅತ್ಯಂತ ಸ್ಪಷ್ಟ ಭಿನ್ನತೆಯನ್ನು ಹೊಂದಿರುತ್ತದೆ. ಇದು ಬೆಳಕಿನ ಪೂರ್ಣತೆಯ ಒಂದು ಅಂಶವಾಗಿರುತ್ತದೆ, ಮತ್ತು ಇಂತಹ ಬೆಳಕಿನ ಅಂಶಗಳಾದ ಆತ್ಮಗಳೇ ತುಂಬಿರುವ ಒಂದು ಲೋಕವಿದೆ, ಮತ್ತು ಅಲ್ಲಿಂದ ಪುನಃ ನಮ್ಮ ನೈಜ ವ್ಯಕ್ತಿತ್ತ್ವದಲ್ಲಿ ಪರಮಾತ್ಮನೆಡೆಗೆ ಪ್ರಗತಿ ಉಂಟಾಗುತ್ತದೆ. ಐಹಿಕ ಪ್ರಪಂಚದಲ್ಲಿ ಹೇಗೆ ಆಕಾಶ, ಗಾಳಿ, ಬೆಂಕಿ, ನೀರು, ಭೂಮಿ ಹಾಗೂ ಶಿಲೆಗಳು ಮುಂತಾದ ವಿಷಯಗಳಲ್ಲಿ ವಿಕಾಸವನ್ನು ಕಾಣುತ್ತೇವೆಯೋ ಹಾಗೆ ಉನ್ನತ ಲೋಕದಲ್ಲಿ ಕೂಡಾ ವ್ಯಕ್ತಿನಿಷ್ಠ ಆತ್ಮ ಪರಮಾತ್ಮನೆಡೆಗೆ ಮುನ್ನಡೆ ಸಾಧಿಸುತ್ತಾನೆ, ಇದು ಅತ್ಯುತ್ಕೃಷ್ಟವಾದ ವ್ಯಕ್ತಿನಿಷ್ಠತೆ.

ಡಾರ್ವಿನ್ನನು ತನ್ನ ವಿಕಾಸವಾದದಲ್ಲಿ ಎಲ್ಲವೂ ಭೌತಿಕ ದ್ರವ್ಯದಿಂದಲೇ ಉತ್ಪತ್ತಿಯಾಗುತ್ತದೆ ಎಂದು ಹೇಳುತ್ತಾನೆ. ಗರ್ಭಕೋಶದೊಳಗೆ ಕೂಡಾ ಭೌತಿಕ ವಸ್ತುವೊಂದು ವಿಕಾಸಗೊಂಡು ಕ್ರಮೇಣ ಜ್ಞಾನವೂ ಬೆಳೆಯುತ್ತದೆ ಎಂದು ವಾದಿಸುತ್ತಾನೆ. ಸಾಮಾನ್ಯ ಅರ್ಥದಲ್ಲಿ ಹೇಳುವುದಾದರೆ ಪಜ್ಞೆಯು ಭೌತಿಕ ಪ್ರಕೃತಿಯ ಉತ್ಪಾದನೆ ಎಂದು ಅವನ ವಾದ. ಆದರೆ ಪ್ರಕಟಿತ ಪರಮ ಸತ್ಯದ ಅನುಯಾಯಿಗಳು ಈ ವಾದವನ್ನು ಒಪ್ಪುವುದಿಲ್ಲ. ಸಕಲಸೃಷ್ಟಿಯು ಪ್ರಜ್ಞೆಯ ಸಾಗರದ ಮೇಲೆ ತೇಲಾಡುತ್ತಿದೆ. ಪ್ರಜ್ಞೆಯು ಸರ್ವಶ್ರೇಷ್ಠವಾದುದು. ಅದೇ ವ್ಯಕ್ತಿನಿಷ್ಠ ವಿಕಾಸ ಎಂದು ನಂಬುತ್ತಾರೆ. ಡಾರ್ವಿನ್ನನ ವಿಕಾಸವಾದವು ವಸ್ತುನಿಷ್ಠ ವಿಕಾಸವನ್ನು ಪ್ರತಿಪಾದಿಸುತ್ತದೆ. ಅದರೆ ಸಕಲವೂ ವ್ಯಕ್ತಿನಿಷ್ಠ ವಿಭಾಗದಡಿಯಲ್ಲಿ ಬರುತ್ತದೆ ಎಂದು ನಮಗೆ ವೈದಿಕ ಗ್ರಂಥಗಳಿಂದ ತಿಳಿದುಬರುತ್ತದೆ. ಬಿಷಪ್ ಬರ್ಕ್ಲೀ ಎಂಬ ಯೂರೋಪಿನ ತತ್ತ ಶಾಸ್ತ್ರಜ್ಞನೊಬ್ಬ ಹೇಳುವ ಹಾಗೆ

“ಮನಸ್ಸು ಜಗತ್ತಿನೊಳಗೆ ಇರುವುದಲ್ಲ ಅದರೆ ಜಗತ್ತು ಮನಸ್ಸಿನೊಳಗಿದೆ” ಸಕಲವೂ ಪ್ರಜ್ಞೆಯ ನೆಲೆಯಲ್ಲಿ ತೇಲಾಡುತ್ತಿದೆ. ಪಜ್ಞೆಯು ಸರ್ವಸೃಷ್ಟಿಯ ಪೂರ್ವಭಾವಿ ಮೂಲವಾಗಿದೆ.

ಪ್ರಾರಂಭದಲ್ಲಿ ಯಾವುದೋ ಅವಶೇಷಮಾತ್ರವಿತ್ತು ಎಂದು ಡಾರ್ವಿನ್ನನ ಪಂಗಡದವರು ಹೇಳುತ್ತಾರೆ. ಆದರೆ ಅವಶೇಷ ಎಂದರೆ ಏನು? ಅವಶೇಷ ಅಂದರೆ ವ್ಯಕ್ತಗೊಂಡ ನಿರ್ದಿಷ್ಟ ವಸ್ತುವಿನ ಒಂದು ಭಾಗ. ಆ ವಸ್ತುವು ಪ್ರಜ್ಞೆಯ ಭಾಗವಾಗಿರುತ್ತದೆ. ಹಾಗಾಗಿ ಪ್ರಜ್ಞೆಯು ಅತ್ಯಂತ ಮೂಲಭೂತ ವಿಷಯ ಎಂದು ನಾವು ಸಾಧಿಸುತ್ತೇವೆ. ಅವರು ಏನಾದರೂ ಹೇಳಲಿ, ಇಂಥಾದ್ದು ಪ್ರಾರಂಭದಲ್ಲಿತ್ತು ಎಂದು ಏನನ್ನಾದರೂ ಹೆಸರಿಸಲಿ, ಅದಕ್ಕೂ ಮುಂಚೆ ಪ್ರಜ್ಞೆ ಅಸ್ತಿತ್ವದಲ್ಲಿ ತ್ತು ಎಂದು ನಾವು ಹೇಳುತ್ತೇವೆ. ಅದ್ದರಿಂದ ಬ್ರಹ್ಮನ್; ಸರ್ವವ್ಯಾಪಿಯಾಗಿರುವ ಪರಾತ್ಪರನ ಅವ್ಯಕ್ತ ಅಂಶವೇ ಎಲ್ಲಾ ಆತ್ಮ ಗಳ ಮೂಲ ಮತ್ತು ಆತ್ಮನಿಂದ ಮೇಲೆ ಪರಮಾತ್ಮನಿದ್ದಾನೆ ಎಂದು ವೇದಗಳೀಂದ ತಿಳಿದುಬರುತ್ತದೆ. ಭೌತಿಕ ಪ್ರಪಂಚಕ್ಕೆ ಸಂಬಂಧಿಸಿದಂತೆ ಆಗುವ ಪ್ರಗತಿ ಅಂಧಕಾರದೆಡೆಗೆ ನಿರ್ದೇಶಿಸುತ್ತದೆ. ಆದರೆ ಭೌತಿಕ ಪ್ರಪಂಚದ ಆಚೆಗೆ ಪ್ರಕಾಶಮಾನವಾದ, ಉಲ್ಲಾಸ ಮತ್ತು ಪರಮಾನಂದದ ಅಸಂಖ್ಯಾತ ಅಲೆಗಳುಳ್ಳ ಸಾಗರವಾದ, ಹಲವು ಆನಂದಭರಿತ ಚಟುವಟಿಕೆಗಳಿಂದ ಕೂಡಿದ ಶಾಶ್ವತ ಜಗತ್ತೊಂದು ಅಸ್ತಿತ್ವದಲ್ಲಿದೆ ಎಂಬುದು ಕೂಡ ವೇದಶಾಸ್ತ್ರಗಳಿಂದ ತಿಳಿದುಬರುತ್ತದೆ.

ಈ ಮೂಲಕ ನಮ್ಮ ಪ್ರಸ್ತುತ ಜೀವನದಲ್ಲಿ ನಮ್ಮ ಕರ್ತವ್ಯ ಏನೆಂಬುದನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ. ಮಾನವ ಜನ್ಮದ ಪ್ರಾಮುಖ್ಯತೆ ಏನು? ಅದನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಇಲ್ಲಿ ಹಲವು ಧಾರ್ಮಿಕ ಅಭಿಪ್ರಾಯಗಳು ಇವೆ. ಆದರೆ

# ದಿವ್ಯ ಸಮನ್ವಯ

ಸತ್ಯದ ಅನ್ವೇಷಕರಾದ ನಾವು, ಒಂದು ಸಾಮರಸ್ಯತೆಯ, ಸಮನ್ವಯತೆಯ ಪರಿಹಾರವನ್ನು ಕಂಡುಕೊಳ್ಳಬೇಕು ಮತ್ತು ಅದಕ್ಕೆ ಪೂರಕವಾದ ಅಧ್ಯಯನಕ್ಕೆ ಪ್ರವೇಶವನ್ನು ಪಡೆಯಬೇಕು.

ವಿವೇಚನಾ ಸಾಮರ್ಥ್ಯ ಮತ್ತು ನಿರ್ಧಾರದ ಅವಕಾಶ ಕೇವಲ ಮಾನವ ಬದುಕಿನಲ್ಲಿ ಮಾತ್ರ ಲಭ್ಯ. ಈ ಸದವಕಾಶವನ್ನು ಕಳೆದುಕೊಂಡು, ಮತ್ತೆ; ಮೃಗ, ಪಕ್ಷಿ, ಗಿಡ, ಮರ, ಬಳ್ಳಿಗಳ ಜೀವನಕ್ಕೆ ಹೋದರೆ, ಮುಂದೆ ಯಾವಾಗ ನಮಗೆ ಸ್ವತಂತ್ರವಾಗಿ ಮತ್ತು ಸ್ವೇಚ್ಛೆಯಿಂದ ನಿರ್ಧಾರ ತೆಗೆದುಕೊಳ್ಳುವ ಅವಕಾಶ ಸಿಗುತ್ತದೆ ಎಂಬುದು ನಮಗ್ಯಾರಿಗೂ ತಿಳಿದಿಲ್ಲ. ಹಾಗಾಗಿ ತಿನ್ನುವುದು, ನಿದ್ರೆಮಾಡುವುದು, ಇಂದ್ರಿಯ ತೃಪ್ತಿಯಲ್ಲಿ ತೊಡಗುವುದು ಹಾಗೂ ಪ್ರತಿಕ್ಷಣವೂ ಆತಂಕದ ಛಾಯೆಯಡಿಯಲ್ಲಿ ಪಾಶವೀ ಪ್ರವೃತ್ತಿಯನ್ನು ನಮ್ಮದಾಗಿಸಿಕೊಂಡು, ಈ ಅಮೂಲ್ಯವಾದ ಮಾನವ ಬದುಕನ್ನು ನಾವು ದುರುಪಯೋಗಪಡಿಸಿಕೊಳ್ಳ ಬಾರದು. ಏಕೆಂದರೆ, ಇವೆಲ್ಲವೂ ಪ್ರತಿಬದುಕಿನಲ್ಲೂ ಸಾಮಾನ್ಯವಾಗಿರುತ್ತವೆ. ನಾವು ಒಂದು ಪಕ್ಷ ಮೃಗ,ಪಕ್ಷಿ,ಹುಳ ಅಥವಾ ಕ್ರಿಮಿಕೀಟಗಳಾಗಿ ಹುಟ್ಟಿದರೂ ಈ ಎಲ್ಲ ವಿಷಯಗಳು ಆ ಬದುಕಿನಲ್ಲಿ ಲಭ್ಯವಿರುತ್ತವೆ. ಆದರೆ ನಮ್ಮ ಮೂಲಭೂತ ಕರ್ತವ್ಯದ ಸಂಸ್ಕೃತಿಯನ್ನು ಅಭಿವೃದ್ಧಿಗೊಳಿಸುವ ಅವಕಾಶ ಕೇವಲ ಮಾನವ ಬದುಕಿಗೆ ಮಾತ್ರ ಲಭ್ಯವಿರುತ್ತದೆ. ಶುದ್ಧ ಭಕ್ತರ ಸಾಂಗತ್ಯದಲ್ಲಿ ನಮ್ಮ ಆಧ್ಯಾತ್ಮಿಕ ಏಳಿಗೆಗೆ ಸಹಕಾರಿಯಾಗುವ ಎಲ್ಲಾ ವಿಧಾನಗಳನ್ನು ನಾವು ತಿಳಿದುಕೊಳ್ಳಬಹುದು. ಈ ಮೂಲಕ ನಮ್ಮ ಬದುಕಿನಲ್ಲಿ ನಾವು ಮುನ್ನಡೆಯನ್ನು ಸಾಧಿಸಿ ನಮ್ಮನ್ನು ನಾವು ಕಾಪಾಡಿಕೊಳ್ಳಬಹುದು.

ಆದರೆ ಈಗ ಮಾನವಜನ್ಮವನ್ನು ಸ್ವೀಕರಿಸಿದ್ದು, ಒಂದುವೇಳೆ ಇದರ ಸದುಪಯೋಗವನ್ನು ನಾವು ಮಾಡದೇ ಈ ಅಮೂಲ್ಯ ಅವಕಾಶವನ್ನು ಕಳೆದುಕೊಂಡೆವೆಂದಾದರೆ, ನಾವು ಆತ್ಮಹತ್ಯೆ ಮಾಡಿಕೊಂಡಂತೆ, ಅಥವಾ ಅದಕ್ಕೂ ಹೆಚ್ಚಿನ ಪಾಪವನ್ನು ಮಾಡಿದಂತೆ. ಮಾನವ ಜನ್ಮದ ಅವಕಾಶವನ್ನು

ಸ್ವೀಕರಿಸಿದ್ದೊ ಯಾರು ತನ್ನ ಸರ್ವತೋಮುಖ ಅಭಿವೃದ್ಧಿಗೋಸ್ಕರ ತನಗೆ ತಾನು ಸಹಾಯಮಾಡಿಕೊಳ್ಳಲು ಯತ್ನಿಸುವುದಿಲ್ಲವೋ, ಅವರು ಆತ್ಮ ಘಾತುಕರು.

ಆಧ್ಯಾತ್ಮಿಕ ಜಗತ್ತಿನೆಡೆಗೆ ನಮ್ಮ ಜೀವನವನ್ನು ಮುಂದುವರೆಸಿದರೆ ಮಾತ್ರ ನಾವು ಭಯರಹಿತರಾಗುವ ಭರವಸೆಯನ್ನು ಹೊಂದಬಹುದು. ಪ್ರಸ್ತುತ ನಾವು ವಿವಿಧ ರೀತಿಯ ಭಯಗಳಿಂದ ಪೀಡಿತರಾಗಿದ್ದೇವೆ. ಈ ಭಯಕ್ಕೆ ನಮ್ಮಲ್ಲಿರುವ ಸಮನ್ವಯತೆಯ ಕೊರತೆಯೇ ಕಾರಣ, ನಮ್ಮ ಪ್ರತ್ಯೇಕ ಆಸಕ್ತಿಯಿಂದಾಗಿ ಈ ಕೊರತೆ ಉಂಟಾಗಿದೆ. ನಾವು ನಮ್ಮ ಚೇತನವನ್ನು ಕೇಂದ್ರದೆಡೆಗೆ ನಿರ್ದೇಶಿಸಬೇಕು. ಆಗ ಎಲ್ಲವೂ ಸಮನ್ವಯವಾಗುತ್ತದೆ. ಸಮನ್ವಯತೆ ಎಂದರೆ ಅನೇಕತೆಯಲ್ಲಿ ಏಕತೆಯನ್ನು ಕಾಣುವುದು. ಸಂಗೀತ ಕಛೇರಿಯ ವಿವಿಧಸದಸ್ಯರು ತಮಗಿಷ್ಟಬಂದಂತೆ ತಮ್ಮದೇ ಆದ ಪ್ರತ್ಯೇಕ ಶ್ರುತಿಯಲ್ಲಿ ವಾದ್ಯಗಳನ್ನು ನುಡಿಸಿದರೆ ಅಪಶ್ರುತಿಯುಂಟಾಗಿ ಗೊಂದಲವೇರ್ಪಡುತ್ತದೆ. ಆದರೆ ಎಲ್ಲರೂ ತಮ್ಮ ಗಮನವನ್ನು ನಿರ್ದೇಶಕನೆಡೆಗೆ ಕೇಂದ್ರೀಕರಿಸಿ, ಅವನ ನಿರ್ದೇಶನದಂತೆ ತಮ್ಮ ತಮ್ಮ ವಾದ್ಯಗಳನ್ನು ನುಡಿಸಿದಾಗ ಸುಶ್ರಾವ್ಯವಾದ, ವೈವಿಧ್ಯಮಯ ಸಂಗೀತದ ಸಮನ್ವಯತೆಯು ಉಂಟಾಗುತ್ತದೆ. ದಿವ್ಯ ಸಮನ್ವಯತೆ ಎಂದರೆ ನಮ್ಮ ವೈಯಕ್ತಿಕ ಭೌತಿಕ ಆಸಕ್ತಿಯನ್ನು, ಪರಾತ್ಪರನ ಆಸಕ್ತಿಗೋಸ್ಕರ ತ್ಯಜಿಸುವುದು. ಇದೇ ನಮ್ಮ ಹೆಬ್ಬಯಕೆಯಾಗಬೇಕು.ಈ ಪ್ರಯತ್ನದಲ್ಲಿ ನಾವು ಪ್ರಾಮಾಣಿಕರಾಗಿದ್ದರೆ ನಿಶ್ಚಯವಾಗಿ ಒಂದುದಿನ ನಾವು ನಮ್ಮ ಗುರಿಯನ್ನು ತಲುಪುತ್ತೇವೆ. ತನ್ನ ಭವಿಷ್ಯಕ್ಕೆ ಮಾನವ ಸ್ವತಃ ತಾನೇ ವಾಸ್ತುಶಿಲ್ಪಿ.

## ಭಾಗ ೫

# ಸೌಂದರ್ಯದ ನಾಡು

ಎಲ್ಲಿ ಪ್ರತಿಯೊಂದು ಶಬ್ದವೂ ಸಂಗೀತವೋ...ಎಲ್ಲಿ ಪ್ರತಿಯೊಂದು ನಡೆಯೂ ನಾಟ್ಯವೋ...ಮತ್ತು ಕೊಳಲು ಅಚ್ಚುಮೆಚ್ಚಿನ ಸಂಗಾತಿಯೋ...

ಪ್ರತಿ ಶಬ್ದವೂ ಸಂಗೀತ...ಆದರೆ ಈ ಶಬ್ದ ಈ ನಶ್ವರ ಪ್ರಪಂಚಕ್ಕೆ ಸಂಬಂಧಪಟ್ಟ ಶಬ್ದವಲ್ಲ! ಅತಿ ಮೃದು, ಅತಿ ಮಧುರ, ಹಾಗೂ ಅತ್ಯಂತ ಮನಸೂರೆಗೊಳ್ಳುವ ಮತ್ತೊಂದು ಜಗತ್ತಿನದ್ದು. ಎಲ್ಲಿ ಸನ್ನಡತೆಯು ಮಾಧುರ್ಯ ಮತ್ತು ಸಮನ್ವಯತೆಯಿಂದ ಕೂಡಿದೆಯೋ, ಆ ಜಗತ್ತಿನದ್ದು. ಅಲ್ಲಿ ಪ್ರತಿ ಶಬ್ದವೂ ಸಂಗೀತದಂತೆ, ಪ್ರತಿಯೊಂದು ನಡೆಯೂ ಮಧುರ ನಾಟ್ಯದಂತೆ. ಆ ದಿವ್ಯ ನೆಲೆಯನ್ನು ಈ ರೀತಿ ವರ್ಣಿಸಲಾಗಿದೆ. ಅಲ್ಲಿ ಸೌಂದರ್ಯವು ತನ್ನ ಅತ್ಯುಚ್ಚ ಶ್ರೇಣಿಯಲ್ಲಿ ಪರಿಪೂರ್ಣವಾಗಿದೆ. ಇದೇ ಸೌಂದರ್ಯದ ನಾಡು, ಇಲ್ಲಿ ಎಲ್ಲವೂ ಅತಿ ಸುಂದರ. ಎಲ್ಲವೂ ದಿವ್ಯ ಸೌಂದರ್ಯವನ್ನು ಸೂಚಿಸುತ್ತದೆ. ಸರ್ವ ಕಾರಣಕ್ಕೆ ಕಾರಣವಾಗಿರುವ ಆ ಮಹತ್ತಮತೆಯು ಅತ್ಯಾಕರ್ಷಕವಾಗಿರುವುದು, ಮನಸೂರೆಗೊಳ್ಳುವಂತಿರುವುದು ಮತ್ತು ಅತ್ಯಂತ ಮನೋಹರವಾದುದು.

ಹೌದು! ಇಂತಹ ಬದುಕಿನ ಒಂದು ಜಗತ್ತು ಅಸ್ತಿತ್ವದಲ್ಲಿದೆ. ಮಾಧುರ್ಯದ ಪರಾತ್ಪರ ಮೂರ್ತಿ ಅಲ್ಲಿದ್ದಾನೆ. ಪವಿತ್ರ ಪ್ರೇಮದ ಒಡೆಯ ಅಲ್ಲಿದ್ದಾನೆ. ಅಲ್ಲಿ ಎಲ್ಲವೂ ಅವನ ಸಂತೃಪ್ತಿಗೋಸ್ಕರ, ಅವನ ಆನಂದಕ್ಕೋಸ್ಕರ, ಆದರೆ ಯಾವರೀತಿಯಲ್ಲಿ ನಾವು ಆ ದಿವ್ಯ ಬದುಕನ್ನು ಪಡೆಯಬಹುದು? ನಾವು ಭೌತಿಕ ಬದುಕಿನ ಮತ್ತು ಅಧ್ಯಾತ್ಮಿಕ ಬದುಕಿನ ನಡುವೆ ಇರುವ ಅಂತರವನ್ನು,

ಭಿನ್ನತೆಯನ್ನು ಅರಿತುಕೊಳ್ಳಬೇಕು.ದಿವ್ಯ ಧಾಮದ ಬದುಕನ್ನು ಸ್ವೀಕರಿಸಲು ನಾವು ಇವುಗಳನ್ನು ಪರೀಕ್ಷಿಸಬೇಕು.

ಭಗವಂತ ನಮ್ಮ ಬೇಡಿಕೆಗಳನ್ನು ಈಡೇರಿಸುವ ಆಜ್ಞಾನುವರ್ತಿಯಲ್ಲ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ನಾವು ಅಸ್ವಸ್ಥರಾದಾಗ "ಓ ದೇವರೇ! ನನ್ನ ಕಾಯಿಲೆಯನ್ನು ಗುಣಪಡಿಸು!" ಬಡತನದಲ್ಲಿರುವಾಗ "ಓ ದೇವರೇ! ನನ್ನ ಬಡತನವನ್ನು ನಿವಾರಿಸು!" ಎಂಬಂತಹ ಬೇಡಿಕೆಗಳಿಗೆ ಮಾತ್ರ ನಮ್ಮ ಮತ್ತು ಭಗವಂತನ ನಡುವಿನ ಸಂಬಂಧ ಸೀಮಿತವಾಗಿರಬಾರದು. ಭಗವಂತನೊಡನೆ ಈ ರೀತಿಯ ವ್ಯಾವಹಾರಿಕ ಸಂಬಂಧ ಬದುಕಿನಲ್ಲಿ ಸಂತಸವನ್ನು ತರುವುದಿಲ್ಲ. ಅದಾಗ್ಯೂ ವಿವಿಧರೀತಿಯ ಅದ್ಭುತಗಳನ್ನು ತೋರುವ ಒಂದು ಅಲೌಕಿಕ ಶಕ್ತಿಯಬಗ್ಗೆ ನಂಬಿಕೆಯಿರುವುದರಿಂದ, ಕೊನೆಪಕ್ಷ ಇದಕ್ಕೆ ಒಂದು ಸಕಾರಾತ್ಮಕ ಅರ್ಥವಿದೆ ಎಂದುಕೊಳ್ಳಬಹುದು. ಹೇಗಿದ್ದರೂ ಯಾವುದೆ ತರಹದ ಭೌತಿಕ ಬೇಡಿಕೆಗಳನ್ನು ಹೊಂದದೇ ಭಗವಂತನನ್ನು ಇಚ್ಛಿಸುವುದು ಉತ್ತಮ. ಸಕಲ ಸೃಷ್ಟಿಗೆ ಕಾರಣನಾದ ಭಗವಂತನನ್ನು ನಾವು ಇಚ್ಛಿಸಬೇಕು, ಮತ್ತು ನಾವು ಯಾವುದನ್ನು ಅಮೂಲ್ಯವಾದದ್ದು ಎಂದು ತಿಳಿದುಕೊಂಡಿದ್ದೇವೆಯೋ, ಅದು ನಮ್ಮ ಬಯಕೆಯಾಗಿರಬಾರದು. ಓ ದೇವರೇ! ನನಗೆ ಯಾವುದು ಒಳ್ಳೆಯದೋ ಅದನ್ನು ದಯಪಾಲಿಸು! ನಾನೊಬ್ಬ ಅಪರಿಪೂರ್ಣ ಜೀವಿ, ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎಂಬ ವಿವೇಚನೆ ನನಗಿಲ್ಲ, ಆದುದರಿಂದ ನನಗೆ ಯಾವುದು ಹಿತಕರ ಎಂದು ನೀನು ಪರಿಗಣಿಸುತ್ತೀಯೋ ಅದನ್ನೇ ದಯಪಾಲಿಸು!" ಈ ರೀತಿಯಲ್ಲಿ ನಾವು ಅವನಿಗೆ ಅವಲಂಬಿಗಳಾಗಿರಬೆಕು. ಈ ರೀತಿಯ ಪ್ರಾರ್ಥನೆ , ಭೌತಿಕ ಆಕಾಂಕ್ಷೆಗಳ ಈಡೇರಿಕೆಗೋಸ್ಕರ ನಾವು ಮಾಡುವ ಪ್ರಾರ್ಥನೆಗಳಿಗಿಂತ ಉತ್ತಮವಾದುದು.

ಆದರೆ, ಸರ್ವ ಶ್ರೇಷ್ಠನಾದ ಭಗವಂತನ ಶುದ್ಧ ಸೇವೆಯನ್ನು ಸ್ವೀಕರಿಸುವ ನಂಬುಗೆಯೇ ಅತ್ಯುತ್ತಮವಾದದ್ದು. "ಓ ಭಗವಂತಾ! ನನಗೆ ನೀನು ಬೇಕು!

ನೀನೇ ನನ್ನ ಒಡೆಯ! ನಿನ್ನನ್ನಲ್ಲದೇ ಇನ್ನೇನೂ ನನಗೆ ಬೇಡ!'' ಅವನ ನಿತ್ಯ ಸೇವೆಯೇ ನಮಗೂ ಆವನಿಗೂ ನಿರಂತರ ಸಂಪರ್ಕವಾಗಬೇಕು! ಅದೇ ನಮ್ಮ ಶಾಶ್ವತ ಸಂಬಂಧವಾಗಬೇಕು! ``ನನಗೆ ನಿನ್ನ ಸೇವೆಮಾಡುವ ದಿವ್ಯ ಅವಕಾಶ ಮಾತ್ರ ಬೇಕು''

ಪ್ರಾರಂಭದಲ್ಲಿ ನಾವು ಏನನ್ನೋ ಕಳೆದು ಕೊಳ್ಳುತ್ತಿದ್ದೇವೆ ಅನ್ನಿಸಬಹುದು, ಆದರೆ ಅಂತಿಮವಾಗಿ ನಾವು ಬಹಳಷ್ಟು ಗಳಿಸುತ್ತೇವೆ, ತೋರಿಕೆಗೆ ನಮ್ಮನ್ನು ನಾವು ಅವನಿಗೆ ಸಮರ್ಪಿಸಿಕೊಳ್ಳುತ್ತೇವೆ, ನಮ್ಮ ಎಲ್ಲಾ ಸ್ವಂತ ಆಸಕ್ತಿಗಳನ್ನು ಅವನಿಗಾಗಿ ತ್ಯಜಿಸುತ್ತೇವೆ, ಆದರೆ ನಮ್ಮ ಸೂಕ್ಷ್ಮ ಜ್ಞಾನದಿಂದ ಅವಲೋಕಿಸಿದರೆ ನಾವು ಬಹಳಷ್ಟು ಅಮುಲ್ಯವಾದದ್ದನ್ನು ಗಳಿಸಿಕೊಂಡಿದ್ದನ್ನು ಮನಗಾಣುತ್ತೇವೆ. ಈ ತಾತ್ತ್ವಿಕ ವಿಚಾರವನ್ನು ನಾವು ಮನ್ನಿಸಿ ಗೌರವಿಸಬೇಕು. ಇದು ಯಾವುದೇ ಅಪಸಿದ್ಧಾಂತ ಅಥವ ಅಂಧ ಶ್ರದ್ಧೆಯಲ್ಲ! ಇದೊಂದು ಪೂರ್ವಾಗ್ರಹ ರಹಿತ, ಅತ್ಯುನ್ನತ ತರ್ಕವನ್ನು, ವಿವೇಚನೆಯನ್ನು ಆಧರಿಸಿದೆ.

ಅಂತಹ ಬದುಕು ನಮ್ಮ ಆಶಯವಾಗಿರಬೇಕು, ಹೆಬ್ಬಯಕೆಯಾಗಬೇಕು. ಒಂದು ಸುಮಧುರ ಸಂಗಿತಮಯ ಲಕ್ಷಣಗಳನ್ನು ಹೊಂದಿರುವ ಜಗತ್ತಿನ ಬದುಕಿಗೆ ಆಕರ್ಷಿತರಾಗುವ ಭಾವನೆಯನ್ನು ಪ್ರಚೋದಿಸುವ ಕಲ್ಪನೆಯನ್ನು ನಾವು ಪ್ರೋತ್ಸಾಹಿಸಬೇಕು. ಇದು ವೃಂದಾವನ ಧಾಮ. ತನ್ನ ಎಲ್ಲಾ ಶರಣಾಗತ ಭಕ್ತರೊಡಗೂಡಿ ಸುಮಧುರ ಪ್ರೇಮಕ್ರೀಡೆಯಲ್ಲಿ ಭಗವಂತನು ತನ್ನ ನಿತ್ಯ ಲೀಲೆಯಲ್ಲಿ ನಿರತನಾಗಿರುವ ಪವಿತ್ರಧಾಮ. ವೃಂದಾವನವು ಅತ್ಯಂತ ಸ್ನೇಹಭಾವದ್ದಾಗಿದ್ದು, ಅತ್ಯಂತ ಮಾಧುರ್ಯದಿಂದೊಡಗೂಡಿದ್ದು ನಮಗೆ ಅತ್ಯಂತ ನಿಕಟವಾಗಿದೆ, ಮತ್ತು ನಮ್ಮ ಪರಮ ಹಿತೈಷಿಯಾಗಿರುತ್ತದೆ. ಅಲ್ಲಿ ನಾವು ಸಂಪೂರ್ಣವಾಗಿ ನಮ್ಮ ಸ್ವಗೃಹದ ಅನುಭವವನ್ನು ಹೊಂದಬಹುದು. ಆಂತರ್ಯದಿಂದ ನಾವು ಸ್ವಾಭಾವಿಕವಾಗಿ ಆ ಜಗತ್ತಿನ ಸದಸ್ಯರಾಗಿರುತ್ತೇವೆ.

ಈಗ ಈ ಬಾಹ್ಯ ಪ್ರಪಂಚದಲ್ಲಿದ್ದು ಇಲ್ಲಿಯ ಮೇಲ್ಮೈಯಲ್ಲಿ ನಮ್ಮ ಪ್ರಜ್ಞೆಯನ್ನು ಅಡ್ಡಾದಿಡ್ಡಿಯಾಗಿ ಹರಿಯಬಿಟ್ಟೀರುತ್ತೇವೆ, ಇಲ್ಲಿ ನಮ್ಮ ಪ್ರಜ್ಞೆಯನ್ನು ಮುಚ್ಚಿಕೊಂಡಿರುವ ಎಷ್ಟೋ ಪದರಗಳಿವೆ ಮತ್ತು ಅವೆಲ್ಲವೂ ಸಾರವಿಲ್ಲದ ಒಣವಸ್ತುಗಳು. ನಿಜವಾದ ಮಹತ್ಸಾರ, ದಿವ್ಯ ಚೇತನ, ಅಂತರ್ಯದಲ್ಲಿ ಹುದುಗಿದೆ. ನಮ್ಮ ದೈಹಿಕ, ಮಾನಸಿಕ ಹಾಗೂ ಅಹಂಕಾರದ ಪದರಗಳನ್ನು ನಿವಾರಿಸಿಕೊಂಡಾಗ ವೃಂದಾವನದ ಪ್ರೇಮಧಾಮಕ್ಕೆ ಪ್ರವೇಶವನ್ನು ಪಡೆಯಬಹುದು. ವೃಂದಾವನವು ನಮ್ಮೊಳಗೆಯೆ ಇದೆ. ಅಲ್ಲಿ ಎಲ್ಲೆಡೆಯೂ ನಾವು ನಮ್ಮ ಸ್ನೇಹಿತರನ್ನು, ನೈಜ ಹಿತೈಷಿಗಳನ್ನು ಕಾಣಬಹುದು.ಮತ್ತು ಅವರೆಲ್ಲರೂ ನಮಗೆ ಸಾಂತ್ವನವನ್ನು ನೀಡುತ್ತಾರೆ, ಮತ್ತು ಮಹದಾನಂದವನ್ನು ನೀಡುತ್ತಾರೆ.

ಶ್ರೀ ಚೈತನ್ಯರು ನಮಗಾಗಿ ಈ ಮಾಹಿತಿಯನ್ನು ಹೊತ್ತು ತಂದರು. "ಓಹ್, ನೀವು ಆ ಉನ್ನತನೆಲೆಯ ಮಣ್ಣಿನ ಮಕ್ಕಳು, ಓ ನನ್ನ ಮಕ್ಕಳೇ! ಇಲ್ಲಿ ಏತಕ್ಕೆ ನೀವು ಸಂಕಟಪಡುತ್ತಿರುವಿರಿ! ನೀವು ಆ ದಿವ್ಯನೆಲೆಯ ಮಣ್ಣಿನ ಮಕ್ಕಳು, ಈ ಮರುಭೂಮಿಗೆ ಬಂದು ಎಷ್ಟು ಕಷ್ಟ ಪಡುತ್ತಿದ್ದೀರಿ! ನಿಮ್ಮ ನಿಜವಾದ ಮನೆ ಎಷ್ಟೊಂದು ಸಮೃದ್ಧವಾಗಿದೆ. ಎಷ್ಟು ಮಧುರವಾಗಿದೆ! ಆದರೆ ನೀವು ಹೊರಗೆ ಈ ಮರುಭೂಮಿಯಲ್ಲಿ ಅಡ್ಡಾಡುತ್ತೀದ್ದೀರಿ! ಏಕೆ ಹೀಗೆ? ಬನ್ನಿ! ಈ ಆತ್ಮ ಘಾತುಕವಾದ ವಿಷಪೂರಿತ ಆಕರ್ಷಣೆಯಿಂದ ಹೊರಬನ್ನಿ! ಈ ಮಾಯೆಯ ಭ್ರಾಮಕ ಆಕರ್ಷಣೆ , ತಪ್ಪು ಕಲ್ಪನೆ, ಇವೆಲ್ಲವೂ ಆತ್ಮಘಾತಿಯನ್ನುಂಟುಮಾಡುವವು. ಈ ತೋರಿಕೆಯ ಆಕರ್ಷಣೆಯನ್ನು ಬಿಟ್ಟುಬಿಡಿ, ಇದು ವಿಷಪೂರಿತವಾದದ್ದು! ಈ ಮಾಯೆಯು ಒಂದು ಪಿಶಾಚಿಯಂತೆ, ಕೃತ್ರಿಮ ಆಕರ್ಷಣೆಯನ್ನು ತೋರಿಸಿ ನಿಮ್ಮನ್ನು ಮಂತ್ರಮುಗ್ಧರನ್ನಾಗಿಸಿದೆ. ನನ್ನೊಡನೆ ಬನ್ನಿ, ನಾನು ನಿಮ್ಮನ್ನು ಸುಂದರವಾದ, ಮನೋಹರವಾದ ನಿಮ್ಮ ಸ್ವಗೃಹಕ್ಕ ಕರೆದೊಯ್ಯುತ್ತೇನೆ"

## ದಿವ್ಯ ಸಮನ್ವಯ

ಶ್ರೀ ಮದ್ಭಾಗವತ ಪುರಾಣವು ಹೇಳುತ್ತದೆ, ಇದು ನಮ್ಮ ಜೀವನದ ಮಾರ್ಗವಾಗಬೇಕು, ಇದೇ ನಮ್ಮ ಪ್ರೇಮಪೂರ್ವಕ ಧ್ಯೇಯವಾಗಬೇಕು! ಮಧುರ ಪರಿಸರದ ನಮ್ಮ ಮನೆ, ಆ ದಿವ್ಯಧಾಮ! ನಾವು ಆ ಮಣ್ಣಿನ ಮಕ್ಕಳು! ಒಂದೇ ಮಾತಿನಲ್ಲಿ ಹೇಳುವುದಾದರೆ, ಅದೇ ನಮ್ಮ ಬದುಕಿನ ಉದ್ದೇಶ! ಪ್ರಮುಖ ಧ್ಯೇಯ! ಏಕೆಂದರೆ ಅದು ನಮ್ಮ ಮನೆ ! "ಮನೆ" ಎಂಬ ಒಂದು ಶಬ್ದವೇ ಸಾಕು ನಮ್ಮನ್ನು ಆ ನೆಲೆಗೆ ಆಕರ್ಷಿಸಲು. ನಾವು ಇಲ್ಲಿ ಪರಕೀಯ ನೆಲದಲ್ಲಿ ಅಡ್ಡಾಡುತ್ತಿದ್ದೇವೆ. ನಮ್ಮ ಮನೆ ಅಲ್ಲಿದೆ, ಅಲ್ಲಿ ನಮಗೆ ಎಲ್ಲ ತರಹದ ಸೌಲಭ್ಯಯಗಳೂ ಇವೆ. ಅದನ್ನು ನಾವು ಅಲ್ಲಗಳೆಯಲು ಸಾಧವಿಲ್ಲ. ಆದ್ದರಿಂದ ಭಗವಂತನೆಡೆಗೆ ! ಮರಳಿ ಮನೆಗೆ ! ಮರಳಿ ಭಗವಂತನೆಡೆಗೆ !

ಒಬ್ಬ ಮನುಷ್ಯನ ಯೋಗ್ಯತೆಯನ್ನು ನಾವು ಅವನ ಆದರ್ಶಗಳ ಆಧಾರದ ಮೇಲೆ ತೀರ್ಮಾನಿಸಬೇಕು. ಅವನು ಸಾಧಿಸಬೇಕೆಂದಿರುವ ಧ್ಯೇಯ ಹಾಗೂ ಅದರ್ಶಗಳ ಹಿರಿಮೆಯೆನ್ನು ಪರಿಗಣಿಸಿ ಆದರಿಸಬೇಕು. ಭವಿಷ್ಯದ ವ್ಯಕ್ತಿ, ನಾಳಿನ ವ್ಯಕ್ತಿ, ತನ್ನ ಆದರ್ಶಗಳ ಆಧಾರದ ಮೇಲೆ ಆದರಿಸಲ್ಪಡಬೇಕು. ಒಬ್ಬನ ಆದರ್ಶಗಳು ಉಚ್ಚ ಮಟ್ಟದ್ದಾದರೆ, ಅವನು ಶ್ರೇಷ್ಠವ್ಯಕ್ತಿ, ಏಕೆಂದರೆ ಅವನು ಪ್ರಾಮಾಣಿಕ, ನಾಳೆ ಅಥವಾ ಅತಿ ಶೀಘ್ರದಲ್ಲೇ ಅವನು ತನ್ನ ಗುರಿಯನ್ನು ತಲುಪುತ್ತಾನೆ. ಆದುದರಿಂದ ನಮ್ಮ ಧ್ಯೇಯ , ಆದರ್ಶಗಳೇ ಎಲ್ಲಕ್ಕಿಂತಲೂ ಪ್ರಮುಖ ವಿಷಯಗಳು. ನಮ್ಮ ಧ್ಯೇಯದ ಈಡೇರಿಕೆ ಸುಲಭವಾದುದಾಗಿರಲಿಕ್ಕಿಲ್ಲ. ಅದು ಸಂತೆಯಲ್ಲಿ ಮಾರಲ್ಪಡುವ ಕೆಳಮಟ್ಟದ ಕಮ್ಮಿಬೆಲೆಯ ಸಾಮಾನ್ಯ ವಸ್ತುವಲ್ಲ. ಅದು ತುಂಬಾ ಅಮೂಲ್ಯವಾದುದು ಮತ್ತು ವಿರಳವಾದುದು. ಆದರೆ ಅದಕ್ಕೆ ಎಷ್ಟೇ ಬೆಲೆಯನ್ನು ತೆರಬೇಕಾಗಿ ಬರಲಿ ನಾವು ಅದನ್ನು ಹೊಂದಲು ಮುಂದಾಗಬೇಕು.

"ನಾನು ಬಯಸಿದ ಆ ಅತ್ಯುತ್ತಮ ಧ್ಯೇಯಕ್ಕಿಂತ ಕಡಿಮೆಯಾಗಿರುವುದೇನನ್ನೂ ನಾನು ಸ್ವೀಕರಿಸಲಾರೆ, ಆಸಕಲ ಸದ್ಗುಣಗಳ ನಿರಂಕುಶ ಪ್ರಭು, ಎಲ್ಲಕ್ಕೂ

ಮಿಗಿಲಾಗಿರುವ ಪರಮ ಪ್ರಭು ನನಗೆ ಬೇಕು. ಅವನಲ್ಲದೇ ನನಗೆ ಬೇರೇನೂ ಬೇಡ, ನನ್ನ ಬದುಕು, ನನ್ನ ನಡೆ ನುಡಿ, ನನ್ನ ಪ್ರತಿಯೊಂದು ಚಟುವಟಿಕೆಯ ಉದ್ದೇಶ ಒಂದೇ, ನನ್ನ ಬದುಕಿನ ಪ್ರತಿಕ್ಷಣವನ್ನೂ ನಾನು ಈ ಉದ್ದೇಶದೊಂದಿಗೇ ಕಳೆಯುತ್ತೇನೆ, ಅದೇ ನನ್ನ ಜೀವನದ ಪರಮ ಧ್ಯೇಯ, ನನಗೆ ವ್ಯರ್ಥಮಾಡಲು ಅಥವಾ ಅನುಮಾನಪಡಲು ಸಮಯವಿಲ್ಲ, ಈ ಧ್ಯೇಯವನ್ನು ನನ್ನ ಅಂತರಂಗದಲ್ಲಿರಿಸಿಕೊಂಡು ನಾನು ನನ್ನ ಪ್ರತಿಯೊಂದು ಚಟುವಟಿಕೆಯನ್ನು ನಿರ್ವಹಿಸುತ್ತಿದ್ದರೆ ನನ್ನ ಧ್ಯೇಯದೆಡೆಗೆ ಸತತ ಪ್ರಗತಿಯನ್ನು ಸಾಧಿಸುತ್ತಿರುತ್ತೇನೆ. ಸದಾ ನನ್ನ ಧ್ಯೇಯದ ಸಂಪರ್ಕದಲ್ಲಿ ನಾನಿದ್ದರೆ, ಆ ಧ್ಯೇಯವೇ ನನಗೆ ಮಾರ್ಗದರ್ಶನವನ್ನು ಮತ್ತು ಉತ್ತೇಜನವನ್ನು ನೀಡುತ್ತದೆ. ಒಟ್ಟಾರೆ, ನಾನು ಏನೇ ಮಾಡಲಿ, ಅಥವಾ ಮಾಡದಿರಲಿ, ಅದು ನನ್ನ ಧ್ಯೇಯದ ಈಡೇರಿಕೆಗೋಸ್ಕರವಾಗಿರುತ್ತದೆ. ಅದು ನನ್ನ ತಲೆಯಮೇಲೆಯೇ ಇರುತ್ತದೆ ಮತ್ತು ಕ್ರಮೇಣ ನನ್ನನ್ನು ಈ ಪ್ರಾಪಂಚಿಕ ಬದುಕಿನ ಪ್ರಲೋಭನೆಗಳಿಂದ ಹೊರಕ್ಕೆ ತರುತ್ತದೆ, ಮತ್ತು ಒಂದು ದಿನ ನನ್ನ ಉದ್ದೇಶ ಈಡೇರುತ್ತದೆ, ನನ್ನ ಗುರಿಯನ್ನು ನಾನು ತಲುಪುತ್ತೇನೆ'' ಈ ಭಾವವು ನಮ್ಮ ಆಂತರ್ಯದಲ್ಲಿ ಸದಾ ಜಾಗೃತವಾಗಿರಬೇಕು.

ಭಗವಂತನೆಡೆಗೆ ಮರಳಿದರೆ ಅಲ್ಲಿ ನಮ್ಮ ಶಾಶ್ವತ ನಿವಾಸವಿದೆ. ಇಲ್ಲಿ ನಾವು ಯಾವುದೇ ಶಾಶ್ವತ ನಿವಾಸವಿಲ್ಲದೇ ಬದುಕಿನಲ್ಲಿ ಯಾವುದೇ ಉನ್ನತ ಧ್ಯೇಯಗಳನ್ನು ಇಟ್ಟುಕೊಳ್ಳದೇ, ಅಲ್ಲಿಂದಿಲ್ಲಿ, ಇಲ್ಲಿಂದಲ್ಲಿ ಓಡಾಡುತ್ತಿದ್ದೇವೆ, ಹಾಗಾಗಿ ಇಲ್ಲಿ ನಮ್ಮ ಸ್ಥಿತಿ ಚಿಂತಾಜನಕವಾಗಿದೆ ಮತ್ತು ಇದು ಕಷ್ಟಕರವಾದ ಬದುಕು, ಇಲ್ಲಿ ನಾವು ಯಾರನ್ನೂ ಸಂಪೂರ್ಣವಾಗಿ ನಂಬಲು ಸಾಧ್ಯವಿಲ್ಲ ಅಂದರೆ ಇಲ್ಲಿ ಒಬ್ಬ ಉತ್ತಮ ಸ್ನೇಹಿತನನ್ನು ಕಂಡು ಕೊಳ್ಳುವುದೂ ಕಷ್ಟ, ನಾವು ಇಲ್ಲಿ ಪರಕೀಯರೊಂದಿಗೆ ಅಥವಾ ಪ್ರಾಯಶಃ ವೈರಿಗಳ ಮಧ್ಯೆ ಓಡಾಡುತ್ತಿದ್ದೇವೆ. ಆದರೆ, ಅವಶ್ಯವಾಗಿ ನಾವು ಒಬ್ಬ ಸ್ನೇಹಿತನನ್ನು ಹೊಂದಬೇಕು, ಸಂಪೂರ್ಣವಾಗಿ ನಮ್ಮ ನಂಬಿಕೆಯನ್ನು ಒಬ್ಬನಮೇಲೆ ಇರಿಸಬಹುದಾದ ಒಬ್ಬ ಸಂಗಾತಿಯ

ಸಂಪರ್ಕವನ್ನು ಹೊಂದಬೇಕು, ಇಲ್ಲವಾದಲ್ಲಿ ನಮ್ಮ ಬದುಕು ಬಹಳ ಕಷ್ಟಕರ. ಯಾರನ್ನೂ ನಂಬಲಾಗದ, ಎಲ್ಲೆಲ್ಲಿಯೂ ವಿರೋಧವನ್ನೇ ಎದುರಿಸುವ ಒಂದು ಪರಿಸರದಲ್ಲಿ ಬದುಕುವುದೆಂದರೆ ಸೆರೆಮನೆಯಲ್ಲಿ ವಾಸಿಸಿದಂತೆ, ಇದು ಅತ್ಯಂತ. ಶೋಚನೀಯ ಸ್ಥಿತಿ ಆದಾಗ್ಯೂ, ನಮ್ಮ ಪ್ರತಿಯೊಂದು ಅತ್ಯಂತ ಕಷ್ಟಕರ ಸನ್ನಿವೇಶಗಳಲ್ಲಿ ಕೂಡಾ ಭಗವಂತ ನಮ್ಮೊಡನಿರುತ್ತಾನೆ, ನಮಗೆ ಸಹಾಯಹಸ್ತ ನೀಡಲು ಸದಾ ಕಾಯುತ್ತಿರುತ್ತಾನೆ. ನಾವು ಅವನ ಕರುಣೆಗೋಸ್ಕರ ಪ್ರಾಮಾಣಿಕವಾಗಿ ಅವನೆಡೆಗೆ ನೋಡಬೇಕು ಅಷ್ಟೇ. ಎಲ್ಲೆಡೆಯೂ ಅವನು ನಮಗೆ ಸಹಾಯಮಾಡಲು ಕಾಯುತ್ತಿರುತ್ತಾನೆ. “ಮಗುವೇ! ನನ್ನೆಡೆಗೆ ನೋಡು ! ಬಾಹ್ಯ ಪ್ರಪಂಚದೊಡನೆ ಅತಿಯಾದ ಸಂಪರ್ಕವನ್ನು ಇಟ್ಟುಕೊಳ್ಳಬೇಡ, ನಾನು ಇಲ್ಲಿ ನಿನಗೆ ಅತ್ಯಂತ ಸನಿಹದಲ್ಲಿದ್ದೇನೆ, ನೀನು ಬಹಿರ್ಮುಖವಾಗಿ ನಿನ್ನ ದೃಷ್ಟಿಯನ್ನು ಹರಿಸಿದ್ದೀಯೆ, ನಿನ್ನ ಪ್ರಜ್ಞೆಯನ್ನು ಬಹಿರ್ಮುಖವಾಗಿ ಹರಿಯ ಬಿಟ್ಟಿದ್ದೀಯೆ, ನಿನ್ನ ಪ್ರಜ್ಞೆಯನ್ನು ಅಂತರ್ಮುಖವಾಗಿ ನಿರ್ದೇಶಿಸು! ನೋಟವನ್ನು ಊರ್ಧ್ವಮುಖವಾಗಿ ಹರಿಸು, ಆವಾಗ ನೀನು ನನ್ನನ್ನು ಕಾಣಬಹುದು, ನೀನು ವಿವಿಧ ಸೌಲಭ್ಯಗಳನ್ನು ಮತ್ತು ಸೇವಕರನ್ನು ಹೊಂದಲು ನಿನ್ನ ದೃಷ್ಟಿಯನ್ನು ಅಧೋಮುಖವಾಗಿ ಹರಿಸಿರುವೆ! ಆದರೆ ನೀನು ಮೇಲಕ್ಕೆ ನೋಡೀದರೆ, ನಿನಗಿಂತ ಉನ್ನತವದ ಬದುಕಿನೆಡೆಗೆ ನೋಡಿದರೆ ಮೇಲಿನ ಲೋಕದಲ್ಲಿ ನನ್ನ ಆಸ್ತಿತ್ತ್ವವನ್ನು ಕಾಣುವೆ, ಮೇಲೆನೋಡು !” ಆದ್ದರಿಂದ ಭಗವಂತನ ಕೃಪೆಯಿಂದ ನಮ್ಮಲ್ಲಿ ಶ್ರದ್ಧೆ ಉಂಟಾಗಬೇಕು. ಈ ಮೂಲಕ ನಾವು ನಮ್ಮಬದುಕಿಗೆ ನಿಜವಾದ ಅರ್ಥವನ್ನು ಕೊಡುವ, ಸ್ವತಂತ್ರವಾದ, ಪ್ರೇಮದ ನೆಲೆಯೆಡೆಗೆ ದೃಢವಾದ ಮುನ್ನಡೆಯನ್ನು ಸಾಧಿಸುತ್ತೇವೆ.

ಪ್ರೇಮ ಎಂದರೇನು? ನಿಜವಾದ ಪ್ರೇಮ ಎಂದರೆ ಇತರರಿಗೋಸ್ಕರ ತ್ಯಾಗಮಾಡುವುದು. ತ್ಯಾಗವು ನಮ್ಮ ಶೋಷಣೆಗೊಳಪಡಬೇಕು ಎಂದು ನಾವು ಯೋಚಿಸಬಾರದು. ತ್ಯಾಗವನ್ನು ಸ್ವೀಕರಿಸುವವರು ಯಾರಾಗಬೇಕು? ಅವರು ನಮ್ಮ ಬಳಗದವರೇ? ಇಲ್ಲ. ನಾವು ನಕಾರಾತ್ಮಕ ಪ್ರಧಾನವಾದ, ತಮಗಾಗಿ,

ತಮ್ಮವರಿಗಾಗಿ ಮತ್ತು ತಂತಮ್ಮ ಹಿತಾಸಕ್ತಿಗೋಸ್ಕರ ತ್ಯಾಗಮಾಡುವವರ ಗುಂಪಿನ ಮಧ್ಯದಲ್ಲಿ ಬದುಕುತ್ತಿದ್ದೇವೆ. ಪ್ರೇಮದ ಮೂಲತತ್ತ್ವವೇ ತ್ಯಾಗ! ಆದರೆ ತ್ಯಾಗ ಯಾರಿಗೋಸ್ಕರ? ಇದರ ಫಲಾನುಭವಿ ಯಾರು? ಪ್ರೇಮವು ಇದರ ಫಲಾನುಭವಿ. ಪ್ರತಿಯೊಬ್ಬನೂ ಪ್ರೇಮದ ಕೇಂದ್ರಕ್ಕೆ ಕಾಣಿಕೆಯನ್ನು ಸಲ್ಲಿಸಬೇಕು, ಮತ್ತು ಅಲ್ಲಿಂದ ಯಾರೂ ದ್ರವ್ಯವನ್ನು ತೆಗೆಯಬಾರದು. "ಬದುಕುವುದಕ್ಕೆ ಸಾಯಬೇಕು" ಈ ರೀತಿಯ ಉತ್ಸುಕ ಮನೋಭಾವದಿಂದ ನಾವು ಒಂದಾಗಿ ನಿಜವಾದ ಪ್ರೇಮ ಮತ್ತು ಸೌಂದರ್ಯದ ಸೇವೆಯನ್ನು ಕೈಗೊಳ್ಳಬೇಕು. ಜಗತ್ತಿನಲ್ಲಿ ಸೌಂದರ್ಯವು ಯಾವಾಗಲೂ ಜಯಶಾಲಿಯಾಗುತ್ತದೆ. ದಿವ್ಯಪ್ರೇಮದ ಪತಾಕೆಯು ಎಲ್ಲೆಡೆಯೂ ಹಾರಾಡುವಂತೆ ಮಾಡಲು ನಾವು ಎಲ್ಲವನ್ನೂ ತ್ಯಾಗಮಾಡೋಣ, ಒಂದು ಹನಿಯಷ್ಟು ದಿವ್ಯಪ್ರೇಮ ಜಗತ್ತಿನ ಮೂಲೆ ಮೂಲೆಯಲ್ಲಿಯೂ ಶಾಂತಿಯನ್ನು ಸ್ಥಾಪಿಸಿ ಎಲ್ಲಾ ದಿಕ್ಕುಗಳಿಗೂ ಅದನ್ನು ಪಸರಿಸಬಲ್ಲದು.

ನಮ್ಮ ಯಸಸ್ಸಿಗೆ ಯಾವುದೇ ಬಾಹ್ಯ ಶಕ್ತಿಯ ಅವಶ್ಯಕತೆಯಿಲ್ಲ. ಅಹಂಕಾರದ ಆವರಣವನ್ನು ಕಳಚಿಹಾಕುವುದೊಂದೇ ನಾವು ಮಾಡಬೇಕಾದ ಕಾರ್ಯ. ಅಹಂಕಾರವು ಕೆಲವು ಅನವಶ್ಯಕ ಬಾಹ್ಯ ವಿಷಯಗಳನ್ನು ಸಂಗ್ರಹಿಸುತ್ತದೆ. ಆ ಸಂಗ್ರಹಣೆಯ ಡಬ್ಬಿಯನ್ನು ವಿಸರ್ಜಿಸಬೇಕು. ಎಲ್ಲಾ ಅಹಂಕಾರ ಪ್ರವೃತ್ತಿಗಳು ನಾಶಗೊಳ್ಳಬೇಕು. ಇದು ಸುಲಭಸಾಧ್ಯವಾದ ವಿಷಯವಲ್ಲ. ಅಹಂಕಾರ ಪ್ರವೃತ್ತಿಯಿಂದ "ನಾನು ದೊಡ್ಡಮನುಷ್ಯ, ಹೆಮ್ಮೆ ಪಡುವ ಬಹಳ ವಿಷಯಗಳು ನನ್ನಲ್ಲಿವೆ" ಎಂದು ದೊಡ್ಡಸ್ತಿಕೆಯನ್ನು ಮೆರೆಯುವುದು ಸುಲಭ, ಆದರೆ ಪರಾತ್ಪರತೆಯ ಮುಂದೆ ನಾನು ಏನೇನೂ ಅಲ್ಲ ಎಂಬ ಭಾವವನ್ನು ತಳೆದು ನಮ್ಮ ಯಥಾರ್ಥ ಸ್ಥಿತಿಯನ್ನು ಅರ್ಥೈಸಿಕೊಂಡು, ನಮ್ಮ ನಿಜವಾದ ಬಣ್ಣವನ್ನು ಬಯಲುಮಾಡಿಕೊಳ್ಳುವುದು ಬಹಳ ಕಷ್ಟದ ಕೆಲಸ. ಅದಾಗ್ಯೂ ನಾವು ಧೈರ್ಯಗೆಡದೇ ನಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮುಂದುವರೆಸಬೇಕು. ಪ್ರಾಮಾಣಿಕರಾಗಿ ನಾವು ಭಗವಂತನನ್ನು ಪ್ರಾರ್ಥಿಸಿದರೆ ತಕ್ಷಣವೇ ಅವನ

ಸಹಾಯ ದೊರಕುತ್ತದೆ. ಆಗ ನಮ್ಮ ಹೃದಯಾಂತರಾಳದಲ್ಲಿ, ಪರಾತ್ಪರನ ಪ್ರೇಮಪೂರ್ವಕ ಸೇವೆಯು ನಿರಂತರವಾಗಿ ನಡೆಯುತ್ತಿರುವ ಪ್ರೇಮದ ಮೂಲಭೂತ ನೆಲೆಯ ಸಂಪರ್ಕವನ್ನು ಕಂಡುಕೊಳ್ಳಬಹುದು ಮತ್ತು ಸ್ವಯಂ ಶ್ರೀ ಕೃಷ್ಣನೇ ಆ ಪ್ರೇಮದ ಕೇಂದ್ರ ಹಾಗೂ ಅವನೇ ಪ್ರೇಮಲೋಕದ ನಿರಂಕುಶ ಪ್ರಭು ಹಾಗೂ ಸುಂದರ ಪರಮಸತ್ಯ ಎಂಬುದನ್ನು ಕೂಡಾ ಮನಗಾಣಬಹುದು.

ಇದು ಭ್ರಮೆ ಅಥವಾ ಕಣ್ಣು ಕಟ್ಟಿನ ಕಥೆಯಲ್ಲ. ಭಗವಂತ ಅಸ್ತಿತ್ತ್ವದಲ್ಲಿದ್ದಾನೆ ಮತ್ತು ಅವನೇ ಶ್ರೀ ಕೃಷ್ಣ. ಶ್ರೀ ಕೃಷ್ಣ, ಪ್ರೇಮದ ಅತ್ಯುನ್ನತ ಕೇಂದ್ರ ಮತ್ತು ಅವನೇ ಪ್ರೇಮದ ಮೂಲ, ಪರಾತ್ಪರತೆ ಒಂದಲ್ಲ ಆದರೆ ಎರಡು. ಕೃಷ್ಣನ ಸ್ತ್ರೀ ಪ್ರತಿರೂಪವೇ ಶ್ರೀಮತಿ ರಾಧಾರಾಣಿ. ಅವನ ಅಚ್ಚು ಮೆಚ್ಚಿನ ನಿಷ್ಠಸೇವಕಿ. ದಿವ್ಯ ಪ್ರೇಮದ ದಂಪತಿಗಳಾಗಿ, ಅಲೌಕಿಕ ದಿವ್ಯ ಧಾಮವಾದ ವೃಂದಾವನದಲ್ಲಿ ಅವರಿಬ್ಬರೂ ನಿರಂತರ ಪ್ರೇಮದ ನಿತ್ಯಲೀಲೆಯಲ್ಲಿ ನಿರತರಾಗಿದ್ದಾರೆ. ಸೃಷ್ಟಿಯಲ್ಲಿ ನಾವು ಕಾಣುವ ಪ್ರತಿಯೊಂದಕ್ಕೂ ಮಾಧುರ್ಯ ಮತ್ತು ಪರಮಾನಂದದ ಶಾಶ್ವತ ನೆಲೆಯಾದ ಈ ಧಾಮವೇ ಮೂಲವಾಗಿರುತ್ತದೆ, ಮತ್ತು ಈ ಪವಿತ್ರ ಧಾಮದಲ್ಲಿ ಶ್ರೀ ರಾಧಾಕೃಷ್ಣರ ಮಧ್ಯೆ ನಡೆಯುವ ನಿರಂತರ ಪ್ರೇಮಲೀಲೆಯಲ್ಲಿ ನಿತ್ಯ ಸೇವಕರಾಗಿ ಪಾಲ್ಗೊಳ್ಳುವುದೇ ಎಲ್ಲ ಜೀವಾತ್ಮರ ಅತ್ಯುನ್ನತ ಪ್ರತೀಕ್ಷೆಯಾಗಬೇಕು. ಆ ಲೋಕಕ್ಕೆ ಮರಳುವ ಹಂಬಲವೇ ನಮ್ಮ ಬದುಕಿನ ಪರಮ ಧ್ಯೇಯವಾಗಬೇಕು ಮತ್ತು ನಾವು ಭಗವತ್ಪ್ರಜ್ಞರಗಬೇಕು.

ಈ ಅಲೌಕಿಕ ಧಾಮದಲ್ಲಿ ಕೃಷ್ಣನೇ ಸರ್ವಾಕರ್ಷಣೀಯ ಕೇಂದ್ರ ಮತ್ತು ಅವನು ಎಲ್ಲರೊಳಗೂ ರಸ ಮತ್ತು ಆನಂದದ ಉತ್ಸಾಹವನ್ನು ಉತ್ಪನ್ನ ಮಾಡುತ್ತಾನೆ. ಇದು ಪರಾತ್ಪರನ ಚಲನೆಯ ಲಕ್ಷಣ. ಇದು ಗುರುತ್ವ ವಿಜ್ಞಾನವಲ್ಲ ಅದರೆ ಚಾಲನೆಯಿಂದ ತುಂಬಿದ ಪ್ರೇರಣಾತ್ಮಕ ತತ್ತ್ವ. ಭಗವಂತನ ಲೀಲೆಯ ಈ ಪ್ರೇರೇಪಣೆಯ ಚಲನೆಯು ಯಾವಾಗಲೂ ಅಪೂರ್ವವಾದ ನವೀನ ಆನಂದವನ್ನು ಉತ್ಪಾದಿಸಿ, ಆಧ್ಯಾತ್ಮಿಕ ಜಗತ್ತಿನ ಪ್ರತಿಯೊಂದು

ಅಣುವಿಗೂ ಉಣಬಡಿಸುತ್ತದೆ, ಮತ್ತು ಆ ಚಲನೆಯೇ "ಪ್ರತಿಪದಮ್ ಪೂರ್ಣಾಮೃತಾಸ್ವಾದಮ್" ಪ್ರತಿಯೊಂದು ಹೆಜ್ಜೆಯೂ ಪ್ರತೀಕ್ಷಣದಲ್ಲಿ ಹೊಸಬಗೆಯ, ಕೊನೆಯಿಲ್ಲದ, ಅಪರಿಮಿತ ಆನಂದವನ್ನು ಉತ್ಪಾದಿಸುತ್ತದೆ.

ನಮ್ಮ ಆಂತರಿಕ ದಾಹವನ್ನು ನಿವಾರಿಕೊಳ್ಳುವ ನಮ್ಮ ನಿರೀಕ್ಷೆ ಇಲ್ಲಿಗೆ ಮುಗಿಯಿತು ಎಂಬುದನ್ನು ನಾವು ವೃಂದಾವನದ ಪವಿತ್ರ ಧಾಮದಲ್ಲಿ ಮನಗಾಣಬಹುದು. ಇಲ್ಲಿ ಅಗತ್ಯವಿರುವ ಒಂದೇ ಒಂದು ವಿಷಯವೆಂದರೆ ನಮ್ಮ ಹೃದಯ ದೇಗುಲದ ಅಧಿಪತಿಯಾಗಿರುವ ಶ್ರೀ ಕೃಷ್ಣನ ಸಂಪರ್ಕವನ್ನು ಹೊಂದುವುದು. ಆ ಲೋಕದಲ್ಲಿ ನಮ್ಮ ಬದುಕಿನ ಪ್ರತಿಕ್ಷಣವೂ ಅಲ್ಲಿಯ ಪರಿಸರದೊಡನೆ ದಿವ್ಯಸಾಮರಸ್ಯದಲ್ಲಿರುತ್ತದೆ ಮತ್ತು ಕೃಷ್ಣಪ್ರಜ್ಞೆಯು ನಮ್ಮನ್ನು ಎಲ್ಲಾ ಭಾಗಗಳಿಂದ ಆಲಿಂಗಿಸಿಕೊಂಡಿರುತ್ತದೆ. ಆ ನೆಲದಲ್ಲಿ ನಾವು ಜೀವಾತ್ಮನೆಂಬ ನೈಜ ಗುರುತಿನೊಂದಿಗೆ ಆತ್ಮನ ಸಾಮರ್ಥ್ಯದ ಪರಮಾವಧಿಗೆ ತಲುಪಿ, ಪರಾತ್ಪರನ ಮಧುರ ಪ್ರೇಮಾಲಿಂಗನದಲ್ಲಿ ದಿವ್ಯ ಪರಮಾನಂದದ ಶಾಶ್ವತ ಬದುಕನ್ನು ಬದುಕುತ್ತೇವೆ.

ಗಮ್ಯವು ನಿರ್ಧಾರವಾಗಿದೆ.ಆದರೆ ಅಲ್ಲಿಗೆ ತಲುಪುವುದು ಹೇಗೆ? ಯಾವಾಗ ಅಲ್ಲಿಗೆ ತಲುಪುತ್ತೇವೆ? ಉನ್ನತ ನೆಲೆಯನ್ನು ಅನುಭವಿಸಲು, ಕಾಣಲು, ಗ್ರಹಿಸಲು ವಿಶ್ವಾಸವೊಂದೇ ಏಕಮಾತ್ರ ಸಾಧನ. ಅದಿಲ್ಲವಾದರೆ ಎಲ್ಲವೂ ನಮಗೆ ನಿರರ್ಥಕ. ಆ ನೆಲೆಯನ್ನು ಅರಿಯಲು ಆಂತರಿಕವಾಗಿ ಎಚ್ಚರಗೊಳ್ಳುವುದು ಅತ್ಯವಶ್ಯಕ. ಉನ್ನತ ಮೂಲದ ಮೂಲಕ ಮಾತ್ರ ನಾವು ಉನ್ನತ ಲೋಕದ ಸಂಪರ್ಕವನ್ನು ಹೊಂದಬಹುದು. ಅಲ್ಲಿಗೆ ಕರೆದೊಯ್ಯಲು ನಮ್ಮ ಸಹಾಯಕ್ಕೆ ನಮ್ಮ ಅಚ್ಚು ಮೆಚ್ಚಿನ ಮಿತ್ರರಾದ ಗುರುಗಳು ಬರುತ್ತಾರೆ. ಅಲ್ಲಿಗೆ ಕರೆದೊಯ್ಯಲು ಸಹಾಯ ಮಾಡುವವರು ಯಾರೇ ಆಗಲಿ ಅವರು ನಮ್ಮ ಗುರುಗಳು. ಅವರೇ ನಮ್ಮನ್ನು ನಿರ್ಧರಿತ ಪ್ರದೇಶಕ್ಕೆ, ಅಂತರಾತ್ಮನ ಕಟ್ಟಕಡೆಯ ಗಮ್ಯವನ್ನು ತಲುಪಲು ಸಹಾಯಮಾಡುವ ಮಾರ್ಗದರ್ಶಕರು. ನಮ್ಮ ಗಮ್ಯವನ್ನು ಕಂಡುಹಿಡಿಯಲು

ಅವರು ನಮಗೆ ಸಹಕರಿಸಿದ್ದಾರೆ. ಅಲ್ಲಿಗೆ ತಲುಪುವ ವಿಧಾನವನ್ನು ಮತ್ತು ಯಾವುದನ್ನು ಹೇಗೆ ಹಂಬಲಿಸಬೇಕೆಂಬುದನ್ನೂ ಅವರು ನಮಗೆ ಕಲಿಸಿಕೊಟ್ಟಿದ್ದಾರೆ. ಅವರು ನಮ್ಮ ಬದುಕಿನ ಸರ್ವಸ್ವವಾಗಿದ್ದಾರೆ. ಅವರೇ ನಮ್ಮ ಬದುಕಿನ ಒಡೆಯರಾಗಿರುತ್ತಾರೆ. ಇಲ್ಲಿ ಒಂದು ದೋಣಿಯಿದೆ, ಮತ್ತು ಗುರುಗಳೇ ಅದರ ನಾವಿಕರಾಗಿದ್ದಾರೆ. ನಾನು ಅವರಿಗೆ ಶರಣಾಗಿದ್ದೇನೆ ಮತ್ತು ಅವರು ನನ್ನನ್ನು ನನ್ನ ಬದುಕಿನ ಕಟ್ಟಕಡೆಯ ಗುರಿಯತ್ತ ಕರೆದೊಯ್ಯುತ್ತಾರೆ.

# ಭಾಗ ೬

# ಶ್ರೀ ಗುರು

# ಆಧ್ಯಾತ್ಮಿಕ ಮಾರ್ಗದರ್ಶಕ

ತಪ್ಪು ಮಾಡುವುದು ಮಾನವನ ಸಹಜ ಸ್ವಭಾವ. ನಾವು ಪರಿಪೂರ್ಣರಲ್ಲದೇ ಇರುವುದರಿಂದ ನಮ್ಮಿಂದ ಪ್ರಮಾದಗಳು ನಡೆಯುವುದು ಸ್ವಾಭಾವಿಕ. ಅದಾಗ್ಯೂ ಯಾರೂ ದೋಷಯುಕ್ತರಾಗಿರಲು ಇಚ್ಛಿಸುವುದಿಲ್ಲ. ಎಲ್ಲರ ಅಂತರ್ಯದಲ್ಲಿರುವ ಒಂದು ಮೂಲಧಾತುವೇ ತಾವು ಪರಿಪೂರ್ಣತೆಯನ್ನು ಸಾಧಿಸಬೇಕೆಂಬ ಆಶಯವನ್ನು ಪ್ರೋತ್ಸಾಹಿಸುತ್ತದೆ. ಅದಿಲ್ಲದಿದ್ದರೆ ನಮ್ಮಲ್ಲಿ ಆ ಅನಿಸಿಕೆಯೇಇರುತ್ತಿರಲಿಲ್ಲ. ಪರಿಪೂರ್ಣತೆಯೆಡೆಗೆ ನಮ್ಮಲ್ಲಿರುವ ಆಶಯ ನಿಶ್ಚಯವಾಗಿಯೂ ಬಹು ದುರ್ಬಲ ಮತ್ತು ನಿಯಮಿತವಾದುದು; ಇಲ್ಲವಾದರೆ ನಾವು ಅ ಗುರಿಯನ್ನು ಸಾಧಿಸಿಬಿಡುತ್ತಿದ್ದೆವು. ಪರಿಪೂರ್ಣತೆಯನ್ನು ಸಾಧಿಸಲು ನಮ್ಮಲ್ಲಿರುವ ಸಾಮರ್ಥ್ಯದ ಕೊರತೆ ಮತ್ತು ಆಶಯದ ಪರಿಮಿತಿಯೇ ಒಬ್ಬ ಗುರು ಅಥವಾ ಮಾರ್ಗದರ್ಶಕನನ್ನು ಹೊಂದುವ ಅವಕಾಶವನ್ನು ನಮಗೆ ಕಲ್ಪಿಸುತ್ತದೆ.

ಸಹಾಯದ ಅವಶ್ಯಕತೆಯಿಲ್ಲದಿರುತ್ತಿದ್ದರೆ, ಅದೂ ಕೂಡಾ ತನಗಿಂತ ಉನ್ನತವಾದ ಮೂಲದಿಂದ, ಅಪರಿಪೂರ್ಣವು ಅಪರಿಪೂರ್ಣವಾಗಿರುತ್ತಿರಲಿಲ್ಲ. ಒಂದುವೇಳೆ ಪರಿಪೂರ್ಣತೆಯು ತನ್ನನ್ನು ತಾನು ಸ್ವಯಮ್ ಪರಿಪೂರ್ಣನೆಂದು ಪ್ರತಿಪಾದಿಸದಿದ್ದರೆ, ಮತ್ತು, ಇತರರ, ವಿಶೇಷವಾಗಿ ತನ್ನ ಸಾಮ್ಯತೆಯಿರುವ ಮಾನವರ ಸಹಾಯಕ್ಕೆ ಮುಂದಾಗದಿದ್ದರೆ, ತಾನು ಪರಿಪೂರ್ಣನಾಗಿರುವುದಿಲ್ಲ. ಹಾಗಾಗಿ ಪರಿಪೂರ್ಣತೆಯೆಡೆಗೆ ಅಥವಾ ಪರಾತ್ಪರ ಸತ್ಯದೆಡೆಗೆ ಮಾರ್ಗದರ್ಶನದ

ಕ್ರಿಯೆಯು ಅಗತ್ಯವಾಗಿ ಪರಾತ್ಪರನ ಚಟುವಟಿಕೆಯಾಗಿದೆ ಮತ್ತು ಈ ಚಟುವಟಿಕೆಯನ್ನು ತಾನು ತನ್ನ ಆಪ್ತ ಪ್ರತಿನಿಧಿಗಳ ಮೂಲಕ ಪ್ರಕಟಿಸುತ್ತಾನೆ. ಆ ಪ್ರತಿನಿಧಿಯೇ ಶ್ರೀ ಗುರು ಅಥವಾ ಅಧ್ಯಾತ್ಮಿಕ ಮಾರ್ಗದರ್ಶಕ.

ಪರಾತ್ಪರನ ಅನ್ವೇಷಕನಿಗೆ, ಗುರುವಿಗೆ ಶರಣಾಗುವುದು ಅನಿವಾರ್ಯ! ಆದರೆ, "ನಮ್ಮಿಂದ ವೈಜ್ಞಾನಿಕ ಪರಿಶೋಧನೆಗಳು ಸಾಧ್ಯವಾಗುವುದದರೆ, ಉನ್ನತ ಆಧ್ಯಾತ್ಮಿಕ ಜ್ಞಾನದ ಪರಿಶೋಧನೆ ನಮ್ಮೊಳಗಿಂದಲೇ ವಿಕಾಸವಾಗುವುದು ಏಕೆ ಸಾಧ್ಯವಿಲ್ಲ" ಎಂದು ವಿಚಾರಮಾಡುವ ಜನರ ವರ್ಗವೂ ಇದೆ. ಅಂತಹ ಜನರು, "ಪರಾತ್ಪನೊಬ್ಬನೇ ನಿರಂಕುಶ ಪ್ರಭು, ಉಳಿದ ಎಲ್ಲವೂ, ನಮ್ಮನ್ನೂ ಸೇರಿಸಿ, ಆ ಸರ್ವಜ್ಞನ ಸರ್ವವ್ಯಾಪಕ ದೃಷ್ಟಿಯ ಆಧೀನದಲ್ಲಿರುವ ಕೇವಲ ಸೂಕ್ಷ್ಮಾತಿಸೂಕ್ಷ್ಮ ತುಣುಕುಗಳು ಮಾತ್ರ" ಎಂಬ ಪರಾತ್ಪರ ಜ್ಞಾನದ ಮೂಲಭೂತ ಲಕ್ಷಣವನ್ನು ಅರಿಯದ ಅಜ್ಞಾನಿಗಳು. ಕಣ್ಣುಗಳು ಮನಸ್ಸನ್ನು ನೋಡುವುದು ಎಂದಿಗೂ ಸಾಧವಿಲ್ಲ, ಆದರೆ ಮನಸ್ಸು ಕಣ್ಣುಗಳ ಬಗ್ಗೆ ಯೋಚಿಸಿದಾಗ ಮನಸ್ಸಿನ ಸಂಕಲ್ಪದಿಂದಾಗಿ ಕಣ್ಣುಗಳಿಗೆ ಮನಸ್ಸಿನ ಸಂಪರ್ಕ ಉಂಟಾಗುವುದು ಸಾಧ್ಯ. ಪರಾತ್ಪರನೊಡನೆ ನಮ್ಮ ಸಂಪರ್ಕವು ಪ್ರಧಾನವಾಗಿ ಅವನ ಮಧುರ ಸಂಕಲ್ಪವನ್ನು ಅವಲಂಬಿಸಿದೆ. ಪರಾತ್ಪರ ಜ್ಞಾನವು ತನ್ನ ಆಪ್ತ ಪ್ರತಿನಿಧಿಗಳ ಮೂಲಕ ವಿತರಿಸಲ್ಪಡಲು ಇಚ್ಛಿಸುವುದರಿಂದ, ನಾವುಗಳು ಅವನ ಪ್ರತಿನಿಧಿಯಾದ ಶ್ರೀ ಗುರುವಿನ ಕೃಪೆಯನ್ನು ಸಂಪೂರ್ಣ ಅವಲಂಬಿಸಬೇಕಾಗುತ್ತದೆ.

ನಮ್ಮ ಮನವ ಸಮಾಜ, ಶ್ರೇಷ್ಠವಾದ ಸುಸಂಸ್ಕೃತ ವ್ಯವಸ್ಥೆಯನ್ನು ಹೊಂದಿದ್ದರೂ ಅದು ಕೂಡಾ ಪರಾತ್ಪರನ ಪ್ರೇರಣೆಯ ಸೂಕ್ಷ್ಮಾತಿಸೂಕ್ಷ್ಮ ಅಗಣನೀಯ ಭಾಗವಾಗಿದೆ. ವೇದಗಳ ನೇರ ಹಾಗೂ ಸಕಾರಾತ್ಮಕ ವಿಧಾನವನ್ನು ಹೊರತುಪಡಿಸಿ ಸರ್ವತಂತ್ರ ಸ್ವತಂತ್ರ, ಸ್ವೇಚ್ಛ, ಅಪರಿಮಿತತೆಯ ಅಲೌಕಿಕ ಜ್ಞಾನದ ಬಗ್ಗೆ ನಮ್ಮದೇ ಆದ ವಿಚಾರವನ್ನು ವಿಕಸಿಸಿ ವಿಸ್ತರಿಸುವ ಧೈರ್ಯವನ್ನು

ಹೇಗೆ ತಾನೇ ಮಾಡಬಹುದು? ತನ್ನ ಆಪ್ತ ಪ್ರತಿನಿಧಿಗಳ ಮೂಲಕ ಮಾತ್ರ ತನ್ನನ್ನು ತಾನು ಪ್ರದಾನಿಸುವ ಹಕ್ಕನ್ನು ಕಾದಿರಿಸಿ ಇಟ್ಟುಕೊಂಡಿರುವ ನಿರಂಕುಶ ಸರ್ವಶಕ್ತ ಸರ್ವಜ್ಞನ ಮುಂದೆ ಮಹಾ ಮಹಾ ಜ್ಞಾನಿಗಳು, ಅತಿದೊಡ್ಡ ಪಂಡಿತರೆನಿಸಿಕೊಂಡವರು ಅಗಣನೀಯ ಕುಬ್ಜರಾಗಿ ಸಿದ್ಧಪಟ್ಟಿದ್ದಾರೆ.

ಹೇಗಿದ್ದರೂ ನಾವು ನಮ್ಮ ತಿಳುವಳಿಕೆಯ ಮಹತ್ತಮ ಸಾಮರ್ಥ್ಯ ಮತ್ತು ಪ್ರಾಮಾಣಿಕತೆಯ ಸಹಾಯದಿಂದ, ಆಧ್ಯಾತ್ಮಿಕ ಪ್ರತಿನಿಧಿಗಳೆಂದು ಸೋಗುಹಾಕುವ ವಂಚಕರ ಬಲೆಗೆ ಬೀಳದಂತೆ ಎಚ್ಚರವಹಿಸಬೇಕು. "ಏಕಪ್ರಕಾರದ ಪುಕ್ಕಗಳನ್ನು ಹೊಂದಿರುವ ಪಕ್ಷಿಗಳು ಒಂದೇ ಕಡೆ ಗುಂಪುಗೂಡುತ್ತವೆ" ಎನ್ನುವ ಹಾಗೆ ನಮ್ಮ ಪೂರ್ವ ಸಂಸ್ಕಾರಗಳ ಪ್ರತಿಕ್ರಿಯೆಗಳಿಗನುಗುಣವಾಗಿ ನಮ್ಮ ಪ್ರಸ್ತುತ ಜೀವನ ನಿರ್ದೇಶಿಲ್ಪಟ್ಟಿರುವುದರಿಂದ, ಈ ವಿಷಯದಲ್ಲಿ ನಮಗೆ ನಾವು ಹೆಚ್ಚಿನ ಸಹಾಯ ಮಡಿಕೊಳ್ಳಲಾರೆವು. ಸಾಮಾನ್ಯವಾಗಿ ನಮ್ಮ ಅಭ್ಯಾಸಗಳಿಗೆ ನಾವೂ ಆಧೀನರಾಗಿದ್ದರೂ, ಒಂದು ನಿರ್ದಿಷ್ಟ ಹಂತದವರೆಗೆ ನಮಗೆ ಮುಕ್ತ ಆಯ್ಕೆಯ ಸಾಧ್ಯತೆಯಿರುತ್ತದೆ, ವಿಶೇಷವಾಗಿ ಮಾನವ ಜನ್ಮದಲ್ಲಿ.ಇಲ್ಲದಿದ್ದರೆ ತಿದ್ದುಪಡಿ ಅಸಾಧ್ಯವಾಗುತ್ತದೆ ಮತ್ತು ಶಿಕ್ಷೆ ಕೇವಲ ಪ್ರತೀಕಾರವಾಗುತ್ತದೆ. ಸತ್ಯವು ತನ್ನನ್ನು ತಾನೇ ಪ್ರತಿಪಾದಿಸಿಕೊಳ್ಳಬಲ್ಲುದು, ತನ್ನ ಸಕಾರಾತ್ಮತೆಯನ್ನು ರುಜುವಾತುಪಡಿಸಲು ಬೆಳಕಿಗೆ ಕತ್ತಲೆಯ ಸಹಾಯದ ಅವಶ್ಯಕತೆಯಿರುವುದಿಲ್ಲ. ಇತರ ಎಲ್ಲ ಬೆಳಕಿನ ಮಾಧ್ಯಮಗಳ ಮೇಲೆ ಸೂರ್ಯನು ತನ್ನ ಸಾರ್ವಭೌಮತೆಯನ್ನು ತಾನೇ ಸ್ಥಾಪಿಸಬಲ್ಲ. ಪಕ್ಷಪಾತವಿಲ್ಲದೇ ವಾಸ್ತವಿಕತೆಯನ್ನು ವೀಕ್ಷಿಸಲು ತೆರೆದ ಪ್ರಾಮಾಣಿಕ ಕಣ್ಣುಗಳಿಗೆ ಇತರ ಎಲ್ಲಾ ಲೋಕವಿಖ್ಯಾತ ವಿದ್ವಾಂಸರಿಂದ ಶ್ರೀ ಗುರುವು ಅತ್ಯುನ್ನತ ಸ್ಥಾನದಲ್ಲಿ ಗೋಚರಿಸುತ್ತಾನೆ. ಶ್ರೀ ಗುರುವು ಪ್ರಧಾನವಾಗಿ ಎರಡು ತರಹ ಪ್ರಕಟವಾಗುತ್ತಾರೆ. ಆಂತರ್ಯದಿಂದ ನಿರ್ದೇಶಕರಾಗಿ ಮತ್ತು ಬಾಹ್ಯವಾಗಿ ಉಪದೇಶಕರಾಗಿ. ಪರಾತ್ಪರನ ಈ ಎರಡೂ ಚಟುವಟಿಕೆಗಳು, ಪ್ರತ್ಯೆಕ ಆತ್ಮನು ತನ್ನ ಜೀವಿತದ ಕಟ್ಟಕಡೆಯ ಗುರಿಯನ್ನು ತಲುಪಲು ಸಹಾಯ ಮಾಡುತ್ತವೆ.

# ದಿವ್ಯ ಸಮನ್ವಯ

ನಮ್ಮ ಪತಿತ ಸ್ಥಿತಿಯಲ್ಲಿ ನಮ್ಮ ಆಂತರ್ಯದಲ್ಲಿರುವ ನಿರ್ದೇಶಕನನ್ನು ಅನುಸರಿಸಲು ನಾವು ವಿಫಲರಾಗುವುದರಿಂದ, ಬಾಹ್ಯ ರೂಪದಲ್ಲಿ ಪ್ರಕಟವಾಗುವ ಬೋಧಕನ ದಯಾಪೂರ್ಣ ವ್ಯಕ್ತಿತ್ವವೇ ನಮ್ಮ ಜೀವನದ ಕಟ್ಟಕಡೆಯ ಗುರಿಯನ್ನು ತಲುಪುವ ಭರವಸೆ ಮತ್ತು ಏಕೈಕ ಸಹಾಯವಾಗಿರುತ್ತದೆ. ಆದರೆ, ನಮ್ಮ ಅಂತರಂಗದಲ್ಲಿ ಮನೆಮಾಡಿರುವ ಮಾರ್ಗದರ್ಶಕ ಗುರುವಿನ ಕೃಪೆಯೇ ನಾವು ಬಾಹ್ಯರೂಪದಲ್ಲಿ ಪ್ರಕಟವಾಗಿರುವ ಬೋಧಕ ಗುರುವನ್ನು ಗುರುತಿಸಲು ಸಹಾಯ ಮಡುತ್ತದೆ ಮತ್ತು, ಆಮೂಲಕ ಅವರ ಪಾದಕಮಲಗಳಲ್ಲಿ ನಮ್ಮನ್ನು ನಾವು ಸಮರ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ.

ಗುರುವಿಗೆ ತನ್ನನ್ನು ತಾನು ಸಮರ್ಪಿಸಿಕೊಂಡ ಆದರ್ಶ ಶಿಷ್ಯನೊಬ್ಬ ತನಗೆ ದೊರಕಿದ ಸೌಭಾಗ್ಯವು ಭಗವಂತನ ಕೃಪಾಪೂರ್ಣ ಅನುಮತಿಯಿಂದ ದೊರಕಿದೆಯೇ ಹೊರತು ಇದು ತನ್ನ ಹಕ್ಕಿನ ಮೂಲಕ ತಾನು ಪಡೆದಿದ್ದಲ್ಲ ಎಂಬ ಸತ್ಯದ ಬಗ್ಗೆ ಸದಾ ಜಾಗರೂಕನಾಗಿರಬೇಕು. ಭಗವಂತನಿಂದ ಮುಕ್ತ ಸಹಾಯವನ್ನು ಪಡೆಯಲು ಸದಾ ಸಿದ್ಧರಾಗಿರುವುದು ನಮ್ಮ ಸ್ವಭಾವಜನ್ಯ ಲಕ್ಷಣವಾಗಿರುತ್ತದೆ. ಹಾಗಾಗಿ ನಾವು ಪ್ರತ್ಯೇಕ ಆತ್ಮಗಳು ಎಂದೆಂದಿಗೂ ಆಪರಾತ್ಪರನ ಸಮಾನಸ್ಥಿತಿಯನ್ನು ಹೊಂದಲು ಸಾಧ್ಯವಿಲ್ಲ ಎಂಬುದನ್ನು ಈ ಮೂಲಕ ಅರ್ಥೈಸಿಕೊಳ್ಳಬಹುದು. ಸ್ವತಃ ಒಬ್ಬ ಆತ್ಮಸಕ್ಷಾತ್ಕಾರ ಹೊಂದಿದ ಅಥವಾ ಮುಕ್ತನಾದ ಪ್ರತ್ಯೇಕ ಆತ್ಮನೂ ಕೂಡಾ ಭಗವಂತನಲ್ಲಿ ಒಂದಾಗಲಾರ. ಭಗವಂತನಲ್ಲಿ ಒಂದಾಗುವ ತಪ್ಪುಕಲ್ಪನೆಯು, ಪರಾತ್ಪರನ ಶಾಶ್ವತವಾದ, ಆನಂದಮಯ, ಆಧ್ಯಾತ್ಮಿಕ ನಿವಾಸದ ಪ್ರಕಾಶಮಯ ಹೊರಪದರದ ಆಲಸ್ಯಮಯ ಏಕೀಭಾವದಿಂದ ಪರಿಚಯಿಸಲ್ಪಟ್ಟಿದೆ. ಯಥಾರ್ಥವಾಗಿ, ಪ್ರತ್ಯೇಕ ಆತ್ಮನು ಭಗವಂತನ ಒಂದು ನಿರ್ದಿಷ್ಟ ಶಕ್ತಿಯ ಮಧ್ಯಮ ಶ್ರೇಣಿಯಲ್ಲಿ ಒಂದಂಶವನ್ನು ಮಾತ್ರ ಹೊಡಿರುವುದರಿಂದ, ಅವನು ಎರಡು ಭಾಗಗಳಿಗೂ ಪರಿವರ್ತಿತನಾಗುವ ಅರ್ಹತೆಯನ್ನು ಹೊಂದಿರುತ್ತಾನೆ. ಅವನು ಭಗವಂತನಿಂದ ಗುಣ ಮತ್ತು ಪ್ರಮಾಣಗಳೆರಡರಲ್ಲೂ ಭಿನ್ನನಾಗಿರುತ್ತಾನೆ.

ಹಾಗಾಗಿ ಅವನು ಸಂಪೂರ್ಣವಾಗಿ ಭಗವಂತನನ್ನು ಅವಲಂಬಿಸಿರುವ ಒಂದು ಅಸ್ತಿತ್ವ ಮಾತ್ರವಾಗಿದ್ದಾನೆ. ಒಂದೇ ಮಾತಲ್ಲಿ ಸ್ಪಷ್ಟವಾಗಿ ಹೇಳುವುದಾದರೆ, ಪರಾತ್ಪರ ನಿರಂಕುಶ ಪ್ರಭು ಶ್ರೀ ಕೃಷ್ಣ ಏಕೈಕ ಒಡೆಯ ಮತ್ತು ಪ್ರತ್ಯೇಕ ಆತ್ಮ ಅಥವಾ ಜೀವಾತ್ಮ ಅವನ ನಿರಂತರ ಸ್ವಭಾವಜನ್ಯ ಸೇವಕ.

ಜೀವಾತ್ಮನಿಗೆ ಭಗವಂತನೊಡನೆ ಇರುವ ಇಂತಹ ಒಂದು ನಿರಂತರ ಸಂಬಂಧ ಆರೋಗ್ಯಪೂರ್ಣವಾಗಿರುತ್ತದೆ. ಮುಕ್ತವಾದ ಆಯ್ಕೆ ಮತ್ತು ಅಪಾರವಾದ ಸಕಾರಾತ್ಕ್ಮಕ ಪ್ರಯೋಜನವಿರುವುದರಿಂದ ಅವನಿಗೆ ದಾಸ್ಯದ ಅತಂಕವಿರುವುದಿಲ್ಲ. ಶರಣಾಗತಿಯು ಅವನ ಬದುಕಿನ ಸ್ವಾತಂತ್ರ್ಯಕ್ಕೆ ಮತ್ತು ತನ್ನ ಪ್ರತ್ಯೇಕತೆಗೆ ಹಾನಿಯನ್ನುಂಟುಮಾಡುವುದಿಲ್ಲ, ಆದರೆ ಅವುಗಳ ಇನ್ನೂ ಹೆಚ್ಚಿನ ಬೆಳವಣಿಗೆಗೆ ಸಹಾಯವಾಗುತ್ತದೆ. ಆತ್ಮನ ಪ್ರತ್ಯೇಕ ಸ್ವಾತಂತ್ರ್ಯ ಮತ್ತು ಆಸಕ್ತಿ, ಭಗವಂತನ ಪ್ರತ್ಯೇಕ ಸ್ವಾತಂತ್ರ್ಯ ಮತ್ತು ಆಸಕ್ತಿಯ ಅಂಶಗಳೇ ಆಗಿರುವುದರಿಂದ, ಮತ್ಸ್ಯಗಳು ನೀರಿನೊಳಗೆ ಸ್ವಚ್ಛಂದವಾಗಿ ಬದುಕುವಂತೆ; ಒಂದು ಆರೋಗ್ಯಕರ, ಸುರಕ್ಷಿತ ಪರಿಸರದಲ್ಲಿ ವನ್ಯಮೃಗಗಳು ಸ್ವಚ್ಛಂದವಾಗಿ, ನಿರ್ಭಯತೆಯಿಂದ ಬದುಕುವಂತೆ; ಜೀವಾತ್ಮನು ಪರಾತ್ಪರನ ಧಾಮದಲ್ಲಿ ಸಂಪೂರ್ಣವಾಗಿ ತನ್ನ ಸ್ವಗೃಹದ, ನೈಜ ಸೌಲಭ್ಯವನ್ನು ಅನುಭವಿಸುತ್ತಾ, ನಿರಾತಂಕ ಬದುಕಿನ ನಿಜವಾದ ಆನಂದವನ್ನು ಅನುಭವಿಸುತ್ತಾನೆ.

ಶ್ರೀ ಗುರುವು ಪ್ರತ್ಯೇಕವಾಗಿ ಸ್ವತಃ ಭಗವಂತನಂತೆಯೇ ಅಲ್ಲದಿದ್ದರೂ, ಅವರು ಭಗವಂತನ ಆಧ್ಯಾತ್ಮಿಕ ಶಕ್ತಿಯ ಸತ್ವಪೂರ್ಣ ಸಾರಾಂಶವನ್ನು ಸಂಪೂರ್ಣವಾಗಿ ಪ್ರತಿನಿಧಿಸುತ್ತಾರೆ, ಮತ್ತು ಭಗವಂತನ ಅತ್ಯುತ್ತಮಸೇವೆಯನ್ನು, ಅವನ ಸಹಾಯವನ್ನು ಮತ್ತು ಅವನ ಬಗ್ಗೆ ಅತ್ಯುನ್ನತ ತಿಳುವಳಿಕೆಯನ್ನು ಮೈಗೂಡಿಸಿಕೊಂಡಿರುತ್ತಾರೆ. ಭಗವಂತನ ಅತ್ಯಂತ ಸಮರ್ಥ ಸೇವಕನಾಗಿದ್ದು, ಶ್ರೀ ಗುರುವು, ದಾರಿತಪ್ಪಿದ ಜೀವಾತ್ಮರ ಹಿತಾಸಕ್ತಿಯನ್ನು ಪರಿಗಣಿಸಿ ಅವರನ್ನು ಮತ್ತೆ ಪೂರ್ವಸ್ಥಿತಿಗೆ ತರಲು ಭಗವಂತನಿಂದ ವಿಶೇಷವಾಗಿ ಶಕ್ತಗೊಂಡಿರುತ್ತಾರೆ.

ಹಾಗಾಗಿ ಶ್ರೀ ಗುರುವು ಈ ಕ್ಲೇಶಮಯ ಮರ್ತ್ಯಲೋಕದಲ್ಲಿ ಅಮರತ್ವದ ಮತ್ತು ನಿರಂತರ ಆನಂದದ ಭರವಸೆಯನ್ನು ಪ್ರದಾನಿಸುವ ಅಮರಲೋಕದ ಪ್ರತಿನಿಧಿಯಾಗಿರುತ್ತಾರೆ. ಈ ಜಗತ್ತಿನಲ್ಲಿ ಶ್ರೀ ಗುರುವಿನ ಆವಿರ್ಭಾವವು ಸಂಕಷ್ಟದಲ್ಲಿರುವ ಜೀವಾತ್ಮರಿಗೆ ಅತ್ಯಂತ ಶುಭದಾಯಕವಾದುದು ಮತ್ತು ಅತ್ಯಂತ ಆನಂದದಾಯಕವಾದುದು. ಅವರ ಆವಿರ್ಭಾವವನ್ನು, ಮರುಭೂಮಿಯಲ್ಲಿ ದಾರಿತಪ್ಪಿದ ಪ್ರಯಾಣಿಕನಿಗೆ ಸೂಕ್ತಮಾರ್ಗದರ್ಶನ ಮಾಡಬಲ್ಲ ಪೂರ್ವದಿಕ್ಕಿನಲ್ಲಿ ಪ್ರಾತಃಕಾಲದಲ್ಲಿ ಉದಯಿಸುವ ನಕ್ಷತ್ರಕ್ಕೆ ಹೋಲಿಸಬಹುದು. ಒಬ್ಬ ದೇಶಭಕ್ತ ಅಥವಾ ಜನನಾಯಕ, ಐಹಿಕ ಬದುಕಿನಲ್ಲಿ ಹಾಸುಹೊಕ್ಕಾಗಿರುವ ಸಂಕಟ ಮತ್ತು ದುಃಖಗಳನ್ನು ಶಮನಗೊಳಿಸುವ ತನ್ನ ಉದ್ವೇಗಪೂರ್ಣ ಹಾಗೂ ನಿಷ್ಪ್ರಯೋಜಕ ಪ್ರಯತ್ನದಿಂದ, ತಿಳಿಗೇಡಿಯಾದ ವೈದ್ಯನೊಬ್ಬ ತನ್ನ ಅಸಂಬದ್ಧ ಆರೈಕೆಯಿಂದ ದುರದೃಷ್ಟವಂತ ರೋಗಿಯ ಸಂಕಟವನ್ನು ಹೆಚ್ಚಿಸುವ ಹಾಗೆ. ಅಸಹಾಯಕ ಪ್ರಜೆಗಳ ಸಂಕಟಗಳನ್ನು ಹೆಚ್ಚಿಸಬಲ್ಲರೇ ಹೊರತು ಅವರ ಸಂಕಷ್ಟಕರ ಬದುಕಿಗೆ ಶಾಶ್ವತ ಪರಿಹಾರವನ್ನು ಎಂದಿಗೂ ನೀಡಲಾರರು.

ಶ್ರೀ ಗುರುವಿನ ಕೃಪಾಮಯ ಹಸ್ತದ ಮೃದು ಸ್ಪರ್ಷವು, ಎಲ್ಲಾ ಅಳುತ್ತಿರುವ ಕಣ್ಣುಗಳಿಂದ ಎಡೆಬಿಡದೇ ಹರಿಯುತ್ತಿರುವ ಕಣ್ಣೀರನ್ನು ಒರಸಿ ಅವರಿಗೆ ಶಾಶ್ವತವಾದ ಸಾಂತ್ವನವನ್ನು ನೀಡಬಲ್ಲದು.

ಈ ಬಡ ಅಸಹಾಯಕ ಆತ್ಮ ಶ್ರೀ ಗುರುದೇವರ ಕೃಪೆಯನ್ನು ಎಂದು ಅರ್ಥೈಸಿಕೊಂಡಾನು !

ಸ್ವಾಮಿ ಶ್ರೀಧರರ ದಿವ್ಯ ಸಂದೇಶಗಳನ್ನು ಹೊತ್ತ ಈ ಸಣ್ಣ ಆವೃತ್ತಿ ಕನ್ನಡದಲ್ಲಿ ಪ್ರಕಟವಾಗುತ್ತಿರುವ ಅವರ ಮೊತ್ತ ಮೊದಲನೇಯ ಪುಸ್ತಕ.

ಹದಿನೈದನೇ ಶತಮಾನದಲ್ಲಿ ಆಧ್ಯತ್ಮಿಕ ಭಾವಪರವಶತೆಯ ಮೂರ್ತಿಯಾಗಿ ಅವತರಿಸಿದ ಶ್ರೀ ಚೈತನ್ಯ ಮಹಾಪ್ರಭುಗಳ ಸಿದ್ಧಾಂತವನ್ನು ಅರ್ಥಪೂರ್ಣವಾಗಿ, ಪರಿಣಾಮಕಾರಿಯಾಗಿ ಹಾಗೂ ಚಿತ್ತಾಕರ್ಷಕವಾದ ರೀತಿಯಲ್ಲಿ ಸ್ವಾಮಿ ಶ್ರೀಧರರು ಇಲ್ಲಿ ವರ್ಣಿಸಿದ್ದಾರೆ. ಈ ಸಿದ್ಧಾಂತವು ಯಾವುದೇ ರೀತಿಯ ಧಾರ್ಮಿಕ ಅಂಧಶ್ರದ್ಧೆ ಅಥವಾ, ಅಮಾಯಕ ಜನರನ್ನು ದಾರಿತಪ್ಪಿಸುವ ಊಹಾತ್ಮಕ ಜನಪ್ರಿಯ ಆಧ್ಯಾತ್ಮಿಕತೆಯನ್ನು ಆಧರಿಸಿದುದಲ್ಲ. ಅನಾದಿಕಾಲದಿಂದಲೂ ಪ್ರಚಲಿತವಿರುವ, ಆಧ್ಯಾತ್ಮಿಕ ಆನಂದದ ಅನುಭವಕ್ಕೆ ಅತ್ಯಂತ ಅನುಕೂಲಕರವಾದ ಭಗವಂತನ ಪ್ರೇಮಪೂರ್ವಕ ಭಕ್ತಿಸೇವೆಯನ್ನು ಬೋಧಿಸುವ ಅಪೌರುಷೇಯ ಗ್ರಂಥಗಳಾದ ವೇದಶಾಸ್ತ್ರಗಳನ್ನು ಆಧರಿಸಿದ ಸಿದ್ಧಾಂತವಾಗಿದೆ.

ದಿವ್ಯ ಸಮನ್ವಯತೆಯು ಭಕ್ತಿಯೋಗದ ಪ್ರಧಾನ ಧ್ಯೇಯವನ್ನು ಪರಿಚಯಿಸುತ್ತದೆ. ಈ ವಿಷಯದಬಗ್ಗೆ ಹಾಗೂ ಶ್ರೀಧರ ಮಹಾರಾಜರ ಇನ್ನೂ ಇತರ ಪುಸ್ತಕಗಳ ಬಗ್ಗೆ ಹೆಚ್ಚಿನ ಆಸಕ್ತಿಯಿರುವ ಓದುಗ ಮಹಾಶಯರು, ಕಾರ್ಯದರ್ಶಿಯವರನ್ನು ಕೆಳಗೆ ನೀಡಿದ ವಿಳಾಸದಲ್ಲಿ ಪತ್ರಮುಖೇನ, ಈಮೇಲ್ ಮುಖಾಂತರ ಅಥವಾ ದೂರವಾಣಿಯ ಮೂಲಕ ಸಂಪರ್ಕಿಸಬಹುದು

ಪರಾತ್ಪರ ಸತ್ಯದ ಪ್ರಾಮಾಣಿಕ ಅನ್ವೇಷಕರಿಗೆ, ದಿವ್ಯ ಸಮನ್ವಯದ ಸಾರವು, ತಮ್ಮ ಗುರಿಯನ್ನು ತಲುಪಲು ಪರಿಣಾಮಕಾರಿ ಹಾಗೂ ಸಕಾರಾತ್ಮಕ ಸಾಧನವಾಗಬಲ್ಲದು ಎಂಬುದು ನಮ್ಮ ಅಂತರಂಗದ ಆಶಯವಾಗಿದೆ

ಅನುವಾದಕರು



ಎಲ್ಲಿ ಪ್ರತಿಯೊಂದು ನುಡಿಯೂ ಸುಮಧುರ ಸಂಗೀತವೋ; ಪ್ರತಿಯೊಂದು ನಡೆಯೂ ಮನಮೋಹಕ ನಾಟ್ಯವೋ . . . . . . ಅಂತಹದೊಂದು ನೆಲ ಆಸ್ತಿತ್ವದಲ್ಲಿದೆ, ಅಲ್ಲಿ ಪರಮ ಪ್ರಭುವು ಶರಣಾಗತ ಜೀವಾತ್ಮರೊಡನೆ ಪ್ರೇಮಕ್ರೀಡೆಯಲ್ಲಿ ನಿತ್ಯನಿರತನಾಗಿರುತ್ತಾನೆ.

ನಾವೆಲ್ಲರೂ ಆ ನೆಲದ ಮಣ್ಣಿನ ಮಕ್ಕಳು, ಮತ್ತು ದಿವ್ಯ ಸಮನ್ವಯದ ಆ ನೆಲೆಗೆ ಮರಳುವುದೊಂದೇ ನಮ್ಮ ಧ್ಯೇಯವಾಗಬೇಕು – ಮರಳಿ ಭಗವಂತನೆಡೆಗೆ, ಮರಳಿ ಮನೆಗೆ.

GOSAI
PUBLISHERS